ಪ್ರಕಾಶನ-೫

ಹೊಸ ಕೃತಿ!

ಕೃದಂತ ರೂಪ ಕೋಶ

(ಶಾಲೆ-ಕಾಲೇಜುಗಳ ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತ)

ಕೆ. ಎಸ್. ಕಣ್ಣನ್

ಭಾರತೀ ಪ್ರಕಾಶನ
ಬೆಂಗಳೂರು—560041

ಈ ಕೃತಿಯಲ್ಲಿಯ 360 ಧಾತುಗಳಿಗೂ ರೂಪಗಳನ್ನು ಕೊಟ್ಟಿರುವ ಹತ್ತು ಕೃತ್ತುಗಳು ಮತ್ತು ಅವುಗಳ ಸಂಖ್ಯೆ–ಅರ್ಥಗಳು

ವಿಧ್ಯರ್ಥಕ

(1) ತವ್ಯತ್ / ತವ್ಯ–ಕರ್ತವ್ಯಂ–ಮಾಡ(ಲ್ಪಡ)ಬೇಕಾದುದು

(2) ಅನೀಯರ್–ಕರಣೀಯಂ–ಮಾಡ(ಲ್ಪಡ)ಬೇಕಾದುದು

(3) ಯ[ಕ್ಯಪ್ / ಣ್ಯತ್ / ಯತ್]-ಕಾರ್ಯಂ–ಮಾಡ(ಲ್ಪಡ) ಬೇಕಾದುದು

ಭೂತಕೃದಂತ

(4) ಕ್ತ–ಕೃತಂ–ಮಾಡಲ್ಪಟ್ಟಿರುವ

(5) ಕ್ತವತು–ಕೃತವಾನ್–ಮಾಡಿದವ

ವರ್ತಮಾನ ಕೃದಂತ

(6) *ಶತೃ / ಶಾನಚ್–ಕುರ್ವನ್ / ಕುರ್ವಾಣಃ–ಮಾಡುತ್ತಾ (ಇರುವ)

ಭವಿಷ್ಯತ್ ಕೃದಂತ

(7) *ಸ್ಯಶತೃ / ಸ್ಯಶಾನಚ್–ಕರಿಷ್ಯನ್ / ಕರಿಷ್ಯಮಾಣಃ– ಮುಂದೆ ಮಾಡುತ್ತಾ (ಇರುವ)

ಪ್ರಯೋಜನಾರ್ಥಕ

(8) ತುಮುನ್–ಕರ್ತುಂ–ಮಾಡಲು

ಭೂತಕೃದಂತಾವ್ಯಯ

(9) ಕ್ತ್ವಾ–ಕೃತ್ವಾ–ಮಾಡಿ

(10) ಲ್ಯಪ್–ಅಧಿಕೃತ್ಯ–ಅಧಿಕರಿಸಿ

---

* ಸ್ತ್ರೀ ರೂಪದೊಡನೆ

ಶ್ರೀಃ

ಕೃದಂತ ರೂಪ ಕೋಶ

(ಶಾಲೆ-ಕಾಲೇಜುಗಳ ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತ)

ಕೆ. ಎಸ್. ಕಣ್ಣನ್. ಎಂ. ಎ., ವಿದ್ವಾನ್,
ಸಂಸ್ಕೃತ ವಿಭಾಗ, ನ್ಯಾಷನಲ್ ಕಾಲೇಜು,
ಬಸವನಗುಡಿ, ಬೆಂಗಳೂರು-560 004

ಭಾರತೀ ಪ್ರಕಾಶನ
ಬೆಂಗಳೂರು-560 041

ಕೃದಂತರೂಪಮಾಲೆ

-ಯಂತಹ ಅತ್ಯುತ್ತಮ ಗ್ರಂಥದ

ರಚನೆ-ಪ್ರಕಾಶನಗಳಿಗೆ

ಕಾರಣಭೂತರಾದ

ಡಾ|| ವಿ. ರಾಘವನ್ ಅವರಿಗೆ

ಸಮರ್ಪಿತ

ಕರೋತೀತಿ ಕೃತ್

ಕರ್ತರಿ ಕೃತ್

ಕೃದಭಿಹಿತೋ ಭಾವೋ
ದ್ರವ್ಯವತ್ ಪ್ರಕಾಶತೇ

ಕೃತ್ತದ್ಧಿತಸಮಾಸಾಶ್ಚ (ಪ್ರಾತಿಪದಿಕಮ್)

ಕೃದತಿಙ್

"ಸ್ವಾಧ್ಯಾಯೋಽಧ್ಯೇತವ್ಯಃ"

"...ತವ್ಯಪ್ರತ್ಯಯೇನ ಸ್ವಪದೋಪಾತ್ತಪ್ರಕೃತ್ಯರ್ಥಭೂತಾಧ್ಯಯನೋಪರಕ್ತಾಯಾ ಭಾವನಾಯಾ ಅಪೂರ್ವಾಭಿಧಾನಾತ್। ತತಃ ಕಥಂ ಸ್ವಾಧ್ಯಾಯಸ್ಯ ಸಂಸ್ಕೃತತ್ವಮ್? ಇತಿ ತತ್ರಾಹ-'ತವ್ಯಃ ಕರ್ಮಗಾದೃಷ್ಟವಾಚೀ......"

–ಸಾಯಣನ ಋಗ್ಭಾಷ್ಯಭೂಮಿಕೆ

0.1

ಸಂಕ್ಷಿಪ್ತ ವಿಷಯ ಸೂಚಿ

ವಿಸ್ತೃತ ವಿಷಯ ಸೂಚಿ

0 ಈ ಗ್ರಂಥವನ್ನು ಕುರಿತು

ವಿಷಯವನ್ನು ಕುರಿತು

0.3

ಸಂಕ್ಷೇಪಗಳು †

(ವೈಷಯಿಕ ಕ್ರಮದಲ್ಲಿ)

(೧) ಅಕ್ಷರಗಳು

a) ಧಾತುವಿನ ಪದಗಳು
ಪ– ಪರಸ್ಮೈಪದ
ಆ– ಆತ್ಮನೇಪದ
ಉ– ಉಭಯಪದ

b) ಧಾತುವಿನ ಕರ್ಮಿತ್ವ
ಸಕ– ಸಕರ್ಮಕ
ಅಕ– ಅಕರ್ಮಕ
ದ್ವಿಕ– ದ್ವಿಕರ್ಮಕ

c) ಧಾತುವಿನ "ಇಡ್"ವ್ಯವಸ್ಥೆ
ಸೇ– ಸೇಟ್
ಅ– ಅನಿಟ್
ವೇ– ವೇಟ್

d) ಮೂರು ಪುರುಷಗಳು
ಪ್ರ.ಪು–ಪ್ರಥಮ ಪುರುಷ
ಮ.ಪು–ಮಧ್ಯಮ ಪುರುಷ
ಉ.ಪು–ಉತ್ತಮ ಪುರುಷ

e) ಮೂರು ವಚನಗಳು
ಏ.ವ– ಏಕವಚನ
ದ್ವಿ.ವ– ದ್ವಿವಚನ
ಬ.ವ– ಬಹುವಚನ

f) (7+1) ವಿಭಕ್ತಿಗಳು
ಪ್ರ.ವಿ–ಪ್ರಥಮಾ ವಿಭಕ್ತಿ
ಸಂ.ಪ್ರ–ಸಂಬೋಧನ ಪ್ರಥಮಾವಿಭಕ್ತಿ
ದ್ವಿ.ವಿ– ದ್ವಿತೀಯಾ ವಿಭಕ್ತಿ
ತೃ ವಿ.–ತೃತೀಯಾ ವಿಭಕ್ತಿ
ಚ.ವಿ.–ಚತುರ್ಥೀ ವಿಭಕ್ತಿ
ಪಂ.ವಿ.–ಪಂಚಮೀ ವಿಭಕ್ತಿ
ಷ.ವಿ.–ಷಷ್ಠೀ ವಿಭಕ್ತಿ
ಸ.ವಿ.–ಸಪ್ತಮೀ ವಿಭಕ್ತಿ

g) ತ್ರಿಲಿಂಗ
ಪು/ಪುಂ– ಪುಲ್ಲಿಂಗ
ಸ್ತ್ರೀ– ಸ್ತ್ರೀಲಿಂಗ
ನ/ನಪುಂ– ನಪುಂಸಕಲಿಂಗ

h) ಸ್ತ್ರೀಲಿಂಗ ರೂಪ
(–ಈ) ನುಮಾಗಮವಿಲ್ಲ
(–ನ್ತೀ) ನುಮಾಗಮವಿದೆ

---

† ಇದೇ ಸಂಕ್ಷೇಪಗಳ ಅಕಾರಾದಿನಿರೂಪಣೆಗೆ ನೋ. 5.1 (ಪು. 104)

ಸಂಕ್ಷೇಪ

1) ಇತರ

ಆ.ಗ್ರ– ಆದೇ ಗ್ರಂಥ
ಅ.ಟಿ– ಅಡಿಟಿಪ್ಪಣಿ
ಇ– ಇತ್ಯಾದಿ
ಉದಾ– ಉದಾಹರಣೆ
ಒ– ಒಟ್ಟು
ನೋ– ನೋಡಿ
ನಂ– ನಂಬರ್
ಶ್ಲೋ– ಶ್ಲೋಕ
ಸೂ – ಸೂಚನೆ
ಹೋ– ಹೋಲಿಸಿ

(೨) ಸಂಖ್ಯೆಗಳು

ಧಾತುಗಳ ಹಿಂದೆ ದಪ್ಪಕ್ಷರದಲ್ಲಿ 1, 2 ಇ– ಧಾತುಕ್ರಮಸಂಖ್ಯೆ,
" ಮುಂದೆ I II ಇ– ಗಣಸಂಖ್ಯೆ.
ಧಾತು ರೂಪಗಳ ಹಿಂದೆ 1 ರಿಂದ 10– ಹತ್ತು ಕೃತ್ತುಗಳು*
೧.೧ ಇ: ಧಾತುರೂಪಗಳ ಹಿಂದೆ– ಪ್ರ.ಪು ಏ.ವ. ಇ.
೧.೧ ಇ. ಶಬ್ದರೂಪಗಳ ಹಿಂದೆ– ಪ್ರ.ವಿ. ಏ ವ. ಇ.
–ತ್ = ೧.೧—ಪ್ರ.ವಿ , ಏ.ವ. ರೂಪವು ತಕಾರಾಂತವಾಗಿದೆ
-ನ್ = ೧ ೧—,, ,, ,, ,,
ಸೂತ್ರ ನಿರ್ದೇಶ ; 3.1.96 ಅಧ್ಯಾಯ 3, ಪಾದ 1, ಸೂತ್ರ 96

(೩) ಚಿಹ್ನೆಗಳು

೧) ಕಂಸ–ದೊಳಗಣ ರೂಪಗಳು ವಿಶೇಷಾರ್ಥಕ–
೨) ಬಂದೆ ಕಂಸವಿದ್ದರೆ, ಆದರ ಹಿಂದಿರುವ ರೂಪಕ್ಕೆ ಸಾಧಾರಣಾರ್ಥವೂ ವಿಶೇಷಾರ್ಥವೂ ಉಂಟು.
೩) ಕಂಸದೊಳಗೆ –ನ್ತಿ ಇದ್ದರೆ ನುಮಾಗಮವುಂಟು
–ತೀ ,, ,, ಇಲ್ಲ.
೪) ಕೃದ್ರೂಪಗಳ ಮಧ್ಯೆ Hyphen (ಗೀಟು) ಇದ್ದರೆ ರೂಪ ಬಾಹುಲ್ಯ

---

* 1 ತವ್ಯ 2 ಅನೀಯ 3 ಯ 4 ಕ್ತ 5 ಕ್ತವತು 6 ಶತೃ—ಶಾನಚ್ 7 ಸ್ಯಶತೃ–ಸ್ಯಶಾನಚ್ 8 ತುಮುನ್ 9 ಕ್ತ್ವಾ 10 ಲ್ಯಪ್

0.4

ಪ್ರಸ್ತಾವನೆ

ಸಂಸ್ಕೃತಭಾಷೆಯಲ್ಲಿ ಧಾತುಗಳಿಂದ ನಿಷ್ಪನ್ನವಾಗುವ ತಿಙಂತ ಮತ್ತು ಕೃದಂತರೂಪಗಳ ಅಧ್ಯಯನ ಮತ್ತು ಅವುಗಳ ಸ್ಮರಣೆ ಬಹಳ ಕಷ್ಟಸಾಧ್ಯ. ಈ ದಿಶೆಯಲ್ಲಿ ಈ ಹಿಂದೆ ಹಲವು ಗ್ರಂಥಗಳು ಹೊರಬಂದಿದ್ದರೂ ಅವಲ್ಲಿ ಹಲವು ನ್ಯೂನತೆಗಳು-ಆಭಾಸಗಳು ಆಗಿರುವುದನ್ನು ನಾವು ಕಾಣಬಹುದು. ಅವುಗಳಲ್ಲಿ ಕೆಲವುದರ ಉಲ್ಲೇಖವನ್ನು ಈ ಕೃತಿಯ ಪೀಠಿಕೆಯಲ್ಲಿ ಕಾಣಬಹುದು.

ಈ ನ್ಯೂನತೆಗಳನ್ನು ತೊಡೆದುಹಾಕುವುದು ಸಂಸ್ಕೃತಜ್ಞರ-ಅದರಲ್ಲಿಯೂ ಶಾಸ್ತ್ರಜ್ಞರ ಆದ್ಯಕರ್ತವ್ಯ. ಈ ಕರ್ತವ್ಯಪ್ರಜ್ಞೆಯಿಂದಲೇ ಪ್ರವೃತ್ತರಾದ ವಿದ್ವಾನ್ ಕೆ. ಎಸ್. ಕಣ್ಣನ್‌ರವರು ಕೇವಲ ಧಾತುಗಳಿಗೆ ಸಂಬಂಧಿಸಿದಂತೆಯೇ ಈಗಾಗಲೇ ನಾಲ್ಕು ಕೋಶಗಳನ್ನು ಬರೆದು ಪ್ರಕಟಿಸಿದ್ದಾರೆ. ಐದನೆಯದೇ ಕೃದಂತರೂಪಕೋಶ—ನಿಮ್ಮ ಕೈಯಲ್ಲಿರುವ ಕೃತಿ.

ಶಾಸ್ತ್ರನಿಶಿತವಾದ ಬುದ್ಧಿಯುಳ್ಳವರು ಮಾತ್ರವೇ ರಚಿಸಲು ಸಮರ್ಥರಾಗಬಲ್ಲ ಗ್ರಂಥವಿದು. ಇದರಲ್ಲಿಯ ಹತ್ತು ಕೃತ್ತುಗಳ ಆಯ್ಕೆ-ಜೋಡಣೆ-ನಿರೂಪಣೆಗಳಲ್ಲಿ ಗ್ರಂಥಕರ್ತರು ಅನುಸರಿಸುವ ಕ್ರಮ, ಅವರ ಸೂಕ್ಷ್ಮ ಮತ್ತು ನಿಶಿತಮತಿಗೆ ಸಾಕ್ಷಿ. ಇಲ್ಲಿಯ ಹತ್ತು ಕೃದಂತಗಳ ಪರಿಚಯವಿಲ್ಲದವರಿಗೆ ಸರಳ ಸಂಸ್ಕೃತದ ಅರ್ಥವೂ ದುಸ್ಸಾಧ್ಯ !

ಈ ಗ್ರಂಥದ ಪೂರ್ವೋತ್ತರಪೀಠಿಕೆಯೇ ಒಂದು ಅಪೂರ್ವ ಪ್ರೌಢ ಪ್ರಬಂಧ ! ಎಲ್ಲರೂ ಗಮನವಿಟ್ಟು ಓದಬೇಕಾದ ಪೀಠಿಕೆಯಿದು. ನಮ್ಮ ಜ್ಞಾನಾಭಿವೃದ್ಧಿ-ಗ್ರಂಥಕರ್ತರ ಪರಿಶ್ರಮದ ಅರಿವು-ಇವೆರಡೂ ಇಲ್ಲಿಯೇ ಆಗುವುವು !

ನಾಲ್ಕಾರು ಮಂದಿ ಘನ ವ್ಯಾಕರಣ ವಿದ್ವಾಂಸರು ಕೂಡಿ ಮಾಡಬೇಕಾದ ಕಾರ್ಯವನ್ನು ಒಬ್ಬರೇ ಮಾಡಿ ಸಾಧಿಸಿದ ಮಾನ್ಯ ಗ್ರಂಥಕರ್ತರಿಗೆ ಸಂಸ್ಕೃತಲೋಕ ಚಿರಋಣಿ.

ಇನ್ನೂ ಹಲವು ಕೋಶಗಳನ್ನೇ ರಚಿಸುತ್ತಿರುವ ಶ್ರೀ ಕಣ್ಣನ್‌ರವರ ಒಂದೊಂದು ಕೃತಿಯೂ ಸಂಸ್ಕೃತಾಭ್ಯಾಸಿಗಳಿಗೂ ವಿದ್ವಾಂಸರಿಗೂ ಸದಾ ಅವಶ್ಯವೆನಿಸುವ ಕೈಪಿಡಿಗಳು. ಅವರು ಈಗಾಗಲೇ ಸಿದ್ಧ ಮಾಡಿರುವ ಹಲವು ಕೃತಿಗಳು ಶೀಘ್ರವೇ ಪ್ರಕಾಶವಾಗಲಿ, ಈ ಕೃತಿಗಳು ಮಿಕ್ಕೆಲ್ಲ ಭಾರತೀಯ ಭಾಷೆಗಳಿಗೂ ಅನೂದಿತವಾಗಲಿ–ಎಂದು ನಾನು ಹಾರೈಸುತ್ತೇನೆ.

ಇತಿ,

ಮಹಾಬಲೇಶ್ವರ ಭಟ್ಟಃ
ವ್ಯಾಕರಣ ಮಹಾ ವಿದ್ವಾನ್,
ಚಾಮರಾಜೇಂದ್ರ ಸಂಸ್ಕೃತ ಮಹಾಪಾಠಶಾಲಾ
ಬೆಂಗಳೂರು–560018

0.5

ಲೇಖಕನ ಮಾತು

“ಸಂಸ್ಕೃತ ಓದಿದವರು ಸಂಸ್ಕೃತದಲ್ಲಿ ಮಾತನಾಡುವುದಕ್ಕಿಂತ ಸಂಸ್ಕೃತದ ಬಗ್ಗೆ ಮಾತನಾಡುವುದೇ ಹೆಚ್ಚು !”–ಎನ್ನುವ ಉದ್ಗಾರ ಹೋಗುವ ಕಾಲ ಬರಬೇಕಾಗಿದೆ. ಕಲಿಯುವವರಿಗೆ ಭಾಷೆಯ ಸರಳ ಮುಖವನ್ನು ತೋರಿಸುವುದು, ಆ ಭಾಷೆಯಲ್ಲಿಯೇ ಬೋಧಿಸುವುದು, ಆಡುವುದು— ಇವುಗಳಾರಂಭವಾದಲ್ಲಿ, ಇದು ಸಾಧ್ಯ.

ಇದಕ್ಕೆ ಅತ್ಯಂತ ಸಹಕಾರಿ ಈ ಪುಸ್ತಕ. ಸರಳ ಸಂಸ್ಕೃತ–ಆಡುಮಾತಿನ ಸಂಸ್ಕೃತಗಳು ಕೃದಂತರೂಪಗಳಿಂದ ತುಂಬಿತುಳುಕುತ್ತವೆ. ಒಳ್ಳೆಯ ಮತ್ತು ಪ್ರೌಢ ಕಾವ್ಯಗಳಲ್ಲೂ ಅವು ಹೇರಳವಾಗಿರುತ್ತವೆ. ಹೀಗಾಗಿ ಈ ಕೃತಿ ಎಳೆಯರಿಗಾಗಿಯೂ ಹೌದು, ವಿದ್ವಾಂಸ–ಕವಿಗಳಿಗೂ ಹೌದು.

ಇಂದು ಅತಿ ದುರ್ಲಭವೆನಿಸಿರುವುದು ಕೃದಂತಗಳ ಕ್ರಮಬದ್ಧ ನಿರೂಪಣೆ. “ಈ ಧಾತುವಿಗೆ ಈ ಕೃದ್ರೂಪ ಹೇಗಾಗುತ್ತದೆ ?” ಪ್ರಶ್ನೆಯನ್ನು ಉತ್ತರಿಸಲು ಇಂದು ಸರಿಯಾದ ಕೃತಿಗಳಿಲ್ಲ. “ಅವುಗಳ ಬಳಕೆ ಹೇಗೆ? ಆ ಶಬ್ದಗಳ ನಡೆ ಹೇಗೆ?” ಇವೂ ತಿಳಿಯದಾಗಿವೆ. ಇವೆಲ್ಲವನ್ನೂ ಈ ಕೃತಿ ತಿಳಿಸುತ್ತದೆ

ಹೀಗೆ ರೂಪಗಳು ಸ್ಪಷ್ಟವಾಗಿ ದೊರೆಯದಾಗಿಯೇ ಶಾಲೆಕಾಲೇಜುಗಳ ವಿದ್ಯಾರ್ಥಿಗಳು ಸಂಸ್ಕೃತಾನುವಾದ – ವಾಕ್ಯರಚನೆ – ಅರ್ಥಾಭಿವ್ಯಕ್ತಿ-ಪ್ರಶ್ನೆಗಳನ್ನು (ಸಂಸ್ಕೃತದಲ್ಲಿ) ಉತ್ತರಿಸಲು ಅಸಮರ್ಥರಾಗಿರುವುದು. ಈ ಕೃತಿಯಿಂದ ಇವೆಲ್ಲಕ್ಕೂ ಪರಿಹಾರವಿದೆ.

ಉದಾ. ‘ಹೋಗಬೇಕು’ ಎನ್ನಲು ಈ ಕೃತಿಯಲ್ಲಿ 27 ರೂಪಗಳು ದೊರೆಯುತ್ತವೆ. ‘ಹೋಗು’ ಧಾತುವಿಗೆ ಇಲ್ಲಿ 9 ಧಾತುಗಳಿವೆ. (ನಮ್ಮ ಕನ್ನಡ-ಸಂಸ್ಕೃತ ಧಾತುಕೋಶವನ್ನು ಇದಕ್ಕಾಗಿ ಬಳಸಿ). ಇದಕ್ಕೆ ತವ್ಯ/ಅನೀಯ/ಯ ಗಳಿಂದ ಇಷ್ಟು ರೂಪಗಳು.

ಮತ್ತೊಂದಂಶವೂ ಇದೆ. ಕನ್ನಡ–ಸಂಸ್ಕೃತಬಾಂಧವ್ಯ ಹಲವು ಶತಮಾನಗಳ ಬಾಂಧವ್ಯ. ಭಾಷಾಕೃತಿ ವಿಶೇಷವಾಗಿ ಸಂಸ್ಕೃತದಲ್ಲಿ

ನಡೆದಿತ್ತೆಂದೇ ಆದರಿಂದ ಬಹುಪದರಾಶಿಯು ತತ್ಸಮವಾಗಿಯೋ ತದ್ಭವವಾಗಿಯೋ ಕನ್ನಡಕ್ಕೆ ಬಂದಿದೆ. ಮತ್ತು ಅವುಗಳಲ್ಲೂ ಕೃದಂತಗಳೇ ಹೆಚ್ಚು. ಈ ಕೃತಿಯಲ್ಲಿಯ ಐದು ಕೃತ್ತುಗಳು ಕನ್ನಡಕ್ಕೆ ಉಪಯೋಗವಾಗತಕ್ಕವು.

ಈ ಕೃದಂತಗಳಿಗೆ ಯಾಸ್ಕರು ಮಾಡಿರುವ ನಾಮಕರಣ 'ನಾಮಕರಣ' ಎಂದೇ ! ಎಂದಮೇಲೆ ನಾಮಪದಗಳ ರಾಶಿಯ ಉದ್ಗಮವೆಲ್ಲೆಂಬುದು ಸ್ಪಷ್ಟವಷ್ಟೆ.

ಇಂದಿನ ಬಹುಮಂದಿ ಕನ್ನಡಬರಹಗಾರರಿಗೆ ಇಂಗ್ಲಿಷ್ ಪರಿಚಯವಿರುವಷ್ಟು ಸಂಸ್ಕೃತ ಪರಿಚಯವಿಲ್ಲದೆ, ಕನ್ನಡ ಭಾಷೆಯು ಇಂಗ್ಲಿಷಿನ ಕಳಪೆ ಕಾಪಿಯಂತಾಗುತ್ತಲಿದೆ. ವಿಶೇಷವಾಗಿ ಶಾಸ್ತ್ರ-ಸಾಹಿತ್ಯನಿರ್ಮಾಣದಲ್ಲಿ ಇದಾಗದು. ಮತ್ತೆ ಕನ್ನಡಿಗರು ಚಿರಕಾಲ ತಾವು ಆದರಿಸಿದ್ದ (ಹಾಗೂ ಆಧರಿಸಿದ್ದ) ಸಂಸ್ಕೃತಶಬ್ದರಾಶಿಯನ್ನು ಔಚಿತ್ಯಪೂರ್ಣವಾಗಿ ಬಳಸುವ ಕಾಲ ಬಂದಿದೆ. ಅದಕ್ಕೆ ಈ ಕೃತಿ ಸಹಕಾರಿ. ಇದನ್ನು ಸೂಚಿಸುವುದು ನಮ್ಮ ಕರ್ತವ್ಯ. "ಭಾಗ್ಯಾಯತ್ತಮತಃ ಪರಮ್"

ಆಖ್ಯಾತಕೋಶಭಾಗದಲ್ಲಿ ಒಟ್ಟು ಹದಿನೈದು ಮುದ್ರಣ ದೋಷಗಳು ಸಹ ಇಲ್ಲವೆಂದು ಹೇಳಲು ಹರ್ಷಿಸುತ್ತೇವೆ. [ಈ ತೆರನ ಕೃತಿಯಲ್ಲಿ ಮುದ್ರಣ ದೋಷವು ಸಾಮಾನ್ಯ(ನೋ. ಪು ೨೯)] ಶೋಧನಿಕೆಯಲ್ಲಿ ಐದು ದೋಷಗಳನ್ನು ತೋರಿಸಿದೆ. ಮಿಕ್ಕವಿವು: ಪು 58–284 (10) ವ್ಯಷ್ಯ; ಪು 67–336 (9) ಸ್ನೇಷ್ವಾ; ಪು. 68–338(8) ಕೊನೆ ಸ್ಪಷ್ಟರ್ಂ; ಪು. 69-346 (7)–ಸ್ವಪ್ಸ್ಯನ್; ಪು. 70–351 (6)–ಜುಹ್ವತ್ ಮತ್ತು ಪು. 71–355 (6) (ಸ್ತ್ರೀ)

ಈ ಪುಸ್ತಕವನ್ನು ಮತ್ತೂ ಪರಿಷ್ಕರಿಸಲು ಸಲಹೆಗಳಿಗೆ ಸುಸ್ವಾಗತ.

ದೀಪಾವಳೀ
23–10–84

ಕೆ. ಎಸ್. ಕಣ್ಣನ್
ಬೆಂಗಳೂರು

0.6

ಕೃತಜ್ಞತೆಗಳು

ನಾನೀ ಪುಸ್ತಕ ಬರೆಯುವಾಗ ಅನುಭವಿಸಿದ ಕಷ್ಟ ಅಪಾರ. ಅವುಗಳಲ್ಲೊಂದು ರೂಪಾನ್ವೇಷಣೆ. ಈ ಹಿಂದಿನ ಕೃತಿಗಳಲ್ಲಿಯ ಆ ಕಷ್ಟವೆಲ್ಲ ಈ ಕೃತಿಯಿಂದ ಬಹುಪಾಲು ಕೊನೆಗೊಂಡಿದೆಯೆನ್ನಬಹುದಾದರೂ, ಈ ಮೊದಲು ಶ್ರಮಿಸಿದ ಪೂರ್ವಸೂರಿಗಳೆಲ್ಲರಿಗೂ ನನ್ನ ಕೃತಜ್ಞತೆಗಳು ಸಲ್ಲುತ್ತವೆ.

ಇಷ್ಟಾದರೂ ಸಂಶಯಗಳು ಪರಿಹಾರವಾಗದೆ ಹೋದುದುಂಟು. ಆಗ ಸಂದೇಹನಿವಾರಣೆ ಮಾಡಿದವರು ವಿದ್ವಾನ್ ರಂಗನಾಥಶರ್ಮಾ ಅವರು. ಅವರಿಗೆ ನಾನು ಋಣಿ.

ಈ ತೆರನ ಕೃತಿಯ ಬರವಣಿಗೆ ಬಲು ಬೇಗನೇ ಬಳಲಿಕೆ ಬೇಸರಗಳನ್ನು ಬರಿಸುವಂತಹುದು. ಆಗ ನನ್ನ ವಿದ್ಯಾರ್ಥಿಗಳಾದ ಕು|| ಎಂ. ವಿ. ವೀಣಾ ಮತ್ತು ಚಿ|| ಸುಬ್ರಹ್ಮಣ್ಯರ ಸಹಾಯ ದೊರಕಿತು. ಸುಬ್ರಹ್ಮಣ್ಯನ ಶ್ರಮ ಅಪಾರ. ಇವರಿಬ್ಬರಿಗೂ ನಾನು ಕೃತಜ್ಞ.

'ಪ್ರಸ್ತಾವನೆ' ಬರೆಯಲು ವಿದ್ವಾನ್ ಮಹಾಬಲೇಶ್ವರ ಭಟ್ಟರು ಒಪ್ಪಿದುದು ಸುಕೃತ. 'ವಿದ್ವಾನೇವ ವಿಜಾನಾತಿ'. ಅವರಿಗೆ ನನ್ನ ಕೃತಜ್ಞತೆ ಸೇರಬೇಕು.

ಒಂದರ್ಥದಲ್ಲಿ ಇವೆಲ್ಲಕ್ಕಿಂತಲೂ ಹಿರಿದಾದ ಸಹಾಯ, ಆರ್ಥಿಕ ಸಹಾಯ. ಪದ್ಮಭೂಷಣ ಡಾ|| ಎಚ್. ನರಸಿಂಹಯ್ಯನವರ ಆಧ್ಯಕ್ಷ್ಯದಲ್ಲಿ, ನಮ್ಮ ನ್ಯಾಷನಲ್ ಎಜುಕೇಷನ್ ಸೊಸೈಟಿ ಆಫ್ ಕರ್ನಾಟಕ, ಬೆಂಗಳೂರು-4 — ಈ ಸಂಸ್ಥೆಯು ಮೂರುಸಹಸ್ರ ರೂ. ಗಳನ್ನು ಸಾಲವಾಗಿ-(ಇದನ್ನೊಳಗೊಂಡಂತೆ)ಮೂರುಕೃತಿಗಳಿಗೆಂದು ದಯಪಾಲಿಸಿದೆ. ಅವರಿಗೆ ನಮ್ಮ ನಮ್ರ ನಮನಗಳು.

ಬಹು ಶ್ರಮಿಸಿ ಮುದ್ರಿಸಿದ ಎಸ್. ಎಲ್. ಎನ್. ಪ್ರೆಸ್ ಕಾರ್ಯಕರ್ತರಿಗೆ ನಾನು ಚಿರಋಣಿ.

1. ಹಿನ್ನೆಲೆ

1.1 ಕೃದಂತಗಳು—ಒಂದು ಪರಿಚಯ

1.11 ಸರಳ ಸಂಸ್ಕೃತ

ಅಪೇಕ್ಷೆ

ಸಂಸ್ಕೃತವನ್ನು ಇಂದು ಕಲಿಯಬಯಸುವವರ ಸಂಖ್ಯೆ ಬಹಳ ಹೆಚ್ಚಿದೆ. ಕಾರಣಗಳು ಹಲವು: ಅವಕಾಶಗಳು ಇಂದು ಹೆಚ್ಚಿವೆ. ಸರಳ ಪುಸ್ತಕಗಳೂ ಅಷ್ಟೆ. ಮತ್ತು ಎಷ್ಟಾದರೂ ನಮ್ಮ ಸಂಸ್ಕೃತಿಯನ್ನು ಚಿರಕಾಲದಿಂದಲೂ ಬಿಂಬಿಸಿರುವ, ನಿರೂಪಿಸಿರುವ ಭಾಷೆಯಲ್ಲವೇ ಇದು ?

ನಮ್ಮ ದೇಶದಲ್ಲೇ, ಅಷ್ಟೇಕೆ, ಪ್ರಪಂಚದಲ್ಲೇ ಅತಿ ಪ್ರಾಚೀನವೆನಿಸುವ ಸಾಹಿತ್ಯ ಈ ಭಾಷೆಯಲ್ಲಿದೆ. ಅಂತೆಯೇ ವಿಪುಲವಾದ ಸಾಹಿತ್ಯವೂ ಇಲ್ಲಿದೆ ; ಸಾಹಿತ್ಯದರ್ಶನಗಳಲ್ಲಿ ಚಿರಂತನ ಮೌಲ್ಯಗಳನ್ನು ಹುಡುಕುವ ಯತ್ನ ಇಲ್ಲಿ ನಡೆದಿದೆ ; ಇತ್ಯಾದಿ.

ಭಾಷೆ

ಅತ್ಯಂತ ಕಾವ್ಯಮಯವೂ, ಜೊತೆಯಲ್ಲೇ ಅತ್ಯಂತ ವೈಜ್ಞಾನಿಕವೂ ಆಗಿರುವ ಭಾಷೆಯೂ ಇದಾಗಿದೆ. ಭೌಗೋಳಿಕ ವ್ಯಾಪ್ತಿಯ ಇತಿಮಿತಿಯನ್ನೂ ಮೀರಿ, ಜಗತ್ತಿನ ಹತ್ತು ಹಲವು ಭಾಷೆಗಳಿಗೆ ಶಬ್ದಾರ್ಥಗಳ ಸಂಪತ್ತನ್ನೂ ಧಾರೆಯೆರೆದಿದೆ. ಕೊನೆಗೆ ದೇವವಾಣಿಯೆಂದೂ ತದ್ಭಾವಭಾವುಕರಿಂದ ವ್ಯಪದಿಷ್ಟವಾಗಿದೆ.

ಕೆಲವೆರಡು ಸಹಸ್ರ ವರ್ಷಗಳಿಂದ ಸ್ವರೂಪ-ರೂಪಗಳಲ್ಲಿ ಪ್ರಧಾನವಾದ ಮಾರ್ಪಾಟುಗಳನ್ನೇ ಹೊಂದದ ಈ ಭಾಷೆ, ಗತಿಭರವಾದ ಇಂದಿನ ಸಂದರ್ಭ

ದಲ್ಲಿ ಬೆಳೆಯಬಯಸುವ ಭಾರತೀಯ ಭಾಷೆಗಳಿಗೆ ಮತ್ತೊಮ್ಮೆ ಪ್ರಾಂಭಾಷಿಕ ಶಬ್ದಗಳನ್ನೂ ವರ್ಜಿಸಬೇಕಾದ ಸಂಧಿಯೊದಗಿಬಂದಿದೆ !

ಕಷ್ಟ ಆದರೂ ಸುಲಭ !

ಆದರೆ ಈ ಭಾಷೆ ಕಷ್ಟ; ಹಾಗೆಂದು ಅದನ್ನು ಹತ್ತು ಹಲವು ವರ್ಷ ವ್ಯಾಸಂಗ ಮಾಡಿರುವವರೇ ಹೇಳುವವರೆಂದಮೇಲೆ ಕೇಳುವುದೇನು ? ಆದರೆ ಇದು ಚಿತ್ರದ ಒಂದಂಶ ಅಷ್ಟೆ. ಮತ್ತೂ ಒಂದು ಭಾಗವಿದೆ. ಅದೆಂದರೆ ಸರಳ ಸಂಸ್ಕೃತವನ್ನು ಕಲಿಯುವ ಬಗೆ. ವ್ಯಾಕರಣವನ್ನು ಉಲ್ಲಂಘಿಸದೆ, ಆದರೆ ವ್ಯಾಕರಣವನ್ನು ಮೊದಲು ತೋರಗೊಡದೆ, ಬೋಧಿಸುವ ಬಗೆಯದು.

ಅದೆಂದರೆ ಉದಾಹರಣೆಗೆ ಭಾರತೀಯರು ಫ್ರೆಂಚ್ ಭಾಷೆ ಕಲಿಯುವ ಬಗೆ: ಅರ್ಥಾತ್ ನೇರ ಸಂಭಾಷಣೆಯ ನೇರ ಮಾರ್ಗ. ವಿಶೇಷವೆಂದರೆ ಅದಕ್ಕಿಂತಲೂ ಅತಿ ಶೀಘ್ರವಾಗಿ ನಮಗಿದು ಸಾಧ್ಯವಾಗುವುದು.

ಅದು ಹೇಗೆ ?— ಎಂಬ ಪ್ರಶ್ನೆ ಬಹುಮಂದಿಗೆ ಹುಟ್ಟಲಾರದು. ಕಾರಣವು ಸರಳ. ಸಂಸ್ಕೃತ ಭಾಷೆಯ ಶಬ್ದಗಳು ರಾಶಿ ರಾಶಿಯಾಗಿ ಪ್ರಾಂತಭಾಷೆಗಳಲ್ಲಿ ತುಂಬಿಹೋಗಿವೆ. ಹೀಗಾಗಿ ಕೆಲವು ಸರ್ವನಾಮಗಳು, ಭಾಷಾಬಂಧ (Structure)ದ ಕೆಲವೇ ವಿಶಿಷ್ಟ ಪ್ರಕಾರಗಳು, ಕೆಲವೇ ಅತ್ಯಾವಶ್ಯಕ ಶಬ್ದ- ಕ್ರಿಯಾರೂಪಗಳು—ಇಷ್ಟನ್ನು ಮಾತ್ರವೇ ಹೊಸದಾಗಿ ಕಲಿಯಬೇಕಾಗಿರುವುದು !

ಕ್ರಿಯಾಪದಗಳ ಬಹುಮಟ್ಟಿನ ಕಾರ್ಯವನ್ನು ಕೃದಂತಗಳೇ ನಡೆಸಿಕೊಡುವುವು ಮತ್ತು ಆ ಕೃದಂತಗಳೇ ಹೇರಳವಾಗಿ ಎಲ್ಲ ಪ್ರಾಂತಭಾಷೆಗಳಲ್ಲೂ ತುಂಬಿವೆ !

ಕಷ್ಟ ಪರಿಹಾರ

ಯಾವುದೇ ಭಾಷೆಯನ್ನು ಆಡುಭಾಷೆಯಾಗಿ ಕಲಿಯುವ ಅವಕಾಶವಾದರೆ ಅಲ್ಲಿಗೆ ಆ ಭಾಷೆಯ ಬಹುಪಾಲಿನ ಕಷ್ಟಗಳು ದೂರವಾದಂತೆಯೇ

ಸರಿ. ಉದಾ: ನಾಮಪದಗಳಲ್ಲಿ ಲಿಂಗವೈಚಿತ್ರ್ಯವು ಜರ್ಮನ್ (ಯಾ ಹಿಂದೀ) ಭಾಷೆಯಲ್ಲಿದೆ. ಆದರೆ ಶಬ್ದ ಮತ್ತು ಅದರ ಲಿಂಗ- ಇವೆರಡರ ಜ್ಞಾನವೂ ಒಟ್ಟಿಗೇ ಆಗುತ್ತಾ ಮತ್ತು ಮತ್ತೆ ಮತ್ತೆ ಕೇಳಿ ಅಭ್ಯಾಸವೂ ಅಂತೆಯೇ ನಡೆಯುತ್ತಾ ಕೊನೆಗೆ ಅದಕ್ಕಾಗಿ ವಿಶೇಷ ಪ್ರಯತ್ನವೇ ಅನವಶ್ಯವೆಂದು ತೋರಿಬರುತ್ತದೆ. ಇಂಗ್ಲೀಷಿನಲ್ಲಿಯ ಉಚ್ಚಾರಣಾದಿವೈಲಕ್ಷಣ್ಯವೂ ಅಂತೆಯೇ ಅಲ್ಲವೇ ?

'ಬೇಸಿಕ್ ಸಂಸ್ಕೃತ'

Basic English ಬೋಧನೆಯಂತೆ "Basic Sanskrit"- ಇದರ ಬೋಧ್ಯತೆ, ತದಪೇಕ್ಷಿತಕನಿಷ್ಠ (minimum) ಶಬ್ದಭಾವಗಳ ಸಾಮಗ್ರಿ ಮುಂತಾದುವನ್ನು ಕುರಿತಾಗಿ ಸ್ವದೇಶ-ಪರದೇಶಗಳ ವಿದ್ವಾಂಸರು ಈ ಹಿಂದೆ ಯಥೇಚ್ಛವಾಗಿ ಚರ್ಚಿಸಿದ್ದಾರೆ. ಅವರಲ್ಲಿ ಶ್ರೀಯುತರಾದ ಡಾ|| ಎಫ್. ಡಬ್ಲ್ಯು. ಥಾಮಸ್, ಡಾ|| ಫ್ರೇಡರ್ ಇವರುಗಳೂ ಮತ್ತು ಡಾ|| ಎಸ್. ಕೆ. ಚಟರ್ಜಿ, ಡಾ|| ಆರ್. ಸಿ. ಮಜುಮ್‌ದಾರ್, ಡಾ|| ಸಿ. ಕುನ್ಹನ್‌ರಾಜಾ, ಸರ್ದಾರ್ ಕೆ. ಎಂ. ಪಣಿಕ್ಕರ್, ಡಾ|| ವಿ. ರಾಘವನ್— ಇವರುಗಳೂ ಉಲ್ಲೇಖ್ಯರು*. ಕೃದಂತಗಳ ಕಷ್ಟಪರಿಹಾರಕ ಧರ್ಮವನ್ನು

---

* ಹೋ. "ಸಂಸ್ಕೃತ ಇತನೀ ಸರಲ ಹೈ ಕಿ ರಸೋಈ ಬನಾನೇವಾಲೀ ತಕ ಸಂಸ್ಕೃತ ಸಮಝ ಲೇತೀ ಹೈಂ| .... ಯದಿ ಥೋಡಾ ಥೋಡಾ ಬತಾತೇ ಚಲೇಂ ತೋ ವಹ ಅಂಗ್ರೇಜೋಂಕೆ ಬಹರೋಂ ಕಿ ಅಂಗ್ರೇಜೀ ಸೇ ಕಹೀಂ ಅಧಿಕ ಸಂಸ್ಕೃತ ಬೋಲ್ ಲೇಗಾ | ಸಂಸ್ಕೃತ ಭಾಷಣ ಕಾ ನಿಯಮ ಕರನಾ ಪರಮಾವಶ್ಯಕ ಉಪಾಯ ಹೈ .... ಸಂಸ್ಕೃತ ಭಾಷಣ ಕಾ ಅಭ್ಯಾಸ ಸುಗಮತಾ ಸೇ ಹೋ ಸಕತಾ ಹೈ ಯದಿ ಅಧ್ಯಾಪಕ ಶ್ರೇಣೀ ಮೇಂ ಸಂಸ್ಕೃತ ಮೇಂ ಬೋಲನೇಕಾ ನಿಯಮ ಕರದೇ ಔರ್ ಪಠನಾರ್ಥೀ ಘರ್ ಘರ್ ಸಂಸ್ಕೃತ ಮೇ ಬೋಲನೇ ಕಾ ಅಭ್ಯಾಸ ಡಾಲೇಂ |"

—ಪದವಾಕ್ಯಪ್ರಮಾಣಜ್ಞ ಶ್ರೀ ಪಂ. ಬ್ರಹ್ಮದತ್ತ ಜೀ ಜಿಜ್ಞಾಸು, ಪು. 110, 'ಸರಲತಮವಿಧಿ'

ಮಾತ್ರ ಎಲ್ಲರೂ ಎತ್ತಿಹಿಡಿದಿದ್ದಾರೆ.

ಇಂತಹ ಅತ್ಯುಪಯುಕ್ತವಾದ ಕೃದಂತಗಳ ರೂಪಗಳನ್ನು ನಿರ್ದೇಶಿಸುವುದೇ ಈ ಕೃತಿಯ ಉದ್ದೇಶವಾಗಿದೆ.

ಇತಿಹಾಸ

ಕೃದಂತಗಳ ಬಳಕೆ ಎಲ್ಲೋ ಈಚೆಗೆ ಆರಂಭವಾದುದಲ್ಲ. ಅಥವಾ ಸರಳ ಸಾಹಿತ್ಯಕ್ಕೆ ಮಾತ್ರ ಬೇಕು ಅಥವಾ ಸೀಮಿತವೆಂದೂ ಅಲ್ಲ. ವೈದಿಕ ಸಾಹಿತ್ಯದಿಂದಾರಂಭಿಸಿ ಇಂದಿನ ಸಾಹಿತ್ಯದವರೆಗೂ ಅವ್ಯಾಹತವಾಗಿ ಇದನ್ನು ನಾವು ನೋಡಬಹುದು. ಇದಕ್ಕೆ ಕೆಲವು ಉದಾಹರಣೆಗಳನ್ನು ಕೊಡಬಹುದು. (ದಪ್ಪಕ್ಷರದಲ್ಲಿ ಮುದ್ರಿತವಾಗಿರುವ ಪದಗಳು ಪ್ರಸಿದ್ಧ/ಸುಲಭ ಕೃದಂತಗಳು):

1. ಅಗ್ನಿಮೀಳೇ **ಪುರೋಹಿತಂ**....ಋಗ್ವೇದ 1.1.1.
2. ಈಶಾವಾಸ್ಯಮಿದಂ ಸರ್ವಂ .... ಈಶಾವಾಸ್ಯೋಪನಿಷತ್ 1.
3. ತಪಸ್ಸ್ವಾಧ್ಯಾಯ**ನಿರತಂ** .... ರಾಮಾಯಣ 1.1.1.
4. ಧರ್ಮಕ್ಷೇತ್ರೇ ಕುರುಕ್ಷೇತ್ರೇ **ಸಮವೇತಾ ಯುಯುತ್ಸವ** : .... ಭಗವದ್ಗೀತೆ 1.1.
5. ವಾಗರ್ಥಾವಿವ **ಸಂಪೃಕ್ತೌ** .... ರಘುವಂಶ 1.1.

ಹೀಗೆ ಕೃದಂತಗಳು ಸಂಸ್ಕೃತ ಭಾಷೆಯ ಅವಿಭಾಜ್ಯ ಅಂಗವೇ ಆಗಿವೆ. ಅಲ್ಲದೆ ಸಂಸ್ಕೃತದಲ್ಲಿ ಯಾವ ಪದವು ತಾನೆ ಧಾತುವಿನಿಂದ ಸಾಧಿತವಾಗಿಲ್ಲ ?

ಸುಲಭ ಸಾಹಿತ್ಯ

ಸಂಸ್ಕೃತ ಭಾಷೆಯನ್ನು 'ಚಲಾಯಿಸುವುದು' ತೀರ ಕಷ್ಟವಲ್ಲವೆಂದು ಮೇಲೆ ತೋರಿಸಿದೆಯಷ್ಟೆ. ಇನ್ನು ಮುಂದಕ್ಕೆ ಕೆಲವು ಮುಖ್ಯವಾದ ಕ್ರಿಯೆಗಳು (–ಅವುಗಳ ರೂಪಗಳು), (ಸಂಧಿ-ಸಮಾಸ ಮುಂತಾದ) ಕೆಲವು ಅವಶ್ಯ ವ್ಯಾಕರಣ ಪ್ರಕ್ರಿಯೆಗಳು — ಇವಿಷ್ಟನ್ನು ಅಂತಲ್ಲಿ (–ಇವಿಷ್ಟನ್ನೂ ಆರಂಭ

ದಿಂದಲೇ ಕಲಿಯಲು ಅರ್ಧ ವರ್ಷವೂ ಬೇಕಾಗದು), ರಾಮಾಯಣ, ಮಹಾಭಾರತ (-ಗೀತೆ), ಪುರಾಣ-ಮೊದಲಾದುವನ್ನು ಹೆಚ್ಚು ಕಷ್ಟವಿಲ್ಲದೆ ತಿಳಿದುಕೊಳ್ಳಬಹುದು. ಕಾಳಿದಾಸನ ಕಾವ್ಯಭಾಗಗಳನ್ನು ಓದಿಕೊಳ್ಳಲೂ ಯತ್ನಿಸಬಹುದು.

1.12 ಪ್ರೌಢ ಸಂಸ್ಕೃತ

ಆದರೆ ಪ್ರೌಢಭಾಷಾ ಪಾಂಡಿತ್ಯ ಸುಲಭದ ಮಾತಲ್ಲ. ನಿರ್ದಿಷ್ಟ-ಮತ್ತು ನಿರ್ದುಷ್ಟರೂಪನಿಷ್ಕರ್ಷೆ ಮಾಡಿಕೊಳ್ಳದಿದ್ದರೆ ವಿದ್ವಾಂಸರೂ ಮುಗ್ಗರಿಸುವವರೇ, ಈ ಭಾಷೆಯಲ್ಲಿ *. ಇಲ್ಲಿಯ ರೂಪಬಾಹುಲ್ಯವೂ ತೊಡಕಿನದೇ.

ರೂಪಬಾಹುಲ್ಯ

ಉದಾ :- ಒಂದೊಂದು ಧಾತುವಿಗೂ 10 ಲಕಾರಗಳು. ಒಂದೊಂದರಲ್ಲೂ ಮೂರು ಮೂರು ಪುರುಷ ವಚನಗಳು. ಅಲ್ಲಿಗೇ 90 ರೂಪಗಳಿಗಿಂತ ಹೆಚ್ಚಾಯಿತು. (ಇದು ಪರಸ್ಮೈ/ಆತ್ಮನೇಪದಿ ಧಾತುಗಳಿಗೆ. ಉಭಯಪದಿ ಧಾತುಗಳಿಗೆ ಇದಕ್ಕೆ ಎರಡರಷ್ಟು). ಇದಿಷ್ಟೂ ಕರ್ತರಿ ಪ್ರಯೋಗದಲ್ಲಿ.

ಇನ್ನು ಕರ್ಮಣಿ/ಭಾವೇ ಹಾಗೂ ಣಿಚ್ (ಪ್ರೇರಣಾರ್ಥಕ) ಸನ್ (ಇಚ್ಛಾರ್ಥಕ) ಹಾಗೂ ಯಙ್-ಯಙ್‌ಲುಕ್ (ಪೌನಃ ಪುನ್ಯಾದ್ಯರ್ಥಗಳು)- ಈ ಅಂತಗಳಲ್ಲೂ ಅಷ್ಟಷ್ಟು ರೂಪಗಳೆಂದರೆ ಅಲ್ಲಿಗೆ ಸುಮಾರು 540 ಕ್ಕೂ ಮೀರಿ ರೂಪಗಳಾದುವು-ಒಂದೊಂದು ಧಾತುವಿಗೇ ! ಇವಲ್ಲದೇ ಪ್ರತ್ಯಯ ಮಾಲಾ ಪ್ರಕರಣವಾದರೆ ಇನ್ನೂ ಅಧಿಕ ರೂಪಗಳು!

---

* ಇಡ್ ವಿಚಾರ ನುಮ್ ವಿಚಾರಗಳಲ್ಲಿ ಕಾಳಿದಾಸನೇ ಎಡವಿರುವ ಒಂದೆರಡು ಪ್ರಸಂಗಗಳೂ ಇಲ್ಲದಿಲ್ಲ. ಉದಾ :- ಮುಷ್ಟಂ ಪ್ರತಿಗ್ರಾಹಯತಾ ಸ್ವಮರ್ಥಂ (ಶಾಕುಂತಲಂ ೫ನೇ ಅಂಕ), ಪ್ರತ್ಯಯಾದಾಶ್ವಸಂತ್ಯಃ (ಪೂರ್ವ ಮೇಘ).

ಪ್ರಕ್ರಿಯೆ

ಇನ್ನೀ ರೂಪಗಳಾದರೂ ಸುಲಭಸಾಧ್ಯವಲ್ಲ. ಧಾತುಗಳ ಗಣ–ಪದ ಕ್ರಮಗಳು, ಇಡ್‌ವ್ಯವಸ್ಥೆ – ಇವುಗಳ ಖಚಿತ ಜ್ಞಾನ ಬೇಕು. ಸಂಧಿ ಪ್ರಕರಣವು ಕರಗತವಾಗಿರಬೇಕು. ಣತ್ವ-ಷತ್ವಗಳ ನಿಯಮಗಳನ್ನರಿತಿರಬೇಕು.

ಬಳಕೆ

ಧಾತುಗಳಿಗೆ ಸೇರುವ ವಿಶಿಷ್ಟ ಉಪಸರ್ಗಗಳ ಅರಿವು ಬೇಕು. ಆಗ ಉಂಟಾಗುವ 'ಪದ'–ಬದಲಾವಣೆ (ಪರಸ್ಮೈ→ಆತ್ಮನೇ–ಇ.), ವಿಶಿಷ್ಟ ಕಾರಕಪೇಕ್ಷೆ, ವಿಶಿಷ್ಟ ಬಳಕೆಗಳು (Idiomatic usages), ಇವೊಂ ದದೊಂದರ ತಿಳುವಳಿಕೆಯೂ ಬೇಕಾಗುತ್ತದೆ. ಈ ರೂಪಗಳನ್ನೆಲ್ಲಾ ಕಂಠಪಾಠ ಮಾಡಿಕೊಳ್ಳುವುದಂತೂ ದುಸ್ಸಾಧ್ಯವೇ ಸರಿ-ಒಟ್ಟಿನ 2001 ಧಾತುಗಳಿಗಿರಲಿ, ಉಪಯುಕ್ತವೆನಿಸುವ 500 ಧಾತುಗಳಿಗೆ ಮಾಡಿಕೊಳ್ಳುವುದು ಸಹ ! ಹಾಗೆಂದು ಅದಕ್ಕೆ ಬೇಕಾದ ವಿಸ್ತೃತ ನಿಯಮಾವಳಿಗಳನ್ನರಿತುಕೊಂಡು ರೂಪನಿಷ್ಪಾದನೆ ಮಾಡಿಕೊಳ್ಳುವೆನೆಂಬುದಂತೂ ಮತ್ತೂ ದುಶ್ಶಕವೇ ಸರಿ.

ಕಷ್ಟಂ ವ್ಯಾಕರಣಂ

ಬಿಗಿಯಾದ ಭಾಷೆ ಬರಲು ಇನ್ನೂ ಕೃದಂತಗಳ ಜ್ಞಾನವೂ ಬೇಕು. ಇಲ್ಲೂ ಗಣ–ಪದ–ಇಟ್‌ತ್ವಾದಿ ಬಾಧೆ ತಪ್ಪಿದ್ದಲ್ಲ. ಇನ್ನು ಸಿದ್ಧಾಂತ ಕೌಮುದಿಯ ಮಿಕ್ಕಪ್ರಕರಣಗಳ ಕ್ಲೇಶವೂ ಅಲ್ಪವಲ್ಲ. ಎಂತಲೇ ವ್ಯಾಕರಣ ದಲ್ಲಿ ಪರಿಣತಿ ದೊರೆಯಲೆಂದೇ, ಅದನ್ನು ಪಡೆದವರಿಂದ, ಭಟ್ಟಿಕಾವ್ಯ, ಧಾತುಕಾವ್ಯ, ವಾಸುದೇವವಿಜಯ ಮುಂತಾದ ಕಾವ್ಯಗಳು ರಚಿತವಾದುವು.

ಕಷ್‌ಧಾತುವಿನಿಂದ ಉಂಟಾಗುವ ಕ್ತಪ್ರತ್ಯಯಾಂತ ರೂಪದ್ವಯವನ್ನು ತೋರಿಸಲು, ಅಷ್ಟಾಧ್ಯಾಯೀ ಸೂತ್ರಗಳ ಮೇಲಿನ ಕಾಶಿಕಾ ವ್ಯಾಖ್ಯೆಯಲ್ಲಿ "ಕಷ್ಟಂ ವ್ಯಾಕರಣಂ" ('ಕಷಿತಂ ಸುವರ್ಣಂ') ಎಂದು ಉದಾಹರಣೆಯಿದೆ! ಹರದತ್ತನ ಪದಮಂಜರೀ ಎಂಬ ವಿವರಣೆಯಲ್ಲಿ "ವ್ಯಾಕರಣಸ್ಯ ಕಷ್ಟತ್ವವ್ಯ

ಇಡಾಗಮಾದಿ ವ್ಯವಸ್ಥಾಯಾ ದುಜ್ಞಾನತ್ವಾತ್"* ಎಂದಿದೆ! ವ್ಯಾಕರಣ-ಶಾಸ್ತ್ರದ ಆಲೋಡನೆಗೆ ಎಷ್ಟುಕಾಲ ಬೇಕು? "ದ್ವಾದಶವರ್ಷೈಃ ವ್ಯಾಕರಣಂ ಶ್ರೂಯತೇ!".

1.13 ಕೃದಂತಗಳ ಲೋಕ

ಕೃದಂತಗಳ ಪ್ರಪಂಚವು ಎಷ್ಟು ವಿಸ್ತಾರವಾದುದೆಂಬುದನ್ನು ಕೆಳಗಿನ ಒಂದೆರಡು ಉದಾ. ಗಳಿಂದ ನೋಡಬಹುದು.

ಉದಾ. ಕೃ (ಮಾಡು).

ಕರ್ತಾ, ಕರ್ಮ, ಕರಣ, ಕ್ರಿಯಾ, ಕೃತಿ, ಕರಣ, ಕಾರಣ, ಕಾರಕ, ಕರ್ತವ್ಯ, ಕರಣೀಯ, ಕಾರ್ಯ, ಕೃತ್ಯ, ಕ್ರತು, ಕೃತ್ರಿಮ; ಕರ, ಸುಕರ, ದುಷ್ಕರ, ದಿವಾಕರ, ನಿಶಾಕರ, ಕಿಂಕರ, ಶಂಕರ, ಭಯಂಕರ, ತಸ್ಕರ, ಯಶಸ್ಕರ, ಭಾಸ್ಕರ, ಆಕಾರ, ಆಕಾರ, ಪ್ರಕಾರ, ಅಪಕಾರ, ಉಪಕಾರ, ವಿಕಾರ, ಸಂಸ್ಕಾರ, ಪರಿಷ್ಕಾರ, ಬಹಿಷ್ಕಾರ, ಅಧಿಕಾರ, ಸತ್ಕಾರ, ಅಂಧಕಾರ, ಕುಂಭಕಾರ; ಉಪಕಾರಿ ಅಪಕಾರಿ; ಪ್ರಕೃತಿ, ವಿಕೃತಿ, ಸಂಸ್ಕೃತಿ; ಸುಕೃತ, ದುಷ್ಕೃತ, ಅಕೃತ; ಪುಣ್ಯಕೃತ್ ಪಾಪಕೃತ್ ಶುಭಕೃತ್ ಕರ್ಮಕೃತ್;

ಕುರ್ವನ್ ಕುರ್ವಾಣಃ ಕರಿಷ್ಯನ್ ಕರಿಷ್ಯಮಾಣಃ ಕ್ರಿಯಮಾಣಃ ಕಾರ್ಯಮಾಣಃ ಚಿಕೀರ್ಷಿತಂ ಚಿಕೀರ್ಷಣೀಯಂ ಚಿಕೀರ್ಷಾ ಚಿಕೀರ್ಷುಃ ಕೃತ್ವಾ, ಕಾರಯಿತ್ವಾ, ಸಂಸ್ಕೃತ್ಯ, ಅಲಂಕೃತ್ಯ, ನಮಸ್ಕೃತ್ಯ, ತಿರಃಕೃತ್ಯ-

---

* ಹೀಗಾಗಿ ಸಂಸ್ಕೃತದಲ್ಲಿ ಧಾತುಪ್ರಪಂಚವೇ ಕ್ಲಿಷ್ಟತಮವೆನಿಸುವುದರಿಂದಲೇ ನಾವು ಸಂಸ್ಕೃತವನ್ನು ಕಲಿಯುವ ನೂತನ ಮಾದರಿಯ ಕೈಪಿಡಿಯ ಮಾಲೆಗಳಲ್ಲಿ ಧಾತುಕೋಶಗಳ ಸಾಲನ್ನೇ ಮೊದಲು ಆರಂಭಿಸಿದ್ದೇವೆ. ಸಂಸ್ಕೃತ ವ್ಯಾಕರಣದ ಮುಖ್ಯವೆನಿಸುವ ಯಾವತ್ತೂ ಭಾಗಗಳನ್ನು ಕುರಿತು ನವನಿರೂಪಣೆಯ ಕೃತಿಗಳನ್ನು ಬರೆದು ಪ್ರಕಟಿಸುವ ಉದ್ದೇಶವು ನಮಗಿದೆ. ಈ ಬಗ್ಗೆ ಒಂದು ನೋಟವನ್ನು ಈ ಕೃತಿಯ ಕೊನೆಯಲ್ಲಿಯ 'ನಮ್ಮ ಪ್ರಕಟಣೆ' ಗಳಿಂದ ಪಡೆಯಬಹುದು.

ತಿರಸ್ಕೃತ್ಯ, ಮನಸಿಕೃತ್ವಾ, ಮನಸಿಕೃತ್ಯ; ವಿಕಾರ್ಯ, ಕರ್ತುಂ, ಕಾರಯಿತುಂ ಚಿಕೀರ್ಷಿತುಂ ಏವಂಕಾರಂ ಕಥಂಕಾರಂ ದ್ವಿಧಾಕಾರಂ ದ್ವೇಧಾಕಾರಂ ಅಲಂ ಕರಿಷ್ಣುಃ ಇತ್ಯಾದಿ.

ಪ್ರಸಿದ್ಧವಾದುದರಲ್ಲಿ ಕೆಲವನ್ನು ಮಾತ್ರ ಇಲ್ಲಿ ಉದ್ಧರಿಸಿದೆ. ಇವಲ್ಲೀ ಸುಮಾರು 40 ಕೃದಂತಗಳು ಕನ್ನಡದಲ್ಲಿಯೂ ಪ್ರಸಿದ್ಧವೇ !

ಕೃದಂತರೂಪಮಾಲೆಯಲ್ಲಿ ಸುಮಾರು ಕೃದಂತರೂಪಗಳನ್ನು ಕೊಟ್ಟಿದೆ.

ಇನ್ನು ಈ ಧಾತುವಿಗೆ ಸೇರುವ ಉಪಸರ್ಗ–ಉಪಪದಗಳಿಂದಾಗಿ (ಉದಾ.ಗೆ ನಮ್ಮ – ಮುಂದೆ ಬರಲಿರುವ–, ಧಾತ್ವರ್ಥಕೋಶದಲ್ಲಿಯೇ ಸುಮಾರು 20 ಉಪಸರ್ಗಗಳು 28 ಉಪಪದಗಳನ್ನು ಪಟ್ಟಿಮಾಡಿ ಅರ್ಥಾದಿ ಗಳನ್ನು ನಿರೂಪಿಸಿದೆ) ಮತ್ತಿನ್ನೆಷ್ಟು ರೂಪಸಮೃದ್ಧಿ ಅರ್ಥಬಹುಲತೆಗಳಾಗ ಬಹುದೆಂದು ವಾಚಕರೆ ಊಹಿಸಬಹುದು.

ಮತ್ತೊಂದು ಉದಾ. ಗಮ್: ಹೋಗು.

ಗಂತವ್ಯ ಗಮನೀಯ ಗಮ್ಯ ಗಮನ ಗತಿ ಗಮಕ ಗಂತಾ ಆಗುಂತಕ ನಿಗಮ. ಆಗಮ ಭುಜಗ– ಭುಜಂಗಮ ತುರಗ–ತುರಂಗ–ತುರಂಗಮ ವಿಹಗ–ವಿಹಂಗ–ವಿಹಂಗಮ ಪ್ಲವಗ ಪನ್ನಗ ಉರಗ ಪಾರಗ ಸರ್ವಗ ದೂರಗ ದುರ್ಗ ದುರ್ಗಮ ಹೃದಯಂಗಮ ಇತ್ಯಾದೀತ್ಯಾದಿ.

1.2 ಕೃದಂತಗಳ ಆಕರಗಳು –I

1.21 ಈ ಹಿಂದಿನ ಯತ್ನಗಳು–1

ಈ ರೂಪಗಳನ್ನು ಪಡೆಯುವುದು ಹೇಗೆ ? ಮತ್ತು ಅವುಗಳ ಬಳಕೆ ಹೇಗೆ ? ಇವನ್ನು ಈ ರೀತಿಗಳಿಂದ ಪಡೆಯಬಹುದು.

(೧) ಆಧುನಿಕ ಕ್ರಮದಲ್ಲಿ ಬರೆಯಲಾದ ವ್ಯಾಕರಣ ಕೃತಿಗಳು : ಉದಾ : ಶ್ರೀ ಎಂ. ಆರ್. ಕಾಳೆ, (A Higher Sanskrit Grammar), ವಿ. ವಿ. ಉಪಾಧ್ಯೆ (Dhaturupachandrika) ಮುಂತಾದವರ ಕೃತಿಗಳು. ರೂಪಗಳುಂಟಾಗುವ ಕ್ರಮಗಳನ್ನರಿಯುವುದರಲ್ಲಿ

ಶ್ರೀ ಕೀಲ್‌ಹಾರ್ನ್ ಅವರ ಪುಸ್ತಕ ಅತ್ಯುಪಯುಕ್ತ (ವಾಮನ ಶಿವರಾಮ ಆಪಟೇಯವರ ಅಭಿಪ್ರಾಯವೂ ಇದೇ ಆಗಿದೆ -A Guide to Sanskrit Composition). ಇಲ್ಲಿ ಉಲ್ಲೇಖಿಸಿದ ಕೃತಿಗಳು ಇಂಗ್ಲೀಷಿನಲ್ಲಿವೆ. ಹಿಂದೀ ಭಾಷೆಯಲ್ಲಿ ಹಲಕೆಲವು ಕೃತಿಗಳು ಈ ರೀತಿಯ ನಿರೂಪಣೆಗೆ ಯತ್ನಿಸಿವೆ. ಕನ್ನಡದಲ್ಲಿ, ಕೀಲ್‌ಹಾರ್ನ್‌ರವರಂತೆ ವ್ಯವಸ್ಥಿತವಾಗಿ ಪ್ರಾಯೇಣ ಯಾರೂ ಬರೆದುದೇ ಇಲ್ಲ.

(೨) ಕೃದಂತ ರೂಪಗಳನ್ನು (ಕೆಲವೊಮ್ಮೆ ಲಕಾರರೂಪಗಳೊಡನೆಯೇ) ತೋರಿಸಿಕೊಡುವ ಪುಸ್ತಕಗಳು : ಉದಾ. ಶ್ರೀಕಂಠಶಾಸ್ತ್ರಿಗಳ ಧಾತುರೂಪ ಪ್ರಕಾಶಿಕಾ (ತೆಲುಗು ಲಿಪಿ), ಟಿ. ಆರ್. ಕೃಷ್ಣಾಚಾರ್ಯರ ಬೃಹದ್ಧಾತು ರೂಪಾವಲಿ (ಕುಂಭಕೋಣದಲ್ಲಿ ಪ್ರಕಟಿತ) ಜೀವಾನಂದ ವಿದ್ಯಾಸಾಗರರ ಧಾತುರೂಪಾದರ್ಶ ಹಾಗೂ ಶ್ರೀ ಮದ್ಗುರುನಾಥವಿದ್ಯಾನಿಧಿಯ ಧಾತುಕಲ್ಪದ್ರುಮ (ಕಲ್ಕತ್ತೆಯಲ್ಲಿ ಪ್ರಕಟವಾದುವು) ಇತ್ಯಾದಿ ಗ್ರಂಥಗಳು. ಇವುಗಳಲ್ಲಿ ಬಹುಮುಖ್ಯವೆನಿಸುವಂತಹುದು ಸಾಯಣವಿರಚಿತ ಮಾಧವೀಯ ಧಾತುವೃತ್ತಿ (ಮೈಸೂರಿನಲ್ಲಿ ಪ್ರಕಟಿತ). ಇವುಗಳಲ್ಲಿ ಧಾತುರೂಪಾದರ್ಶವೊಂದನ್ನು ಹೊರತಾಗಿ ಮಿಕ್ಕವುಗಳಲ್ಲಿ ರೂಪಸಮರ್ಥನೆಗಾಗಿ ಪಾಣಿನೀಯ ಅಷ್ಟಾಧ್ಯಾಯೀ ಸೂತ್ರಗಳ ಉಲ್ಲೇಖವು ಹೇರಳವಾಗಿದೆ. ಹಲವು ಸಂಪುಟಗಳಲ್ಲಿ ಪ್ರಕಟವಾದ ಮಾಧವೀಯ ಧಾತುವೃತ್ತಿಯೇ ಇವಿಷ್ಟರಲ್ಲೂ ಅತಿ ಪ್ರಸಿದ್ಧ ಮತ್ತು ವಿದ್ವದ್ವೃಂದದಲ್ಲಿ ಬಹ್ವಾದೃತವೆನ್ನಬಹುದು. ಇಂದು ಇವಿಷ್ಟರಲ್ಲಿ ಪ್ರಾಯಃ ಯಾವೊಂದು ಕೃತಿಯೂ ಲಭ್ಯವಿಲ್ಲ -ಕೃಷ್ಣಜೀಭಾಸ್ಕರ ವೀರಕರರ ಸುಲಭಧಾತುರೂಪಕೋಶವು ಸಹ. ಲಭ್ಯವಿರುವ ಶ್ರೇಷ್ಠ ಕೃತಿಯೆಂದರೆ ಮದ್ರಾಸಿನ ಮೈಲಾಪುರದಿಂದ ಈಚೆಗೆ ಪ್ರಕಟಿತವಾದ ಕೃದಂತರೂಪಮಾಲಾ (ಐದು ಸಂಪುಟಗಳು ; 1965 ರಿಂದ 1971ರ ವರೆಗೆ ಒಂದೊಂದಾಗಿ ಪ್ರಕಟವಾದವು.

(೩) ಪ್ರಸಿದ್ಧ ಬೃಹದ್ ವಿಶ್ವಕೋಶಗಳು : ತಾರಾನಾಥತರ್ಕವಾಚಸ್ಪತಿಯವರ ವಾಚಸ್ಪತ್ಯ, ರಾಜಾರಾಧಾಕಾಂತದೇವ ಬಹಾದುರರ ಶಬ್ದಕಲ್ಪದ್ರುಮ ಇ.

(೪) ಪ್ರೌಢಗ್ರಂಥಗಳು – ಪ್ರಕ್ರಿಯಾ ಕೌಮುದೀ, ಧರ್ಮಕೀರ್ತಿಯ ರೂಪಾವತಾರ, ಭಟ್ಟೋಜಿ ದೀಕ್ಷಿತನ ಸಿದ್ಧಾಂತಕೌಮುದೀ, ಶ್ರೀ ವರದ ರಾಜನ ಮಧ್ಯಸಿದ್ಧಾಂತಕೌಮುದೀ ಮತ್ತು ಲಘುಸಿದ್ಧಾಂತ ಕೌಮುದೀ ಇ.

1.21 ಅವುಗಳ ಒಂದು ಅವಲೋಕನ

ಸಂಗ್ರಹವಾಗಿ ಹೇಳುವುದಾದರೆ ನಿರ್ದಿಷ್ಟ ಧಾತುವಿಗೆ ನಿರ್ದಿಷ್ಟ ಕೃತ್ ಪ್ರತ್ಯಯದಲ್ಲಿನ ರೂಪಗಳನ್ನು ಖಚಿತವಾಗಿ ತೋರಿಸದಿರುವುದೇ ಇವುಗಳೆಲ್ಲದರ ಅನಾನುಕೂಲ್ಯವೆನ್ನಬಹುದು.

ರೂಪನಿಷ್ಪಾದನ – ಸೂಚನೆ

ಕೀಲ್‌ಹಾರ್ನ್, ಉಪಾಧ್ಯೆ ಮುಂತಾದವರು ರೂಪನಿಷ್ಪಾದನದಲ್ಲಿ ನಡೆಯತಕ್ಕ ಬಗೆ - ಹೆಜ್ಜೆಗಳನ್ನು ಕ್ರಮಬದ್ಧವಾಗಿ ತೋರಿಸಿಕೊಡುವುದರಲ್ಲಿ ಶ್ರಮಿಸಿದ್ದಾರೆ. ಒಂದು ನಿರ್ದಿಷ್ಟ ಧಾತುವಿನ ರೂಪವನ್ನು ಕೊಡುವುದು ಅವರ ಉದ್ದೇಶವೇ ಆಗಿಲ್ಲವಾದ್ದರಿಂದ ಅವಲ್ಲಿ ಈ ಪ್ರಮೇಯವೇ ಇಲ್ಲ. ಅವುಗಳಲ್ಲಿ ಉಲ್ಲೇಖವಾಗಿರುವ ಸೂತ್ರಗಳ (ಮತ್ತು/ಅಥವಾ ತದನುವಾದಗಳ) ಬಲ ದಿಂದಲೇ ಮುಂದುವರಿದು ಎಲ್ಲ ರೂಪಗಳನ್ನು ಪಡೆಯುವುದೂ ಸುಲಭ ಸಾಧ್ಯವಲ್ಲ.

ಇನ್ನುಳಿದ ತೆರನ ಕೃತಿಗಳು ಇತ್ತ ಆರಂಭಿಸುವವರಿಗೂ ಅತ್ತ ವಿದ್ವಾಂಸ ರಿಗೂ ಆಗದಂತಿವೆ. ಸೂತ್ರೋಲ್ಲೇಖಗಳಿಂದ ರೂಪಸಮರ್ಥನೆಯು ಪ್ರಾರಂಭಿ ಸುವವರಿಗೆ ಅನವಶ್ಯ. ಬಹು ಅಧ್ಯಯನ ಮಾಡಿಲ್ಲದವರಿಗೆ ಪೂರ್ಣಬೋಧ್ಯವಲ್ಲ. ವಿದ್ವಾಂಸರು ಬಲ್ಲವರೇ ; ಅವರಿಗೊಂದು 'ಜ್ಞಾಪಕ'ವೆಂದುಕೊಳ್ಳಬಹುದು.

ಅಕಾರಾದಿ

ಮತ್ತು ಇವುಗಳಲ್ಲಿ ಹಲವು ಕ್ಲೇಶ–ದೋಷಗಳು ಸೇರಿಕೊಂಡಿವೆ. ಆಧುನಿಕ ವಿದ್ಯಾಭ್ಯಾಸದ ಸಂಪರ್ಕವನ್ನು ಹೊಂದಿದ್ದ ಶ್ರೀ ಜೀವಾನಂದ ವಿದ್ಯಾಸಾಗರ ಇವರ ಧಾತುರೂಪಾದರ್ಶ (ಕಲ್ಕತ್ತ 1875) ವೆಂಬ ಗ್ರಂಥ ವನ್ನು ಬಿಟ್ಟರೆ ಪ್ರಾಯೇಣ ಮತ್ತಾವ ಗ್ರಂಥದಲ್ಲೂ ಧಾತುಗಳನ್ನು ಅಕಾರಾ

ದಿಯಾಗಿ ಕೊಟ್ಟಿಲ್ಲವೆಂದೇ ಹೇಳಬಹುದು. ಗಣಶ:-ಪದಶ: ನಿರೂಪಣೆಯೇ ಸರ್ವತ್ರ. ಸರಿ, ಅದರೊಳಗಾದರೂ ಅಕಾರಾದಿಯೇ? ಅದೂ ಇಲ್ಲ. ಹೋಗಲಿ, ಕಲಿಕೆಯು ಕ್ರಮವಾಗಿ ಸಾಗಲೆಂದು ಮೊದಲು ಸರಳರೂಪಗಳು, ಆಮೇಲೆ ಕ್ಲಿಷ್ಟರೂಪಗಳು -ಎಂದೀ ನಿರೂಪಣೆಗಾಗಿ ಅಕಾರಾದಿಯನ್ನು ಕೈಬಿಟ್ಟಿದೆ ಯೆನ್ನೋಣವೇ ? ಅದೂ ಆಗದು. ಏಕೆಂದರೆ 'ಕ್ರಮಕ್ರಮವಾದ ಕಲಿಕೆಯು ಅನ್ವಯಿಸುವುದು ಯಾವುದಕ್ಕೆ ? ಸಾರ್ವಧಾತುಕ ರೂಪಗಳಿಗೋ ?, ಆರ್ಧಧಾತುಕಗಳಿಗೋ ? ಕೃದಂತಗಳಿಗೋ ?, ಒಂದಕ್ಕಾದರೆ ಮತ್ತೊಂದ ಕ್ಕಾಗದಂತಿದೆ ಈ ಭಾಷೆಯಲ್ಲಿನ ಶಬ್ದಗಳ ರಚನೆ (Structure).

ಮಾದರಿ

ಹಾಗೆ ನೋಡಿದಾಗ ಉಪಾಧ್ಯೆಯವರ ಕೃತಿಯು ಈ (ಕಲಿಕೆಯ) ದೃಷ್ಟಿಯಲ್ಲಿ ಸ್ವಲ್ಪ ಚೆನ್ನಾಗಿ ಬಂದಿದೆಯೆನ್ನುವುದಾದರೂ, ಯಾವ ಧಾತು ವಿಗೆ ಯಾವ ಮಾದರಿಯೆಂಬುದಕ್ಕೆ ಎಲ್ಲೂ ನಿರ್ದೇಶನವಿಲ್ಲದೆ ಹಾಗೂ ಪ್ರತಿ ಮಾದರಿಯಡಿಯಲ್ಲೂ ಸಮಗ್ರವಾಗಿ (exhaustive) ಅಭ್ಯಾಸ ಸೂಚಿ (drilling) ಯಿಲ್ಲದೆ ವಿದ್ಯಾರ್ಥಿಯು ತನಗೆ ಬೇಕಾಗಿದ್ದರೂಪವು ನಿಶ್ಚಿತ ವಾಗಿ ದೊರೆಯಬೇಕೆಂದೆಂದುಕೊಳ್ಳುವುದೇ ಅಸಂಗತವೆನಿಸಿಬಿಡುತ್ತದೆ.

ಅಂತೂ ಕೆಲವೇ ಮಾದರಿ (worked examples) ಗಳನ್ನು ಮಾತ್ರ ಕೊಟ್ಟು ಪ್ರಭೂತವಾದ ಅಭ್ಯಾಸದ ಲೆಕ್ಕ (riders and problems) ಗಳನ್ನು ಮಾಡಸೂಚಿಸುವ ಗಣಿತದ ಪುಸ್ತಕವು ಯಾವ ಲೆಕ್ಕಕ್ಕೂ ಉತ್ತರದಿಕ್ಸೂಚಿ (hints on solving the problem) ಯನ್ನಾಗಲಿ, ಉತ್ತರ (final answer)ವನ್ನಾಗಲೀ ಸೂಚಿಸದೇ ಹೋದಾಗ ಪುಸ್ತಕವನ್ನು ತೆಗೆದುಕೊಂಡಾತ ಅನುಭವಿಸುವುದನ್ನೇ ಇಲ್ಲಿಯೂ ಅನುಭವಿಸುತ್ತಾನೆ. ಅರ್ಥಾತ್ ಅನಿಶ್ಚಯ-ಅಧೈರ್ಯಗಳೇ ಆತನ ಪಾಲಿಗೆ ಬರತಕ್ಕವು.

'ಸುಲಭ' ಧಾತುಗಳೇ 'ಕಷ್ಟ'!

ಅದ್ಭುತವೆಂದರೆ ರೂಪಗಳನ್ನು ಸಮಗ್ರವಾಗಿ ಕೊಡುವೆವೆನ್ನುವ

ಪ್ರತಿಜ್ಞೆಯನ್ನೇ ಈವರೆಗೆ ಯಾರೂ ಮಾಡಿಲ್ಲ. ಎಲ್ಲ ಕ್ಲಿಷ್ಟ ರೂಪಗಳನ್ನು ಕೊಟ್ಟಿರುವುದಾಗಿಯೇ ಪ್ರತಿಯೊಬ್ಬರೂ ಹೇಳಿಕೊಂಡಿರುವುದು. 'ಕ್ಲಿಷ್ಟ" ವೆನ್ನುವುದು ಎಷ್ಟಾದರೂ ಸಾಪೇಕ್ಷ (relative) ಪದವಷ್ಟೆ. ಹೀಗಾಗಿ ಸಂಸ್ಕೃತವನ್ನು ಕಲಿಯಲು ಆರಂಭಿಸುವಾತನಿಗೆ ಸುಲಭಧಾತುಗಳ ವಿಷಯ ದಲ್ಲೂ ಒಂದು ರೀತಿಯಲ್ಲಿ ಅಧೈರ್ಯವೇ ಉಳಿದುಕೊಳ್ಳುತ್ತದೆ.

ಯಾವ ಧಾತುವಿನ ಯಾವ ರೂಪವನ್ನು ಕೊಟ್ಟಿಲ್ಲವೆಂಬುದೂ ಆ ಧಾತು ವಿರುವ ಪುಟವನ್ನು ತೆಗೆದು ನೋಡಿದ ಮೇಲೆಯೇ ತಿಳಿದುಬರುವುದು. ಒಂದೇ ಧಾತು ಬೇರೆ ಬೇರೆ ಗಣಗಳಲ್ಲಿರುವುದಾದರಂತೂ ಆಗ ಸಮಸ್ಯೆ ಮತ್ತೊ ಒಂದು ಬಗೆಯಾಗುತ್ತದೆ. (ಧಾತುಗಳ ಅಕಾರಾದಿ ಪಟ್ಟಿಯನ್ನು ಮೊದಲೋ ಕೊನೆಯಲ್ಲೋ ಸೇರಿಸಿದ್ದರೆ, ಅಷ್ಟೇ ಅಲ್ಲ, ಜೊತೆಯಲ್ಲೇ ಗಣಪದಗಳ ನಿರ್ದೇಶ ವನ್ನೂ ಅದೃಷ್ಟವಶಾತ್ ಮಾಡಿದ್ದರೆ, ಆಗ,) ವಿದ್ಯಾರ್ಥಿಯು ನಿರ್ದಿಷ್ಟ 'ಗಣ' ದೊಳಗೆ ಆ 'ಪದ' ದ ಮಧ್ಯದಲ್ಲಿ ಹುಡುಕಲಾರಂಭಿಸಬೇಕಾಗುತ್ತದೆ.

ಕಷ್ಟ ಪರಂಪರೆ–೧

ಕಷ್ಟಪಟ್ಟು ಇವನ್ನು ಸಾಧಿಸಿದರೂ ಮುಂದೆ ಹಲವು ಕಷ್ಟಗಳು ಅವನಿಗೆ ತಲೆದೋರಬಹುದು. ಒಂದೆರಡು ರೂಪಗಳಿಗೆ ಮತ್ತಾವುದನ್ನೊ ಮಾದರಿಯನ್ನಾಗಿ ಕೊಟ್ಟಿರುತ್ತದೆ. ಅಲ್ಲಿಯೇ ರೂಪಗಳು ಸಿಕ್ಕರೆ ವಿದ್ಯಾರ್ಥಿಯು ಒಳ್ಳೆಯ ಅದೃಷ್ಟವೆಂದೇ ಅದನ್ನು ಭಾವಿಸಬೇಕು. ಏಕೆಂದರೆ ಬಹು ಸಂದರ್ಭಗಳಲ್ಲಿ ಅಲ್ಲಿ ಇನ್ನೊಂದು ಧಾತುವಿನ ರೂಪವನ್ನು ಮಾದರಿಯಾಗಿ ಸೂಚಿಸಿರುತ್ತದೆ. ಹೀಗೆ ಕೊನೆಗೆ 4ನೆಯ ಬಾರಿಯೋ 5ನೆಯ ಭಾರಿಯೋ ಹುಡುಕಿದಾಗಲೇ ರೂಪಗಳು ದೊರಕುವುದೇ ಸಾಮಾನ್ಯ (usual). ಆದರದೋ ! ಅಷ್ಟು ಹೊತ್ತಿಗೆ ರೂಪಗಳ ಮಾದರಿಯೇ ಭಿನ್ನವಾಗಿ ಬಿಟ್ಟಿರುತ್ತದೆ! ಈ ಬಗ್ಗೆ ಇನ್ನು ಸ್ವಲ್ಪ ಮುಂದೆ, ಉದಾಹರಣೆಗಳನ್ನೇ ಕೊಟ್ಟು ವಿಶದ ಪಡಿಸುತ್ತೇವೆ.

ಕಷ್ಟ ಪರಂಪರೆ–೨

ವಿದ್ಯಾರ್ಥಿಯು ಈ ದುರ್ಗಗಳನ್ನೆಲ್ಲ ದಾಟಿದರೂ ಕಷ್ಟಪರಂಪರೆ

ಮುಗಿಯಿತೆನ್ನುವಂತಿಲ್ಲ. ಏಕೆಂದರೆ ಈ ತೆರನಾದ ಪುಸ್ತಕಗಳಲ್ಲಿ ಸಹಜವಾಗಿಯೇ ಮುದ್ರಣದೋಷಗಳ ಹಾವಳಿ ಸ್ವಲ್ಪ ಹೆಚ್ಚೇ. ಇದಕ್ಕೆ ಉತ್ಕೃಷ್ಟ ನಿದರ್ಶನಗಳೆಂದರೆ ಬಹುಕಾಲ ಬಹುತ್ರ ಪ್ರಸಿದ್ಧವಾಗಿದ್ದ ಧಾತುರೂಪಪ್ರಕಾಶಿಕೆ ಮತ್ತು ಬೃಹದ್ಧಾತುರೂಪಾವಲಿಗಳು. (ದಶಕೃದಂತ ರೂಪಗಳನ್ನು ಮಾತ್ರ ಕೊಟ್ಟಿರುವ) ಧಾತುರೂಪ ಪ್ರಕಾಶಿಕೆಯಲ್ಲಿ ಶುದ್ಧಾಶುದ್ಧ ಪತ್ರಿಕೆಯೇ ಸುಮಾರು 50 ಪುಟಗಳು! ಅಲ್ಲೇನು, ಬರೀ ಮುದ್ರಣದೋಷಗಳೇ? ಇಲ್ಲ. ಬಿಟ್ಟು ಹೋಗಿರುವ ರೂಪಗಳನ್ನು ಸೇರಿಸಿರುವುದುಂಟು. ಇದೇನೋ ಸ್ವಾಗತಾರ್ಹವೇ. ಆದರೆ, ಕೊಟ್ಟಿರುವ ಮಾದರಿ ಸರಿಯಲ್ಲ "ಬೇರೆ ಮಾದರಿ"ಯೆನ್ನುವುದು; ಗ್ರಂಥಕರ್ತನೇ ಒಂದು ರೂಪವೆಂದುಕೊಂಡು ಮುದ್ರಾಪಿಸಿದ್ದುದು ಕೊನೆಗೆ ಸರಿಯಲ್ಲವೆಂದು ತನಗೇ ತೋರಿಬಂದು ಅದನ್ನು ಇಲ್ಲಿ ಹಾಗೆ ಸೂಚಿಸಿರುವುದೂ ಉಂಟು! ಉದಾಃ ಗೆ ಧ್ವಂ-ಢ್ವಂಗಳ ವ್ಯತ್ಯಾಸ ಹೀಗಾದಾಗ ವಿದ್ವಾಂಸರಿಗೇ ಭ್ರಮೆಯಾಗುವುದೆನ್ನುವಾಗ ಇನ್ನು ವಿದ್ಯಾರ್ಥಿಯ ಪಾಡೇನು? ಕೆಲವು ರೂಪಗಳನ್ನೆಲ್ಲ ಕೊಟ್ಟು ಬಿಟ್ಟು, ಶುದ್ಧಾಶುದ್ಧ ಪತ್ರಿಕೆಯಲ್ಲಿ ಸೂತ್ರವೊಂದನ್ನುದಾಹರಿಸಿ "ಇವಾವ ರೂಪಗಳೂ ಆಗವೆಂ" ದು ಹಲವು ರೂಪಗಳನ್ನು ಒಟ್ಟಿಗೆ ತೊಡೆದು ಹಾಕಿದರೆ ವಿದ್ಯಾರ್ಥಿಯ ಗತಿಯೇನು? ಪುಟಸಂಖ್ಯೆಯಲ್ಲಿ ದೋಷ, ಒಂದೇ ಪುಟದಲ್ಲಿ "9 ಸಾಲುಗಳು ಪೂರಾತಪ್ಪು-ಕೆಲವು ಅಕ್ಷರಗಳನ್ನು ಬಿಟ್ಟಿರೆ"-ಎಂದೆಲ್ಲಾ ಆದರೆ ವಿದ್ಯಾರ್ಥಿ ಮಾಡುವುದೇನು? ಇತ್ಯಾದಿ. ಅಂತೂ ವಿದ್ಯಾರ್ಥಿಯು ಧಾತುವಿನ ಗಣ-ಪದಗಳನ್ನೊಂದು ಕಡೆ ಒಮ್ಮೆ ಅರಿತು, ರೂಪಗಳನ್ನು ಮತ್ತೊಂದು (ಅಥವಾ ಒಂದೊಂದಾಗಿ ಹಲವು) ಕಡೆ ಮತ್ತೊಮ್ಮೆ ತಿಳಿದು ಕೊನೆಗೆ ಮಗದೊಮ್ಮೆ ಶುದ್ಧಾಶುದ್ಧ ಪತ್ರಿಕೆಯನ್ನು ನೋಡಿಕೊಂಡುಬಿಟ್ಟು ನಿಟ್ಟುಸಿರು ಬಿಡಬಹುದು!

ಅನುಬಂಧದ ಬಂಧ

ಇಷ್ಟಾಗಿ ಧಾತುಗಳ ನಿರ್ದೇಶವು, ಒಂದೆರಡು ಪುಸ್ತಕಗಳನ್ನು ಬಿಟ್ಟು ಮಿಕ್ಕೆಡೆಯಲ್ಲೆಲ್ಲಾ "ಸಾನುಬಂಧ" ವಾಗಿಯೇ ದೊರೆಯತಕ್ಕದು- ನಿರನುಬಂಧವಾಗಿಯೂ-ಸೂಚಿಸಿದ್ದರೆ ಪುಸ್ತಕವು ಹೆಚ್ಚು ಉಪಕಾರಿಯಾಗುತ್ತಿತ್ತಲ್ಲವೇ ? ಇಂದಂತೂ ಪಾರಂಪರಿಕವಾದ ಶಾಸ್ತ್ರಾಭ್ಯಾಸವೇ ಲುಪ್ತವಾಗುತ್ತಿರಲು

ವಿದ್ಯಾರ್ಥಿಗಳಿಗಿರಲಿ ಪ್ರೊಫೆಸರುಗಳೆನಿಸಿಕೊಂಡವರಿಗೇ ಸಾನುಬಂಧ ಧಾತುಗಳ ಸ್ಮರಣೆಯಿಲ್ಲವಾಗಿದೆ! ಹೀಗಾಗಿ "ನಿಂದತಿ" ಇತ್ಯಾದಿ ರೂಪಗಳನ್ನು ಪಡೆಯಲು "ಣಿದಿ" ಧಾತುವನ್ನು ಹುಡುಕಬೇಕೆಂದು ತಿಳಿಯುವದಾದರೂ ಹೇಗೆ? ಕಲ್ಪತೇ- ಕೃಪೂ, ಕೀರ್ತಯತಿ- ಕೄತ, ಗಚ್ಛತಿ-ಗಮ್ಲೃ, ನಂದತಿ – ಟುನದಿ' ಸ್ತೌತಿ-ಷ್ಟುಞ್ ಇತ್ಯಾದಿಗಳೂ ಹಾಗೆಯೇ.

ಅಂದ ಮೇಲೆ ವ್ಯವಸ್ಥೆಗೆಂದು ಮೊದಲನೆಯ ಗಣ ಪರಸ್ಮೈಪದಿಗಳಲ್ಲಿ ಮೊದಲು ಅಕಾರಾಂತ, ಆಮೇಲೆ ಇಕಾರಾಂತ, ಆಮೇಲೆ ಈ ಕಾರಾಂತ (ಅದಂತ, ಇದಂತ, ಈದಂತ) ಇತ್ಯಾದಿಗಳ ಕ್ರಮವೂ ಸುಬೋಧ್ಯವಾಗದು. ಈವರೆಗಿನ ಯಾವೊಂದು ಕೃತಿಯಾದರೂ ಸಾನುಬಂಧ-ನಿರನುಬಂಧ ರೂಪ ಗಳ ಸಮೀಕರಣ (equation) ವನ್ನು ಕೊಟ್ಟಿದೆಯೇನು ? ಇಲ್ಲ!

ಅಂತೆಯೇ ಧಾತುಪಾಠವನ್ನನುಸರಿಸಿ ಭೂ(ಪ.) ಏಧ(ಆ) – ಹೀಗೆ ಕೊಟ್ಟುಕೊಂಡು ಹೋಗುವ ಕ್ರಮವೂ ಇಂದು ಸುಕರವಾದ ಕ್ರಮವೆನಿಸಿಸ ದಂತಾಗಿದೆ.

ಶಬ್ದರೂಪಜ್ಞಾನ

ಕೊನೆಗೆ ಕೃದಂತ ರೂಪಗಳನ್ನು ನಡೆಸಲೂ ಹಲವು ಮಾದರಿಶಬ್ದಗಳ ಪರಿಜ್ಞಾನ ಬೇಕು. ವಿಶೇಷವಾಗಿ ಹಲಂತ ಶಬ್ದಗಳಲ್ಲಿ ಅಂತನಿರ್ದೇಶ ಮಾತ್ರವನ್ನು ಮಾಡಿದರೆ ಅದು ಹೆಚ್ಚು ಪ್ರಯೋಜನಕಾರಿಯೇ ಆಗದು. ಪ್ರಾತಿಪದಿಕಜ್ಞಾನಮಾತ್ರದಿಂದ ಶಬ್ದದ ಎಲ್ಲ ವಿಭಕ್ತಿಗಳಲ್ಲಿಯ ರೂಪಗಳು ಸುಲಭವೇದ್ಯವಾಗವು. ಆದ್ದರಿಂದ ಇದಕ್ಕಾಗಿ ಹಲಂತಶಬ್ದಗಳನ್ನು ತಿಳಿಸು ವಾಗಲೇ ವರ್ತಮಾನಾದಿ ಕೃದಂತಗಳಲ್ಲಿ ರೂಪಗಳು ಭ್ರಾಮಕವಾಗಿರುವು ದೆಂಬುದನ್ನು ಮನಗಂಡು ಅದಕ್ಕೆ ಗಮನಹರಿಸಿ ವಿಶೇಷವಾಗಿ ಸೂಚಿಸುವ ಶಬ್ದರೂಪಾವಲಿಗಳು ಆವಶ್ಯಕವೆನಿಸುತ್ತವೆ. ಒಂದೇ ಒಂದು ಪುಸ್ತಕವನ್ನು ಹೊರತಾಗಿ ಬೇರಾವ ಶಬ್ದಮಂಜರಿಗಳೂ ಈ ವಿಷಯವನ್ನು ಎತ್ತಿ ತೋರಿಸಿಲ್ಲ ಹೀಗಾಗಿ ತಕಾರಾಂತ ವೆಂದು ವಿದ್ಯಾರ್ಥಿಯು "ದದತ್" ಶಬ್ದವನ್ನು 'ಪಚತ್' ನಂತೆಯೋ, 'ಕುರ್ವತ್' ಶಬ್ದವನ್ನು 'ಧೀಮತ್' ನಂತೆಯೋ ನಡೆಸಿದಥ

ತಪ್ಪೇ ಆಗಿಬಿಡುತ್ತದೆ. 'ಮಹತ್' ಶಬ್ದದಂತೆ ಇಲ್ಲಿಯ ಯಾವೊಂದು ಶಬ್ದವೂ ನಡೆಯದು !

ಕೆಲವು ಸಣ್ಣ ಕೃತಿಗಳು

ಇರುವುದರಲ್ಲಿ ಸುಮಾರಾಗಿ ವ್ಯವಸ್ಥಿತವಾಗಿಯೇ ಮತ್ತು ಇಂದಿನ ಆರಂಭದ ವಿದ್ಯಾರ್ಥಿಗಳಿಗೆ ಉಪಕರಿಸುವಂತೆಯೇ ಬರೆದಿರುವ ಕೃತಿಗಳೆಂದರೆ ಸುಪ್ತಿಙಂತಸುಬೋಧಿನೀ ಮತ್ತು ವೀರಕರರ ಸುಲಭಧಾತುರೂಪಕೋಶ. ಇವೆರಡೂ ಅಲಭ್ಯವೇ ಆಗಿವೆ. ಮೊದಲನೆಯ ಕೃತಿಯಲ್ಲಿ ಗಣಪದಗಳ ಕ್ರಮ ವಿದೆ ; ನಮ್ಮ ಪುಸ್ತಕದ ಮೂರನೆಯ ಪ್ರತ್ಯಯ 'ಯ' (ಣ್ಯತ್/ಯತ್/ ಕ್ಯಪ್) ವನ್ನು ಕೊಟ್ಟೇ ಇಲ್ಲ. ಬೆಂಗಳೂರಿನಲ್ಲಿ ಪ್ರಕಟವಾಗಿರುವ ಲಘು ಧಾತು ಮಂಜರಿಯಲ್ಲಿ ಅಕಾರಾದಿ ಕ್ರಮದಲ್ಲಿ ಧಾತುನಿರ್ದೇಶವಿದ್ದು ಈ 'ಯ' ಪ್ರತ್ಯಯಾಂತ ರೂಪವನ್ನು ಕೊಟ್ಟಿದೆಯಾದರೂ ಅಲ್ಲಿಯ ರೂಪ-ಬಾಹುಲ್ಯಸಂಭವಗಳನ್ನೂ ಅನೀಯಾಂತ (ನಮ್ಮಲ್ಲಿಯ ಎರಡನೆಯ ರೂಪ ಗಳು) ರೂಪಗಳನ್ನೂ ಭವಿಷ್ಯತ್ ಕೃದಂತಗಳನ್ನೂ ಕೊಟ್ಟಿಲ್ಲ. ಶತ್ರಂತ ರೂಪಗಳಲ್ಲಿ ನುಮಾಗಮ ಸಹಿತ ಸ್ತ್ರೀ ರೂಪಗಳನ್ನು ಕೊಟ್ಟಿಲ್ಲ. ಮತ್ತು ಧಾತುಗಳ ಸಂಖ್ಯೆಯೂ ನಮ್ಮ ಕೃತಿಯ ಮೂರನೆಯ ಒಂದರಷ್ಟಿದೆ ; ಆದರೂ ಅದು ಬಾಲಪಾಠಿಗಳಿಗೆ ಉಪಯುಕ್ತವೇ ಆಗಿದೆ. ಸುಲಭಧಾತು ರೂಪಕೋಶದಲ್ಲಿಯ ಮುಖ್ಯ ತೊಡಕೆಂದರೆ ಧಾತುಗಳನ್ನು ಸರಳ-ಕ್ಲಿಷ್ಟ ಗಳೆಂದು ವಿಭಾಗಿಸಿಕೊಂಡು ಅವನ್ನು ಬೇರೆ ಬೇರೆ ಸಂಪುಟ (Volume) ಗಳಲ್ಲಿ ದೊರೆಯುವಂತೆ ಮಾಡಿರುವುದು. ಹೀಗಾಗಿ ಅಕಾರಾದಿ ಕ್ರಮವಿದ್ದರೂ ಎಲ್ಲ ಸಂಪುಟಗಳಲ್ಲಿ ಬೇರೆ ಬೇರೆಯಾಗಿ ಹುಡುಕಬೇಕಾಗುತ್ತದೆ. ಎಲ್ಲ ಸಂಪುಟಗಳು ದೊರೆಯದಿದ್ದರೆ ಕೆಲವು ಧಾತುಗಳ ರೂಪಗಳು ದೊರೆಯ ದಂತೆಯೇ ಸರಿ. ಈಗಂತೂ ಯಾವ ಸಂಪುಟವೂ ಲಭ್ಯವಿಲ್ಲ.

ವ್ಹಿಟ್ನಿಯವರ ಕೃತಿ

ಇನ್ನುಳಿದಿರುವುದೆಂದರೆ ಡಬ್ಲ್ಯು. ಡಿ. ವ್ಹಿಟ್ನಿಯವರ ಇಂಗ್ಲೀಷ್ ಲಿಪಿ ಯಲ್ಲಿ ಮುದ್ರಿತವಾಗಿರುವ The Roots, Verb-forms and Primary Derivatives of the Sanskrit Language,

ಎಂಬ ಕೃತಿ ಹಾಗೂ ಮದ್ರಾಸಿನ 'ಸಂಸ್ಕೃತ ಎಜುಕೇಷನ್ ಸೊಸೈಟಿ'ಯ ಬೃಹತ್ ಪ್ರಕಟಣೆ 'ಕೃದಂತ ರೂಪಮಾಲಾ'. ಮೊದಲನೆಯದು ಸುಮಾರು 800 ಧಾತುಗಳ ನಾನಾರೂಪಗಳನ್ನು ಕೊಟ್ಟಿದೆ. ಎರಡನೆಯದರಲ್ಲಿ ಸಮಸ್ತ (2039) ಧಾತುಗಳನ್ನೂ ಕೊಟ್ಟಿದೆ.

ಇವಲ್ಲಿ ಮೊದಲನೆಯ ಕೃತಿಯ ಧ್ಯೇಯೋದ್ದೇಶವೇ ಭಿನ್ನವಾಗಿವೆ. ಮುಖ್ಯವಾಗಿ, ತಾನು ಬರೆದ ಸಂಸ್ಕೃತ ವ್ಯಾಕರಣ ಗ್ರಂಥಕ್ಕೆ ಇದನ್ನೊಂದು ಅನುಬಂಧವಾಗಿ ರಚಿಸಿರುವುದನ್ನು ಗ್ರಂಥಕರ್ತನೇ ಹೇಳಿಕೊಂಡಿದ್ದಾನೆ. ಅದಕ್ಕಾಗಿ ಅವನು "all the quotable roots of the language"– ಇದನ್ನು ಆರಿಸಿಕೊಂಡಿದ್ದಾನಂತೆ. ಗ್ರಂಥದ ಒಂದು ಪ್ರಧಾನೋದ್ದೇಶವೇ chronology (ಐತಿಹಾಸಿಕ ಪೌರ್ವಾಪರ್ಯ) ವಾಗಿರುವುದರಿಂದ, ಪ್ರತಿಯೊಂದು ರೂಪದಬಗೆಗೂ ಇದು ಎಷ್ಟು ಹಳೆಯದು, ಎಷ್ಟುಬಾರಿ ಪ್ರಯುಕ್ತವಾಗಿದೆ – ಎಲ್ಲಿಂದ ಹಿಂದೆ, ಎಲ್ಲಿಂದ ಮುಂದೆ–, ಇತ್ಯಾದಿಗಳತ್ತ ಅವನ ಮುಖ್ಯಗಮನ ಹರಿದಿದೆ. ಅದಕ್ಕಾಗಿ ಆತನು ರೋಥ್–ಬೋಟ್ಲಿಂಗರ ಕೋಶವನ್ನೇ ಪ್ರಧಾನವಾಗಿ ಆಧರಿಸಿದ್ದಾನೆ. ಆದರೆ ಅದೃಷ್ಟವಶಾತ್ ಆ ಕೋಶದಂತೆ ವೃತ್ ಧಾತುವನ್ನು ವರ್ತ್ ಎಂದು ಕೊಡುವುದು ಇತ್ಯಾದಿಯಾಗಿ ಮಾಡಿಕೊಂಡಿಲ್ಲ. ಏಕೆಂದರೆ ಭಾಷಾತೋಲನ ಶಾಸ್ತ್ರದಲ್ಲಿ ಅದಕ್ಕೇನೇ ಬೆಲೆಯಿರಲಿ, ಕೇವಲ ಸಂಸ್ಕೃತಾಭ್ಯಾಸಿಗಳಿಗೆ ಅದು ಭ್ರಾಮಕವಾಗಿ ಪರಿಣಮಿಸಬಹುದು.

ಯಥಾಪ್ರಕಾರ ಕೆಲವು ಧಾತುಗಳನ್ನು ಒಂದೇ ಸಾಲಿನಲ್ಲಿ ಒಂದೇ ಒಂದು ರೂಪ ನಿರ್ದೇಶದೊಂದಿಗೆ ಮುಗಿಸಿರುವುದೂ ಉಂಟು; ಕೆಲವನ್ನು ಪುಟಗಟ್ಟಲೆ ತೋರಿಸಿರುವುದೂ ಉಂಟು. ಧಾತುವಿನ ಗಣ – ಪದ – ಇತ್ಯಾದಿಗಳ ಬಗ್ಗೆ ಉಲ್ಲೇಖವೇ ಇಲ್ಲ. ಅನುಬಂಧದಲ್ಲಿ ಮಾತ್ರ (ಯಥಾಪ್ರಕಾರ ಐತಿಹಾಸಿಕ ಆನುಪೂರ್ವಿಯನ್ನನುಸರಿಸಿ) ಗಣ ನಿರ್ದೇಶವನ್ನು ಮಾತ್ರ ಕೊಟ್ಟಿದೆ.

ಅಂತೂ ಈ ಪರ್ಯಂತವಾಗಿ ನಾವು ಹೇಳಿದ ಕೃತಿಗಳಲ್ಲಿ ಹೇಗೋ ಹಾಗೇ ಇಲ್ಲಿಯೂ ಗ್ರಂಥಕರ್ತನೇ ಸ್ವತಃ ಯಾವರೂಪಗಳನ್ನು ಕೊಟ್ಟ

ದ್ದಾನೋ ಅವು ಮಾತ್ರ ದೊರೆತಾವೇ ವಿನಾ ನಿರ್ದಿಷ್ಟಧಾತುವಿಗೆ ನಿರ್ದಿಷ್ಟ ಪ್ರತ್ಯಯವು ಸೇರಿದಾಗ ಯಾವ ರೂಪವಾದೀತೆಂದು ಅನ್ವೇಷಣೆ ಮಾಡಲು ಈ ಪುಸ್ತಕವೂ ಯೋಗ್ಯವಲ್ಲ *

1.23 ಈ ಹಿಂದಿನ ಯತ್ನಗಳು - 2
– ಕೃದಂತ ರೂಪಮಾಲಾ

(ದಿ||) ಡಾ|| ವಿ. ರಾಘವನ್‌ರವರ ಪ್ರಚೋದನೆಯ ಮೇರೆಗೆ, ಶಾಸ್ತ್ರ ರತ್ನಾಕರ, ಕುಲಪತಿ, ಪಂಡಿತ ಎಸ್. ರಾಮಸುಬ್ಬ ಶಾಸ್ತ್ರಿಗಳು ತಮ್ಮಿಬ್ಬರು ಶಿಷ್ಯರ ಸಹಾಯದಿಂದ, ಒಟ್ಟು 1425 ಪುಟಗಳನ್ನೊಳಗೊಂಡ 5 ಸಂಪುಟ ಗಳಲ್ಲಿ ರಚಿಸಿದ ಅತ್ಯುಪಯುಕ್ತವಾದ ಬೃಹದ್ಗ್ರಂಥವಿದು.

ಸಂಸ್ಕೃತದ ಒಟ್ಟು ಧಾತುಗಳ (2039) ಮುಖ್ಯ ಕೃದಂತ ರೂಪಗಳನ್ನು ಇಲ್ಲಿ ಕೊಡಲಾಗಿದೆ. ಅವಲ್ಲಿ 1500 ಧಾತುಗಳ ವಿಸ್ತೃತನಿರೂಪಣೆ, 500 ಧಾತುಗಳ ಸಂಕ್ಷೇಪನಿರೂಪಣೆಯಿದೆಯೆಂದು ಹೇಳಿಕೊಳ್ಳಲಾಗಿದೆ. ಪ್ರತಿ ಧಾತುವಿಗೂ ಸುಮಾರು 20 ಮುಖ್ಯ ಕೃದಂತಗಳಲ್ಲಿ ರೂಪಗಳು. ಈ ರೂಪ ಗಳನ್ನು ಶುದ್ಧ ಧಾತುವಿಗೆ ಹೇಗೋ ಹಾಗೆ ಣಿಚ್, ಸನ್ ಮತ್ತು (ಕೆಲವೇ ಎಡೆಗಳಲ್ಲಿ) ಯಙ್ – ಈ ಅಂತಗಳಲ್ಲೂ ಸಾಮಾನ್ಯವಾಗಿ ಕೊಟ್ಟಿದೆ. ಅಲ್ಲೊಮ್ಮೆ ಇಲ್ಲೊಮ್ಮೆ ಉಣಾದಿಪ್ರತ್ಯಯನಿಷ್ಪನ್ನರೂಪಗಳನ್ನೂ ಕೊಡ ಲಾಗಿದೆ.

---

* ಈ ಕೊನೆಯ ವಿಮರ್ಶವು ಶ್ರೀ ರಾವಸಾಹೇಬಪಾಂಡುರಂಗ ವೆಂಕಟೇಶ ಚಿಂತಾಮಣಿ ಪೇಠಕರ-ಎಂಬ ವ್ಯಕ್ತಿಯಿಂದ ರಚಿಸಲ್ಪಟ್ಟು ಮತ್ತು "ಕನ್ನಡ ತ್ರಾನ್ಸಲೇಟರಿಂದ ಸುಧಾರಿಸಲ್ಪಟ್ಟ" ಸಂಸ್ಕೃತ—ಕನ್ನಡ ಶಬ್ದ ವ್ಯುತ್ಪತ್ತಿ [4ನೇ ಆವೃತ್ತಿ, 1893, ಮುಂಬಯಿ] ಯೆಂಬ ಪುಟ್ಟ ಪುಸ್ತಕಕ್ಕೂ ಅನ್ವಯಿಸುತ್ತವೆ. ಅಲ್ಲದೆ ಈ ಗ್ರಂಥಕರ್ತರ ದೃಷ್ಟಿಯು "ಕನ್ನಡದಲ್ಲಿ ಸಾಧಾರಣ ಪ್ರಚಾರದಲ್ಲಿದ್ದ ಪ್ರಸಿದ್ಧ [ಸಂಸ್ಕೃತ/ಕನ್ನಡ] ಶಬ್ದಗಳ ವ್ಯುತ್ಪತ್ತಿ"ಯ ಬಗೆಗೇ ಇದ್ದಿತೆಂಬುದೂ ಸ್ಪಷ್ಟ.

ಆದರೆ ಕೃಜಾದ್ಯಂತ - ಯಙ್‍ಲುಗಂತಗಳಿಂದಾಗುವ ಕೃತ್ತುಗಳನ್ನು ಕೊಟ್ಟಿಲ್ಲ. ಒಟ್ಟು ಸುಮಾರು 130 ಕೃತ್ತುಗಳಲ್ಲಿ 20ನ್ನು ಮಾತ್ರವೇ ಎಲ್ಲಕ್ಕೂ ಕೊಡಲು ಉದ್ದೇಶಿಸಿದೆ.

ನಾವು ಇಲ್ಲಿ ಹೇಳಿರುವುದಷ್ಟೇ ಅಲ್ಲದೆ ಮತ್ತೂ ಕೆಲವಂಶಗಳನ್ನು (particulars) ಈ ಪುಸ್ತಕವು ಕೊಟ್ಟಿದೆ. ಆದರೆ ಪ್ರಕೃತಕ್ಕೇ ನೇರವಾಗಿ ಅನ್ವಯಿಸುವ ಅಂಶಗಳನ್ನು ಮಾತ್ರ ಉಲ್ಲೇಖಿಸಿದ್ದೇವೆ. ಮಿಕ್ಕವುಗಳ ಗುಣದೋಷಚಿಂತನವು ನಮಗಿಲ್ಲಿ ಅಪ್ರಕೃತ.

1.24 ಇದರ ಒಂದು ಅವಲೋಕನ

ಇದರಷ್ಟು ಉಪಯುಕ್ತವಾದ ಮತ್ತು ವಿಸ್ತಾರವಾದ ಗ್ರಂಥವೇ ಈವರೆಗೆ ಬಂದಿಲ್ಲವಾದ್ದರಿಂದ ಮತ್ತು ಇದು ಲಭ್ಯವಾಗಿರುವುದರಿಂದ ಯಾವ ಕೆಲವು ಎಚ್ಚರಿಕೆಗಳೊಡನೆ ಈ ಕೃತಿಯನ್ನು ಬಳಸುವುದು ಯುಕ್ತವೆಂಬುದನ್ನು ಸಂಕ್ಷೇಪವಾಗಿ ನಿರೂಪಿಸುವುದೇ ನಮ್ಮ ಪ್ರಕೃತ ಉದ್ದೇಶವೇ ವಿನಾ ಅದರ ದೂಷಣೆಯು ಲಕ್ಷ್ಯವಲ್ಲ.

ಅಪೂರ್ಣತೆ

ಸಂಸ್ಕೃತದಲ್ಲಿಯ ಯಾವತ್ತೂ ಧಾತುಗಳನ್ನು ವಿವರಿಸುವ ಪ್ರಯತ್ನವು ಇಲ್ಲಿ ಕಂಡುಬಂದರೂ ಅದು ನಿಶ್ಶೇಷವಾಗಿ ಆಗಿಲ್ಲ. ಉದಾ. ಹತ್ತನೆಯ ಗಣದ "ಧೃ" ಧಾತುವು ಧಾತುಪಾಠಲಭ್ಯವಾದರೂ ಈ ಬೃಹದ್ಗ್ರಂಥದಲ್ಲಿಲ್ಲ. ಧಾರಯತಿ—ಧಾರಯತೇ ಇ. ರೂಪಗಳು ಸರಳವೇ. ಇವುಗಳ ಕೃದಂತಗಳೂ ಕಷ್ಟವಲ್ಲವಷ್ಟೇ.

ಕೆಲವೊಮ್ಮೆ ಕೆಲ ರೂಪಗಳೇ ಕಾಣೆಯಾಗಿವೆ—ಪ್ರಾಯಶಃ ಕೇವಲ ಅನವಧಾನದಿಂದ. ಉದಾ. ದಿವ್‍ಧಾತುವಿನ ತುಮುನ್ ಪ್ರತ್ಯಯಾಂತ ರೂಪವೇ ಇಲ್ಲ. ವರ್ತಮಾನ ಕೃದಂತದಲ್ಲಿ ಸರ್ವತ್ರ ಕೊಡಲಾಗಿರುವ ಸ್ತ್ರೀಲಿಂಗ ರೂಪಗಳೂ ಹಲವೆಡೆ ಬಿಟ್ಟು ಹೋಗಿವೆ. ಉದಾಹರಣೆ ಭೀ ಧಾತು,

ಆದರ್ಶ—ಅನಾದರ್ಶ

ಅತ್ಯಂತ ಶೋಚ್ಯವೆಂದರೆ ಈ ಹಿಂದಿನ ಮಿಕ್ಕೆಲ್ಲ ಕೃತಿಗಳು ಮಾಡಿರುವ ಘೋರ ಅಪರಾಧವನ್ನೇ ಈ ಕೃತಿಯೂ ಮಾಡಿರುವುದು. ಅದೆಂದರೆ ಒಂದು ಧಾತುವಿನ ರೂಪವನ್ನು ಮತ್ತೊಂದರಂತೆ ಎಂದು ಹೇಳಿ ಬಿಡುವುದು. ಇದನ್ನು ಮಾಡಲೇಬಾರದೆಂದಲ್ಲ. ಮಾಡುವಾಗ ಅತ್ಯಂತ ಜಾಗರೂಕತೆಯಿಂದ ಮಾಡಬೇಕಾದುದು ಅತಿಮುಖ್ಯ. ಮಿಕ್ಕ ಕೃತಿಗಳಲ್ಲಾದರೂ ಕ್ಷಮೆಗೆ ಕಿಂಚಿತ್ತಾದ ಅವಕಾಶವಿದೆಯೆಂದೆನ್ನಬಹುದು. ಕಾರಣ ಅವುಗಳ ಗಾತ್ರವೇ ಕಿರಿದು. ಉದ್ದೇಶವೂ ಅಷ್ಟೆ. ಆದರೆ ಘನವಾದ ಹಲವಾರು ಸಂಪುಟಗಳಲ್ಲಿ ಬಂದಿರುವ ಈ ಕೃತಿಯಲ್ಲಿ ಈ ತೆರನಾದ ದೋಷವು ಬರಬಾರದಾಗಿತ್ತು.

ಗಣ

ನಾವು ಹೀಗೇಕೆ ಹೇಳುತ್ತೇವೆಂಬುದನ್ನು ಕೆಲವು ಉದಾಹರಣೆಗಳ ದ್ವಾರಾ ಸ್ಪಷ್ಟವಾಗಿ ಅರಿಯಬಹುದು. ಒಂದು ಧಾತುವಿನ ಯಾವುದೇ ರೂಪಗಳು ಮತ್ತೊಂದರಂತೆ ಎನ್ನುವಾಗ ವ್ಯಾಕರಣಪ್ರಕ್ರಿಯೆಗಳತ್ತ ಗಮನವಿತ್ತೇ ಮಾಡಬೇಕಷ್ಟೆ. ಜುಷ್ ಎಂಬ ಆರನೆಯ ಗಣದ ಧಾತುವಿನ ರೂಪಗಳನ್ನು ಜುಷ್ ಎಂಬ ಹತ್ತನೆಯ ಗಣದ ಧಾತುವಿನ ರೂಪಗಳಂತೆಯೇ ಎಂದು ಹೇಳಿಬಿಟ್ಟರೆ ಅಲ್ಲಿ ತವ್ಯಮೊದಲಾದ ಕೆಲವೊಂದು ಕೃತ್ ಪ್ರತ್ಯಯಾಂತ ರೂಪಗಳಲ್ಲಿ ಭೇದವೇ ಉಂಟಾಗಿಬಿಡುತ್ತದೆ !

ಪದ

ಹೀಗೆಯೇ ಪದಭೇದವೂ ತೊಡಕಾಗುತ್ತದೆ. ಭೂಷ್ ಧಾತುವಿನ ರೂಪಗಳು ಕೂಟ್ ಧಾತುವಿನಂತೆ ಎಂದು ಹೇಳಿದೆ. ಮೊದಲನೆಯದು ಉಭಯಪದಿ. ಎರಡನೆಯದು ಆತ್ಮನೇ ಮಾತ್ರ. ಇಂತಹ ಸಂದರ್ಭಗಳಲ್ಲಿ ಒಂದು ತೆರನ ರೂಪಗಳೇ [one set of forms] ದೊರೆಯದಾಗಿಬಿಡುತ್ತದೆ. "ರಾಜ್" ಧಾತುವನ್ನು "ಕಾಶ್ ಧಾತುವಿನಂತೆ"— ಎಂದಾಗಲೂ ಹೀಗೆಯೇ. ಆದರೆ ಪರಸ್ಮೈಧಾತುವಿಗೆ ಆತ್ಮನೇ ಮಾದರಿ ಕೊಟ್ಟುಬಿಟ್ಟರೆ ಉಪಯೋಜಕರು [users of the book] ಮಾಡುವುದು ತಾನೆ ಏನು?.

"ವಾಂಛ್" ಧಾತುವು "ಕಾಚ್" ಎಂಬುದರಂತೆ ಎಂದಾಗ ಹೀಗೆಯೇ ಆಗಿರುವುದು. ಅಂತೆಯೇ "ಶುಭ್" ಧಾತು-ಆತ್ಮನೇ ಪದಿಯ ರೂಪಗಳು "ಕುಪ್" ಧಾತುಪರಸ್ಮೈ ಪದಿಯ ರೂಪಗಳಂತೆ ಎಂದಾಗಲೂ ವರ್ತಮಾನ-ಹಾಗೂ ಭವಿಷ್ಯತ್ ಕೃದಂತ ರೂಪಗಳು ಧಾತುವಿನ "ಪದ"ವನ್ನು ಅನುಸರಿಸುವುವಷ್ಟೆ.

ಇಟ್

ಹೀಗೆಯೇ ಧಾತುಗಳ ಇಟ್‌ತ್ವನಿಮಿತ್ತಕ ಭೇದವೂ ಭ್ರಾಮಕವೇ ಆದೀತು. ಉದಾ.ಗೆ ಷಸ್ಟ ಧಾತುವಿನ ಕೃದ್ರೂಪಗಳು "ವಸ್ಥ" ಧಾತುವಿನಂತೆ ಎಂದು ಆ ಗ್ರಂಥದಲ್ಲಿ ಹೇಳಿದೆ, ಮೊದಲನೆಯದು ಸೇಟ್, ಎರಡನೆಯುದು ಅನಿಟ್.

ಪ್ರಸಿದ್ಧಿ

ಅಂತೆಯೇ ಒಂದರ ರೂಪಗಳು ಮತ್ತೊಂದರಂತೆ ಎನ್ನುವಾಗ ಅಪ್ರಸಿದ್ಧ ಧಾತುವಿನ ರೂಪಗಳಿಗೆ ಪ್ರಸಿದ್ಧ ಧಾತುವಿನ ರೂಪಗಳನ್ನು ಆದರ್ಶವಾಗಿ ಸೂಚಿಸುವುದು ಈ ಹಿಂದಿನ ಕೃತಿಗಳಲ್ಲಿ ಸಾಮಾನ್ಯವಾಗಿದ್ದರೆ, ಈ ಕೃತಿಯಲ್ಲಿ ಅದು ತಿರುಗು ಮುರುಗಾಗಿದೆ. ವ್ಯಥ್-ವ್ಯಧ್ ಧಾತುಗಳ ರೂಪಗಳು ಪ್ಲೀ ಧಾತುವಿನಂತೆ ಎಂದಿದೆ. ಇಲ್ಲಿ ಪೌರ್ವಾಪರ್ಯವನ್ನಾಧರಿಸಿದ ಸ್ಥಳಾವಕಾಶದ ಮಿತಿಯೇ ಕಾರಣವೆಂದಿರಬಹುದೇನೋ. ಚೇಷ್ಟ ಧಾತುವನ್ನು ಗೋಷ್ಟ ಧಾತುವಿನಂತೆ ಎಂದಾಗಲೂ ಹೀಗೆಯೇ.

ಅಸಂಬದ್ಧ

ಎಷ್ಟೋ ಸಂದರ್ಭಗಳಲ್ಲಿ ರೂಪಗಳನೇಕವು ವ್ಯತ್ಯಾಸವಾಗಿಬಿಡುವುದೂ ಹೇಗೆ ಈ ಗ್ರಂಥದ ದಕ್ಷ ಸಂಪಾದಕವರ್ಗದ ಕಣ್ಣು ತಪ್ಪಿಸಿತೋ ಆಶ್ಚರ್ಯ. ಸದ್ ಧಾತುವಿನ ರೂಪಗಳು ಖದ್ ಧಾತುವಿನ ರೂಪದಂತೆ ಎಂದಾಗ ಆಗಿರುವುದು ಹೀಗೆಯೇ. ಕ್ತಪ್ರತ್ಯಯದಲ್ಲಿ ಒಂದರ ರೂಪಕ್ಕೂ ಮತ್ತೊಂದಕ್ಕೂ ಸಂಬಂಧವೇ ಇಲ್ಲ. ಪೂರ್ ಧಾತುವಿನ ರೂಪಗಳು ಚುರ್ ಧಾತುವಿನಂತೆ ಎಂದಾಗಲೂ ಹೀಗೆಯೇ. ಚೋರ್ಯಂ ಎಂಬಂತೆ

ಪೂರ್ಯಂ ಎಂದಾಗುತ್ತದೆಯೇ ? " ತರ್ಕಯಿತವ್ಯಂ " ಎಂಬುದು "ಗ್ರಾಸಯಿತವ್ಯಂ" ನಂತಲ್ಲವಷ್ಟೆ.

ಭ್ರಾಮಕ

ಸಮಾನ ವರ್ಗೀಯ ವ್ಯಂಜನಗಳಿರುವ ಧಾತುಗಳನ್ನು ಪರಸ್ಪರ ಮಾದರಿಯನ್ನಾಗಿ ಕೊಡುವಾಗ ಎಚ್ಚರಬೇಕು. ಉದಾ.ಗೆ ರುಧ್ ಧಾತುವಿನ ಕೃದ್ರೂಪಗಳು ಭಿದ್ ಧಾತುವಿನ ರೂಪಗಳಂತೆ ಎಂದಾಗ ದಕಾರ-ಧಕಾರಗಳಲ್ಲಿ ಅನ್ಯೋನ್ಯಭ್ರಮಕ್ಕೆ ಬಹುವಾದ ಆಸ್ಪದವಿದೆ.

ಸಂಧಿ

ಸಂಧಿಕಾರ್ಯವು ನಡೆಯುವ ಎಡೆಗಳಲ್ಲೂ ಎಚ್ಚರವಿಲ್ಲದಿದ್ದರೆ ಕಷ್ಟ. ಉದಾ.ಗೆ ಕ್ತ ಮೊದಲಾದ ಪ್ರತ್ಯಯದ ಎಡೆಯಲ್ಲಿ ಷ್ಟುತ್ವಕ್ಕೆ ಆಸ್ಪದ ಇರುವಜಾಗ ವಿವೇಚನೀಯ. ಉದಾ.ಲಿಪ್ ಧಾತುವಿನ ರೂಪ ವಿಶ್ ಧಾತುವಿನ ರೂಪದ ಹಾಗೆ ಎಂದಾಗ ದೇಷ್ಟವ್ಯಂ ಎಂಬಂತೆ ಲಿಪ್ ಧಾತುವಿನ ರೂಪವಾಗದು. ನತ್ವ-ಣತ್ವ, ಸತ್ವ-ಷತ್ವಗಳ ಸಂದರ್ಭವಂತೂ ಅತ್ಯಂತ ಭ್ರಮಾಸ್ಪದ. ಹೀಗಾಗಿಯೇ ಭಾಷ್ ಧಾತುವಿನ ರೂಪ ಭಾಮ್ ಧಾತುವಿನಂತೆ, ಭೂಷ್-ಕೂಜ್ ಧಾತುವಿನಂತೆ, ಭ್ರಮ್ ಧಾತುವು ಕ್ಲಮ್ ಎಂಬುದರಂತೆ ಎಂದಾಗಲೆಲ್ಲ ತಪ್ಪಾಗಿರುವುದು.ಅಂತೆಯೇ ಧಾತ್ವಾದೇಶವೋ ಪ್ರತ್ಯಯಾದೇಶವೋ ಇರುವೆಡೆಗಳಲ್ಲೂ. ವಶ್ ಧಾತುವು ಖಿಪ್ ಧಾತುವಿನಂತೆ ಎಂದಾಗ ಖಿನ್ನವೆಂಬ ಕ್ತಾಂತರೂಪವು ಮೊದಲನೆಯದಕ್ಕೆ ಮಾದರಿಯಲ್ಲ.

ಸತಾಯಿಸುವಿಕೆ

ಕೊನೆಯೆರಡು ಸಂಪುಟಗಳಲ್ಲಂತೂ "ಸತಾಯಿಸುವಿಕೆ"ಯು ಮಿತಿಮೀರಿ ಹೋಗಿದೆಯೆಂದರೆ ತಪ್ಪಾಗಲಾರದೆಂದು ಭಾವಿಸುತ್ತೇವೆ. ಇದೋ ಒಂದೆರಡು ಉದಾ.ಗಳು. 'ವೃಜ್(X ಗಣ)' 'ಛೃದ್(X ಗಣ)' ದಂತೆ; ಮತ್ತು ಅದು ಛೃದ್(I ಗಣ)'ದಂತೆ ಎಂದಿದೆ. ಅಂತೂ ಹತ್ತನೆಯ ಗಣದ ಧಾತುವಿಗೆ,

ಕೊನೆಗೆ ಒಂದನೆಯ ಗಣದ ಮಾದರಿಯಾಯಿತು. ಅಂತೆಯೇ ಶಕ್(V ಪ)- ಇದು ಶಕ್(IV ಉ)ವಿನಂತೆ ಮತ್ತು ಅದು ನಶ್(IV ಪ) ವಿನಂತೆ- ಎಂಬಲ್ಲಿಯೂ. [5ನೆಯ ಗಣದ ಧಾತುವಿಗೆ 4ನೆಯದರ ಮಾದರಿ; ಪರಸ್ಮೈಗೆ ಉಭಯಪದಿ ಮಾದರಿಯಾಗದು ; ಇದರ ವಿಪರೀತವೂ ಅಷ್ಟೆ] ಸಿಧ್(IV)- ಇದು ಸಿಧ್ (I)ರಂತೆ; ಅದು ಶೃಧ್‌ವಿನಂತೆ; ಅದು ಪೃಷ್‌ವಿನಂತೆ-ಎನ್ನು ವಾಗಲೂ ಹೀಗೆಯೇ (ಮೊದಲನೆಯದು ಅನಿಟ್ಟಾದರೆ ಕಡೆಯದು ಸೇಟ್).

ಅನ್ವೇಷಣೆ

ವಸ್ತುತ : ಉಪಯೋಗಿಸುತ್ತಿರುವವರಿಗೆ (actual users) ಇನ್ನೂ ಹೆಚ್ಚು ಅನಾನುಕೂಲ್ಯಗಳಿವೆ. ಕೆಲವೇಳೆ ಒಂದು ಸಂಪುಟದಲ್ಲಿಯ ಧಾತುವಿನ ಆದರ್ಶ ಮತ್ತೊಂದು ಸಂಪುಟದಲ್ಲಿರುತ್ತದೆ. ಆದರ ಮಾದರಿ ಮಗದೊಂದರಲ್ಲಿ! [ಧಾತು ಸಂಖ್ಯೆಯನ್ನೇನೋ ಮಾದರಿ ಧಾತುವಿನ ಜೊತೆಯಲ್ಲೇ ಕೊಟ್ಟಿದೆ. ಆದರೆ ಅದು ಯಾವ ಸಂಪುಟವೆಂದು ಸೂಚಿಸಿದ್ದರೆ ಹೆಚ್ಚು ಅನುಕೂಲವಾಗುತ್ತಿತ್ತು. ಪುಟಸಂಖ್ಯಾನವನ್ನು ಪ್ರಥಮ ಸಂಪುಟದಿಂದ ಪಂಚಮ ಸಂಪುಟದ ವರೆಗೂ ಅವಿಚ್ಛಿನ್ನವಾಗಿ (unbroken) ಸಂಕಲಿತವಾಗಿ(cumulative) ಮಾಡಿದೆಯಾಗಿ, ಪುಟಸಂಖ್ಯೆಯನ್ನು ಸೂಚಿಸಿದರಾದರೂ ಆಗುತ್ತಿತ್ತು. ಎಷ್ಟಾದರೂ ಲಿಪಿಯ ಅಕಾರಾದಿ (alphabetical order)ಗಿಂತಲೂ ಸಂಖ್ಯಾನುಕ್ರಮ (ascending order of no.s)ವೇ ಸುಲಭತರವಷ್ಟೆ. ಮತ್ತು ಇದು ಸಂಸ್ಕೃತ ಲಿಪಿಗಂತೂ ಬಹುವಾಗಿ ಅನ್ವಯಿಸತಕ್ಕ ಅಂಶ (-ವಿಶೇಷತ: ಇಂಗ್ಲೀಷ್ ಲಿಪಿಗಿಂತಲೂ)ವೇ ಸರಿ. ಸಂಸ್ಕೃತಕೋಶ, ಆಂಗ್ಲ ಕೋಶಗಳನ್ನು ಬಳಸುವವರಿಗೆ ಇದನ್ನು ವಿವರಿಸುವ ಆವಶ್ಯಕತೆಯಿಲ್ಲ.] ಈ 'ಸತಾಯಿಸುವ' ತಲೆನೋವಿಗೆ ನಿದರ್ಶನವಾಗಿ ಒಂದು ಸಣ್ಣ ಅಂಶವನ್ನು ಉಲ್ಲೇಖಿಸಿದರೆ ಸಾಕೆನಿಸುತ್ತದೆ. ಆದೆಂದರೆ ಸುಮಾರು 250 ಪುಟಗಳೇ ಇರುವ ಈ ಐದೂ ಸಂಪುಟಗಳಲ್ಲಿ, ಮೊದಲನೆಯದರಲ್ಲಿ 250 ಧಾತುಗಳಿದ್ದರೆ ಕೊನೆಯೆರಡರಲ್ಲಿ 550 ರಿಂದ 600 ಧಾತುಗಳಷ್ಟಿವೆ.

ಶ್ರಮ

ಮೇಲೆ ಉಲ್ಲೇಖಿಸಿರುವ ಅಂಶಗಳಲ್ಲದೆ ಇನ್ನೂ ಹಲಬಗೆಯ ಲೋಪ-ದೋಷಗಳಿರುವುದನ್ನು ಆಳವಾಗಿ ನೋಡಿ ತಿಳಿಯಬಹುದು. ಉದಾ. ಕೆಲವೆಡೆ ರೂಪಬಾಹುಲ್ಯವನ್ನು ಮರೆತಿರುವುದು (ಉದಾ. ಸ್ನಾ ಧಾತುವಿನ ವರ್ತಮಾನ ಕೃದ್ರೂಪ), ಧಾತುವಿಗೆ ಯಾವ ರೂಪವನ್ನೂ ಕೊಡದೆ ಓದುಗರ ಊಹೆಗೇ ಬಿಡುವುದು–ಇಂತಹುದೂ ಉಂಟು [ಉದಾ. ಶಿಕ್ಷ್ ಧಾತುವಿನ ಬಗ್ಗೆ ಕಲಿಯುವವರಿಗೆ ಕಾಣುವ ನಿರ್ದೇಶ–'ಸರ್ವಾಣಿ ರೂಪಾಣಿ ಯಥಾಸಂಭವ ಮೂಹ್ಯಾನಿ' ಎಂದು ! 'ಶ್ರಮ್' ಧಾತುವಿನ ಬಗೆಗೂ ಮತ್ತೂ ಕೆಲವಕ್ಕೂ, ಹೀಗೆಯೇ–ಎಂದರೆ ಓದುಗರಿಗಾಗುವ ಒಟ್ಟಿನ ಶ್ರಮವೆಷ್ಟೆಂಬುದನ್ನು ವಿವರಿಸಿ ಹೇಳುವ ಆವಶ್ಯಕತೆಯಿಲ್ಲ]

ಹಿಂದೆಯೇ ಹೇಳಿದಂತೆ ಧಾತುಗಳನ್ನು ಪಾಣಿನೀಯಾನುಬಂಧ ಸಮೇತ ಮಾತ್ರವಾಗಿ ಕೊಟ್ಟಿರುವುದು, ಮತ್ತು ಇನ್ನು ಕೆಲವೆರಡಂಶಗಳು, ವ್ಯಾಕರಣವನ್ನೋದಿಲ್ಲದವರಿಗೆ ಕಷ್ಟವೇ—ಉಪೋದ್ಘಾತದಲ್ಲಿ "ಗ್ರಂಥೋಽಯಮ್ ಅನಧೀತವ್ಯಾಕರಣಾನಾಂ ಕೃದಂತಾನ್ ಸಾಧೂನ್ ಶಬ್ದಾನ್ ಪ್ರಯುಯುಕ್ಷೂಣಾಂ ಮಹತೇ ಫಲಾಯ ಕಲ್ಪೇತ..." ಎಂದು ಹೇಳಿಕೊಂಡಿದ್ದರೂ!

1.3 ಕೃದಂತಗಳ ಆಕರಗಳು–II

1.31 ಈ ದಿಶೆಯಲ್ಲಿ ನಮ್ಮ ಯತ್ನ

ಸಾರಾಂಶವಾಗಿ ಈ "ಅನಧೀತವ್ಯಾಕರಣ (ವ್ಯಾಕರಣ ಅಧ್ಯಯನ ಮಾಡಿಲ್ಲದವರ") ಪಾಡೇ ನಮ್ಮನ್ನು ಈ ಗ್ರಂಥಮಾಲೆಯನ್ನು ಬರೆಯಲು ಪ್ರೇರಿಸಿದುದು. ಹಾಗೆಂದು ಅವರಿಗೆ ಮಾತ್ರ ಪ್ರಯೋಜಕವಾದ ಕೃತಿಯಿದೆಂದು ಬಗೆಯಬಾರದು. ನಾವು ಹಿಂದೆ ಹೇಳಿದಂತೆ ವಿದ್ವಾಂಸರಿಗೂ ಸೇಡ್ವೇಡನಿಡ್ವಿಷಯಗಳಲ್ಲಿ, ನುಮಾಗಮ – ರೂಪಬಾಹುಲ್ಯ – ಅರ್ಥ

ವೈಶಿಷ್ಟ್ಯಾದಿ ವಿಷಯಗಳಲ್ಲಿ ಸಂಶಯವು ಬರುವಂತಹದೇ†

ಹಲವು ಸಂಪುಟಗಳಲ್ಲಿ ಕೆಲವೆರಡು ಕೃತಿಗಳನ್ನು ತಂದು, ಈ ಮೊದಲು ಎತ್ತಿ ಹೇಳಿದ ಸಾಧಾರಣ ಅಸಾಧಾರಣ-ದೋಷಗಳಾವುವೂ ಇಲ್ಲದ, ಸುಲಭ-ಆದರೆ-ಸಂಗ್ರಹ ಕ್ರಮದಲ್ಲಿ ನಿರೂಪಿಸುವ ಧ್ಯೇಯ ನಮ್ಮದು. (ಉಪಯೋಜಕ-ವಿಮರ್ಶಕರ ಉಪಯೋಗ-ಸಲಹೆಗಳನ್ನನುಸರಿಸಿ ಮತ್ತೆ ಮತ್ತೆ ಮತ್ತೂ ಉತ್ತಮಗೊಳಿಸುತ್ತಿರಬೇಕೆಂಬುದೂ ನಮ್ಮ ಆಸೆ).

ವಾಕ್‌ಪ್ರಪಂಚದಲ್ಲಿ ಸಕಲಶಬ್ದಸೃಷ್ಟಿಗೂ ಧಾತುವೇ ಮೂಲ (-ಧಾತೃಬ್ರಹ್ಮನು ಈ ಹೊರ ಪ್ರಪಂಚಕ್ಕೆ ಮೂಲವೆನಿಸುವಂತೆ)ವೆಂಬ ಅಭಿಪ್ರಾಯವು ಸಂಸ್ಕೃತದಲ್ಲಂತೂ ಅತ್ಯಂತ ಪ್ರಚುರವಾದುದು. ಈ ಕಾರಣದಿಂದ ನಾವು ಧಾತುಗಳ ರೂಪಗಳಿಂದಲೇ ಹೊರಟು, ಹಲವು ಕೃತಿಗಳನ್ನು ಈಗಾಗಲೇ ಪ್ರಕಟಿಸಿದ್ದೇವೆ. § §

---

†(ಎಷ್ಟೋ ವೇಳೆ ಒಂದು ಧಾತುವು ಸೇಟೋ, ಅನಿಟ್ಟೋ ಎಂಬ ಬಗ್ಗೆ ಶತಮಾನಗಳ ಹಿಂದೆಯೇ ಚರ್ಚೆ-ಭಿನ್ನಾಭಿಪ್ರಾಯಗಳು ಆಗಿಬಿಟ್ಟಿರುವುದೂ ಉಂಟು !) ಅಂತೆಯೇ ಒಂದೇ ಧಾತುವೇ ಕೆಲವು ಸಂದರ್ಭಗಳಲ್ಲಿ (ಅರ್ಥಭೇದ ಯಾ ಉಪಸರ್ಗಯೋಗಗಳಿಲ್ಲದಾಗ್ಯೂ) "ಪದ"ವನ್ನು ಬದಲಾಯಿಸಿಕೊಳ್ಳುವುದುಂಟು ; ಇಡಾಗಮವು ಧಾತುವನ್ನಲ್ಲದೆ ನಿರ್ದಿಷ್ಟಲಕಾರವನ್ನೋ ಆ ಲಕಾರದಲ್ಲಿಯ ನಿರ್ದಿಷ್ಟ ಪ್ರತ್ಯಯವನ್ನನುಸರಿಸಿಯೋ ಬರುವುದೂ ಉಂಟಷ್ಟೆ. ಹೆಚ್ಚಿನ ವಿವರ-ಉದಾಹರಣೆಗಳಿಗಾಗಿ ನಮ್ಮ **ಧಾತುರೂಪ ಕೋಶ : ಸವಿರಣ** ಕೃತಿಯನ್ನು ನೋಡಿಕೊಳ್ಳಬಹುದು.

§ § ಈವರೆಗೆ ಆಗಿರುವ ಪ್ರಕಟಣೆಗಳು ನಾಲ್ಕು (i) ಧಾತುರೂಪ ಕೋಶ (ಈಗ ಅಲಭ್ಯ) (ii) ಲಕಾರಾರ್ಥ ನಿರೂಪಣಮ್ (iii) ಧಾತುರೂಪ ಕೋಶ-ಸವಿವರಣ (ಇದು ಮೊದಲನೆಯ ಕೃತಿಯನ್ನು ಒಳಗೊಂಡಿದೆ) (iv) ಸಂಗ್ರಹ ಕನ್ನಡ-ಸಂಸ್ಕೃತ ಧಾತುಕೋಶ—ಇವುಗಳೆಲ್ಲದರ ವಸ್ತು (content) ಸೂಚನೆಗೆ ಈ ಕೃತಿಯ ಕೊನೆಯಲ್ಲಿರುವ "ನಮ್ಮ ಪ್ರಕಟಣೆಗಳ"ನ್ನು ನೋಡಿ.

ಕೃದಂತಗಳಿಗಾಗಿಯೂ ಹಲವು ಸಂಪುಟಗಳನ್ನು ತರುವ ಯೋಜನೆಯಿದೆ. ಈ ಸಂಪುಟಗಳೊಂದೊಂದೂ ಸಂಸ್ಕೃತ ಭಾಷೆಯನ್ನು ಬಳಸುವವರಿಗೆ ಅತ್ಯುಪಕಾರಕವಾಗುವುವು. ಕನ್ನಡ ಭಾಷೆಯ ಸಮೃದ್ಧಿ-ವಿಶುದ್ಧಿಗಳಿಗೂ ಇವು ಅತ್ಯಂತ ಉಪಕಾರಿಯಾಗುವುವೆನ್ನುವುದರಲ್ಲಿ ಸಂಶಯವೇ ಇಲ್ಲ. ಅವಿವು :

(1) **ಕೃದಂತ ರೂಪಕೋಶ**—ಈಗ ನಿಮ್ಮ ಕೈಯಲ್ಲಿರುವ ಕೃತಿ ; ಮುಖ್ಯವೆನಿಸಬಹುದಾದ 360 ಧಾತುಗಳನ್ನಾರಿಸಿಕೊಂಡು (ಅವುಗಳ ಗಣ–ಪದ–ಕರ್ಮವತ್ತ್ವ, ಇಟ್ತ್ವ ಹಾಗೂ ಪ್ರಸಿದ್ಧಾರ್ಥಗಳ ಜೊತೆಗೆ) ತವ್ಯತ್/ತವ್ಯ, ಅನೀಯ, ಯ (ಣ್ಯತ್/ಕ್ಯಪ್/ಯತ್), ಕ್ತ-ಕ್ತವತು, ಶತೃ-ಶಾನಚ್, ತುಮುನ್, ಕ್ತ್ವಾ-ಲ್ಯಪ್‌ಗಳೆಂಬ ಹತ್ತು ಕೃದಂತ ರೂಪಗಳನ್ನೂ ಕೊಟ್ಟಿದೆ. ಈ ಕೃದಂತಗಳನ್ನು ನಡೆಸಲು ಮಾದರಿಶಬ್ದಗಳು, ಇಲ್ಲಿಯ ಕೃದಂತಗಳ ಬಳಕೆಯ ಬಗ್ಗೆ ಸೂಚನೆ–ಇವೂ ಇವೆ. ಇವಲ್ಲಿ ಅರ್ಧದಷ್ಟು ಕನ್ನಡದಲ್ಲೂ ಬಳಕೆಯಾಗುವಂತಹುವು.

ಮುಂದೆ ನಾವು ಪ್ರಕಾಶಿಸಲಿರುವ ಗ್ರಂಥಗಳಿವು :

2 **ಕೃದಂತಗಳು : ಅರ್ಥ ಮತ್ತು ಬಳಕೆ :** (ಲಕಾರ ರೂಪಗಳನ್ನು ಯಾವ ಯಾವ ಬಗೆಯಲ್ಲಿ ಉಪಯೋಗಿಸಬಹುದೆನ್ನಲು "ಲಕಾರಾರ್ಥನಿರೂಪಣಮ್ ಎಂಬ ನಮ್ಮ ಕೃತಿಯಂತೆ) ಈ ಕೃತಿಯು ಕೃದಂತ ರೂಪಗಳನ್ನು ಬಳಸುವ ಬಗೆಗಳನ್ನು ನಿರೂಪಿಸುತ್ತದೆ. ಜೊತೆಗೆ ವಿಶಿಷ್ಟಾರ್ಥಕ ಕೃದಂತ ಪದಗಳು, ಅವುಗಳ ಅರ್ಥಗಳು, ರೂಪಸಾಮ್ಯ–ಅರ್ಥಭೇದಗಳಿರುವ ಪದಗಳ ಅರ್ಥ–ಇವನ್ನು ಈ ಕೃತಿಯು ನಿರೂಪಿಸುತ್ತದೆ.

3 **ಕೃದಂತ ರೂಪಕೋಶ-ಎರಡನೇ ಸಂಪುಟ**

ಇವೆಲ್ಲಾ ಧಾತುಗಳಿಗೇ–ಲ್ಯುಟ್, ಕ್ತಿನ್, ಣ್ವುಲ್, ತೃಚ್/ತೃನ್ ಣಮುಲ್‌ಗಳು.

ಉದಾ. ಕರಣಂ, ಕೃತಿಃ, ಕಾರಕಃ, ಕರ್ತಾ, ಕಾರಂ.

ಇವೂ ಕನ್ನಡಕ್ಕೆ ಉಪಯೋಗವಾಗುವುವೇ.

(4) ಕೃದಂತ ರೂಪಕೋಶ ; ಸಂಪುಟ 3
ಮಿಕ್ಕೆಲ್ಲಾ ಮುಖ್ಯಧಾತುಗಳಿಗೆ ಮಿಕ್ಕ 120 ಕೃದಂತಗಳಲ್ಲಿ ಆಗತ್ಯವಾದ ಎಲ್ಲ ರೂಪಗಳು; ಸಂಸ್ಕೃತ-ಕನ್ನಡಗಳೆರಡ ರಲ್ಲೂ ಇರುವ ಹೇರಳರೂಪಗಳು.

(5) ಇವಲ್ಲದೆ ರೂಪನಿಷ್ಪತ್ತಿಕೋಶ, ಪ್ರಯೋಗಕೋಶಗಳು-
ರೂಪಗಳು ವಿಶಿಷ್ಟವಾದ ಬಗೆಯಲ್ಲೇ ಆಗಲು ಅನ್ವಯಿಸತಕ್ಕ, ಸಾಮಾನ್ಯ ಹಾಗೂ ವಿಶೇಷ ನಿಯಮಗಳು.
ಈ ರೂಪಗಳು ಬಳಕೆಯಾಗುವ ವಿಶಿಷ್ಟಾರ್ಥಗಳ ಸೂಚನೆ, ಪ್ರಕೃಷ್ಟಪ್ರಯೋಗಗಳ ಜೋಡಣೆಯೊಂದಿಗೆ.
ಇಂತಹವುಗಳೆಲ್ಲವನ್ನೂ ಹುಡುಕಲು ಬೇಕಾದ ಸೌಕರ್ಯ ಗಳಿಗಾಗಿ, ನಿಯಮಗಳ ಸೂಚೀ (index) ಕೃದಂತ ರೂಪಗಳ ಅಕಾರಾದಿ ಪಟ್ಟಿಯೊಂದಿಗೆ.

ಇವೆಲ್ಲದರಲ್ಲಿ ಗಮನೀಯ

ಈ ನಾಲ್ಕೈದು ಕೃತಿಗಳ ಬಗ್ಗೂ ತಿಳಿಸಬೇಕಾದ ಕೆಲವು ಮುಖ್ಯಾಂಶಗಳಿವೆ. ಅವಾವುವೆಂದರೆ—

(i) ಈ ಹಲವು ಸಂಪುಟಗಳೂ ಸರ್ವಥಾ ಪರಸ್ಪರ ನಿರಪೇಕ್ಷ ವಾಗಿರತಕ್ಕವು (mutually independent in every way) ಅರ್ಥಾತ್ ಹಿಂದಿನ ಸಂಪುಟದ ಬಳಕೆ ಯಿಲ್ಲದೆ ಮುಂದಿನ ಸಂಪುಟದ ಬಳಕೆ ಕ್ಲಿಷ್ಟ, ಅಸ್ಪಷ್ಟ--ಎಂಬು ದಾಗಿ ಮಾತ್ರ ಆಗದು.

ಆದರೆ ಅವು ಪರಸ್ಪರ ಪೂರಕವಾಗಿರತಕ್ಕವು. ಅಂದರೆ, ಒಂದರಲ್ಲಿ ಅನುಕ್ತವಾದುದು ಮತ್ತೊಂದರಲ್ಲಿ ಲಭ್ಯ.

(ii) ನಮ್ಮ ವಿಸ್ತಾರವಾದ. ನಿರೂಪಣೆಯು ಕೆಲವು ಧಾತುಗಳಿಗೆ ಮಾತ್ರ (360ಕ್ಕೆ) ಆಗುತ್ತಲಿದೆ. ಅಂತೆಯೇ ಈ ಸಂಪುಟಗಳಲ್ಲಿ, ಸುಮಾರು ಒಟ್ಟು 130 ಕೃತ್ ಪ್ರತ್ಯಯಗಳಲ್ಲಿ ನಾವು ಅತ್ಯುಪಯುಕ್ತ 15ನ್ನು ಮಾತ್ರ ವ್ಯವಸ್ಥಿತವಾಗಿ ಕೊಡುತ್ತಿದ್ದೇವೆ.

ನಾವು ತೆಗೆದುಕೊಂಡಿರುವ ಧಾತುಗಳು ಮಾತ್ರವೇ ಮತ್ತು ನಾವು ತೆಗೆದುಕೊಂಡಿರುವ ಕೃತ್ತುಗಳು ಮಾತ್ರವೇ ಮುಖ್ಯ- ಮಿಕ್ಕವು ಅಲ್ಲ–ಎಂಬ ಭ್ರಮೆ ನಮಗಿಲ್ಲ.

ಸಮಗ್ರ

ಎಂತಲೇ ಕೊನೆಯ ಸಂಪುಟದಲ್ಲಿ ಇಂತಹೆಲ್ಲ ಧಾತುಗಳ ಹಾಗೂ ಕೃತ್ತುಗಳ ರೂಪವನ್ನು ಆದಷ್ಟೂ ಸಮಗ್ರವಾಗಿ ಕೊಡುವ ಅಪೇಕ್ಷೆ ನಮಗಿದೆ. [ಎಂತಹ ತಾಳ್ಮೆಯುಳ್ಳ ಲೇಖಕನಿಗಾದರೂ ಅನತಿಕಾಲದಲ್ಲೇ ಚಿಟ್ಟು ಹಿಡಿಸಿ ಚುರುಕಾಗಿ–ಸುಟಿಯಾಗಿ ಕೆಲಸ ಮಾಡಲಾಗದಂತಾಗಿಸುವ ಇಂತಹ ಕೃತಿಗಳ ಬರಹಗಾರನಿಗೆ, ವಾಚಕರು—ವಿಮರ್ಶಕರು, ಸ್ವಲ್ಪ ಉದಾರವಾದ ಹೃದಯದಿಂದಲೇ ಹೇರಳವಾಗಿ ಸಲಹೆಗಳನ್ನಿತ್ತು, ಆಗುವ ಕಾರ್ಯವು ಹೆಚ್ಚು ಕಾಲ–ಹೆಚ್ಚುಮಂದಿಗೆ ಉಪಯೋಗವಾಗುವಂತೆ ಹೆಚ್ಚು ವ್ಯವಸ್ಥಿತವಾದ ಬರವಣಿಗೆಯಾಗಲು ಸಹಾಯ ಮಾಡಬೇಕೆಂಬುದನ್ನು ಬೇರೆಯಾಗಿ ಹೇಳಬೇಕಿಲ್ಲವಷ್ಟೆ.]

ಅಂತೆಯೇ ಕ್ವಸುನ್–ಕಾನಚ್ ಪ್ರತ್ಯಯಗಳು, ವರ್ತಮಾನ ಕೃದಂತದಲ್ಲಿ ಕರ್ಮಣಿ/ಭಾವೇರೂಪ, ಕೆಲವೆಡೆಗಳಲ್ಲಾದರೂ ಣಿಚ್, ಸನ್, ಯಙ್– ಇವುಗಳಲ್ಲಿ ಈ ಕೃದಂತರೂಪಗಳು—ಇತ್ಯಾದಿಯಾಗಿ ಅಪೇಕ್ಷೆಯು ವರ್ಧಿಸುತ್ತಲೇ ಇರುತ್ತದೆ ವಾಚಕರ ಸಮ್ಮತ್ಯೆ, ಆರ್ಥಿಕ ಆನುಕೂಲ್ಯ–ಇವುಗಳೂ ಕೂಡಿಬಂದಲ್ಲಿ ಅವನ್ನು ಕುರಿತಾಗಿಯೂ ಗ್ರಂಥರಚನೆ ಮಾಡುವ ಉತ್ಸಾಹವು ನಮ್ಮ ಕಡೆಯಿಂದ ಇದೆ.

ಆದರೂ ಈ ವಿಷಯದಲ್ಲಿ ಸದ್ಯಕ್ಕೆ ಪೂರ್ಣ ಔದಾಸೀನ್ಯ [ಅಥವಾ ತಮ್ಮ ವಿವಶತೆಯೆಂದು] ವಾಚಕರು ಭಾವಿಸಬಾರದು. ನಮ್ಮ ಧಾತುಕೋಶಗಳ ಸಾಲಿನಲ್ಲಿ ಸಾಧಿತಧಾತು ರೂಪಕೋಶ—ಸಂಪುಟ ೧ ಮತ್ತು ಸಂಪುಟ ೨

ಎಂಬ ಎರಡು ಪುಸ್ತಕಗಳು ಪ್ರಕಾಶವಾಗಲಿವೆ. ಅವಲ್ಲಿ ಮೊದಲನೆಯದರಲ್ಲಿ, ಆರಿಸಲಾಗಿರುವ 360 ಧಾತುಗಳಿಗೂ ಭಾವೇ/ಕರ್ಮಣಿ ಹಾಗೂ ಣಿಚ್ ಮತ್ತು ಸನ್–ಇವುಗಳಲ್ಲಿ ರೂಪಗಳು ದೊರೆಯುವುವಾಗಿವೆ. ಅಂತೆಯೇ ಎರಡನೆಯದರಲ್ಲಿ ಯಙ್ ಮತ್ತು ಯಙ್‌ಲುಕ್‌ಗಳ ರೂಪಗಳು ದೊರಿಯುವುವು.

ಹೀಗಾಗಿ ಇವುಗಳನ್ನಾಧರಿಸಿಯೇ ವರ್ತಮಾನದಲ್ಲಿ ಭಾವೇ/ಕರ್ಮಣಿ ಕೃದ್ರೂಪಗಳನ್ನು ಪಡೆಯುವುದು ಅಸಾಧ್ಯವಾಗದೆ ಉಳಿಯುತ್ತದೆ. ಉದಾಹರಣೆಗೆ ಕೃಧಾತುವಿನ ಕರ್ಮಣಿ ರೂಪ 'ಕ್ರಿಯತೇ' ಎಂಬುದನ್ನು ಪಡೆದು ಕೃದಂತದಲ್ಲಿ 'ಕ್ರಿಯಮಾಣ' ಎಂಬ ರೂಪವನ್ನು ಪಡೆಯುವುದು ತೀರ ಕಷ್ಟವೆನಿಸಲಾರದು.

ಅಂತೂ ಈ ಹಲವು ಸಂಪುಟಗಳನ್ನು ಬರೆದು, ಈ ಹಿಂದೆ ಬಂದಿರತಕ್ಕ ಹಲವು ಧಾತುರೂಪ–ಕೃದ್ರೂಪ ಗ್ರಂಥಗಳಲ್ಲಿ ಕಂಡುಬರತಕ್ಕ ಯಾವೊಂದು ದೋಷವಾದರೂ ಉದ್ಭವಿಸಿ, ಉಪಯೋಜಕರಿಗೆ ಶ್ರಮ–ಭ್ರಮಗಳಾದಂತಹ ಕ್ರಮಗಳನ್ನು ಆದಷ್ಟೂ ಎಚ್ಚರವಹಿಸಿ ತೆಗೆದುಕೊಂಡಿದ್ದೇವೆಂಬುದನ್ನು ಮಾತ್ರ ವಿನಯಪೂರ್ವಕವಾಗಿ ವಿಜ್ಞಾಪಿಸಿಕೊಳ್ಳುತ್ತೇವೆ.

ಮತ್ತು ಪ್ರಕೃತ, ಪ್ರಕೃತಗ್ರಂಥದಲ್ಲಿ ನಾವು ಅಳವಡಿಸಿ ಬಳಸಿರುವ ವಿಧಿ—ವಿಧಾನಗಳನ್ನು "ಈ ಪುಸ್ತಕದ ಸ್ವರೂಪ" ವೆಂಬ ಶೀರ್ಷಿಕೆಯಲ್ಲಿ ತಿಳಿಸಬಯಸುತ್ತೇವೆ. ವಾಚಕರು ಇವನ್ನು ಸಾವಧಾನವಾಗಿ ಓದಿಕೊಂಡರೆ ಈ ಪುಸ್ತಕದಿಂದ ಹೆಚ್ಚು ಪ್ರಯೋಜನವನ್ನು ಪಡೆಯುವುದು ಶಕ್ಯವಾಗುತ್ತದೆ. ಈ ಪುಸ್ತಕವು ಯಾವುದೇ ಕೋಶದಂತೆ [dictionary]—ಅಥವಾ ಅದಕ್ಕಿಂತಲೂ ವಿಶೇಷವಾಗಿ*–ಯಾವಜ್ಜೀವವೂ ಬಳಸಬಹುದಾದ ಪುಸ್ತಕವೆನಿಸುವುದರಿಂದ ಪ್ರಯೋಗೈಕದೃಷ್ಟಿಗೆ ಶೀಘ್ರ–ಸುಲಭವೆನಿಸಲು "ಈ ಪುಸ್ತಕವನ್ನು ಬಳಸುವ ಬಗೆ" ಯನ್ನು ಮೇಲೆ ಸೂಚಿಸಿದ ಶೀರ್ಷಿಕೆಯಡಿಯ ವಿಷಯದ ಸಾರಮಾತ್ರವಾಗಿ ಸಂಗ್ರಹಿಸಿ ಹೇಳುತ್ತೇವೆ.

[*ಏಕೆಂದರೆ ಕೋಶಗಳಲ್ಲಿ ಕಾಲಕಾಲಕ್ಕೆ ಕೆಲ ಹೊಸ ಶಬ್ದಗಳು ಸೇರುವುವು, ಕೆಲವು ಮರೆಯಾಗುವುವು. ಇಲ್ಲಿರುವ ರೂಪಗಳು ಉಳಿಯುವಂತಹವು.]

2

ವಸ್ತು ನಿರೂಪಣ ಕ್ರಮ

21 ಈ ಪುಸ್ತಕದ ಸ್ವರೂಪ

ಈ ಪುಸ್ತಕದಲ್ಲಿ ಮುಖ್ಯವೆನಿಸಬಹುದಾದ 360 ಧಾತುಗಳನ್ನು ಆರಿಸಿ ಅವುಗಳಿಗೆ ಮುಖ್ಯ ಹತ್ತು ಕೃತ್ತುಗಳಲ್ಲಿ ರೂಪಗಳನ್ನು ಕೊಡಲಾಗಿದೆ.

(೩) ಕೋಶವಿಭಾಗ

ಧಾತು–ಲಕ್ಷಣಗಳು

ಮುಖ್ಯವೆಂದರೆ ಹೇಗೆ ? * ಕಾವ್ಯಭಾಗಗಳನ್ನೋದಲು ಮತ್ತು ವ್ಯವಹರಿಸಲು ಬೇಕಾಗುವ ಧಾತುಗಳಲ್ಲಿ ಕೆಲವನ್ನು ಆರಿಸಿದೆ. ವಾಚಕರ ಅಪೇಕ್ಷೆಯ ಮೇರೆಗೆ ಮುಂದಿನ ಸಂಸ್ಕರಣಗಳಲ್ಲಿ ಇದನ್ನು ವರ್ಧಿಸುವ ಸಂಕಲ್ಪವಿದೆ.

ಧಾತುಗಳನ್ನು ನಿರನುಬಂಧವಾಗಿಯೇ ಸರ್ವತ್ರ ಕೊಟ್ಟಿದೆ § ಧಾತುಗಳನ್ನು ಗಣಶಃ –ಪದಶಃ ಕೊಡುವುದರ ಬದಲು ಅಕಾರಾದಿಯಾಗಿಯೇ ಕೊಟ್ಟಿದೆ. ಇದರ ಮತ್ತೂ ಒಂದು ಪ್ರಯೋಜನವಿದೆ: ಒಂದೇಧಾತುವು ಬೇರೆ ಬೇರೆ ಗಣಗಳಲ್ಲಿರಬಹುದು. † ಆಗ ಬರುವ ರೂಪಸಾಮ್ಯ, ರೂಪ

---

* ನಮ್ಮ ಧಾತುರೂಪ ಕೋಶ: ಸವಿವರಣವನ್ನು ನೋಡಿ§ 0.9.

§ ಇವುಗಳೆಲ್ಲದರ ಪಾಣಿನೀಯಧಾತುಪಾಠವನ್ನೂ ಅ. ಗ್ರ. ದಲ್ಲಿ § 3.503 ರಲ್ಲಿ ನೋಡಿ.

† ಇಂತಹ ಧಾತುಗಳ ಪಟ್ಟಿಯೊಂದನ್ನು ಅ. ಗ್ರ § 3.512 ದಲ್ಲಿ ನೋಡಬಹುದು. ಗಣಾನುಸಾರ–ಪದಾನುಸಾರ (ಹಾಗೂ ಇಟ್ ತ್ವಾನುಸಾರ) ಪಟ್ಟಿಗೆ ನೋ. ಅ.ಗ್ರ. § 3.504 ಮತ್ತು ಅವನ್ನು ಕುರಿತಾದ ಅಂಕಿ-ಅಂಶಗಳಪಟ್ಟಿಗೆ ನೋ. ಅ. ಗ್ರ. § 3.506 3 507. ಅಂತೆಯೇ ನಿತ್ಯೋಪಸರ್ಗ ಪೂರ್ವಕ ಧಾತುಗಳ ಪಟ್ಟಿ (§ 3.514). ಏಕತ್ರಪಠಿತ ಭಿನ್ನಗಣೀಯ ಧಾತುಗಳು (§ 3.513)ಗಳನ್ನು ನೋಡಿ.

ವೈಷಮ್ಯಗಳು ಈ ಕ್ರಮದಿಂದ ಮತ್ತೂ ಸ್ಫುಟವಾಗುತ್ತವೆ ಮತ್ತು ಅಂತಹ ಧಾತುಗಳನ್ನು ಪುಷ್[1], ಪುಷ್[2], ಪುಷ್[3] ಎಂಬ ಬಗೆಯಲ್ಲಿ ನಿರೂಪಿಸಿದೆ.

ಪ್ರತಿಧಾತುವಿಗೂ ಗಣ-ಪದಗಳನ್ನು ನಿರ್ದೇಶಮಾಡಿಯೇ ಇದೆ. ಇವೇ ಅಲ್ಲದೆ ಕರ್ಮವತ್ವ (ಸಕರ್ಮಕ/ಅಕರ್ಮಕ/ದ್ವಿಕರ್ಮಕ) ಹಾಗೂ ಇಟ್‌ತ್ವ (ಸೇಟ್/ಅನಿಟ್/ವೇಟ್) ಎಂಬೀ ಅಂಶಗಳನ್ನೂ ಪ್ರತಿಧಾತುವಿಗೂ ಕೊಡಲಾಗಿದೆ. *

ಅಂತೆಯೇ ಅರ್ಥವನ್ನೂ ಪ್ರತಿಧಾತುವಿಗೂ ಸಂಕ್ಷೇಪವಾಗಿ ಸೂಚಿಸಿದೆ.† ಧಾತುವನ್ನು ಗುರುತಿಸಲಾಗುವಷ್ಟೇ ಅರ್ಥವನ್ನು ಕೊಡುವುದು ನಮ್ಮ ಉದ್ದೇಶವಾಗಿದೆಯೇ ವಿನಾ ವಿಸ್ತಾರವಾದ ನಿರೂಪಣೆಯಲ್ಲ. ಉದಾ. ಪಾ ಧಾತುವೇದರೆ ಮೊದಲನೆಯ ಗಣದ ಧಾತುವೋ ? ಎರಡನೆಯ ಗಣದ ಧಾತುವೋ-ಎಂಬುದನ್ನು ಅರ್ಥಭೇದದಿಂದ ತಿಳಿಯುವ ಕ್ರಮಕ್ಕಾಗಿ.

ಯಾವ ಕೃತ್ತುಗಳು ?

ಇವಿಷ್ಟೂ ಧಾತುಗಳಿಗೂ ಹತ್ತು ಕೃತ್ ಪ್ರತ್ಯಯಗಳನ್ನು ಸೇರಿಸಿದಾಗ ಆಗುವ ರೂಪಗಳನ್ನು ವ್ಯವಸ್ಥಿತವಾಗಿ ಕೊಡಲಾಗಿದೆ: ಆ ಹತ್ತು ಪ್ರತ್ಯಯಗಳನ್ನು ಸಂಖ್ಯೆಯಿಂದ ನಿರ್ದೇಶಿಸಿದೆ. ಹೀಗಾಗಿ ಗ್ರಂಥದಾದ್ಯಂತ 'ಆ ಸಂಖ್ಯೆಗೆ ಅದೇ ಕೃದಂತರೂಪ' ವೆಂದು ತಿಳಿಯಬಹುದಾಗಿದೆ.

ಇವುಗಳ ಪರಸ್ಪರ ಸಂಬಂಧವನ್ನು ಹೀಗೆ ತಿಳಿಯಬಹುದಾಗಿದೆ—

---

* ವಸ್ತುತಃ ಈ ಎಲ್ಲ ಅಂಶಗಳನ್ನು ಅ. ಗ್ರ.ದಲ್ಲೇ ಕೊಟ್ಟಿದೆ. ಆದರೂ ಸೌಕರ್ಯಕ್ಕಾಗಿ ಇಲ್ಲಿ ಮತ್ತೆ ಕೊಟ್ಟಿದೆ.

† ಅರ್ಥವನ್ನು ಇನ್ನೂ ವಿಸ್ತಾರವಾಗಿ ಅ. ಗ್ರ. ದಲ್ಲಿ ನೋಡಬಹುದು. ಸೋಪಸರ್ಗ-ಸನ್ನಿವೇಶದಲ್ಲಿ ಬರುವ ಅರ್ಥವಿಶೇಷವನ್ನು ಬೇರೆಡೆ ಕೊಡುವವು. ನೋ. "ನಮ್ಮ ಪ್ರಕಟಣೆಗಳು"—ಈ ಕೃತಿಯ ಕೊನೆಯಲ್ಲಿ.

(1) ತವ್ಯತ್/ತವ್ಯ (2) ಅನೀಯ (3) ಯ(ಣ್ಯತ್/ಕ್ಯಪ್/ಯತ್) (4) ಕ್ತ (5) ಕ್ತವತು (6) ಶತೃ-ಶಾನಚ್ (7) ಸ್ಯಶತೃ-ಸ್ಯಶಾನಚ್ (8) ತುಮುನ್ (9) ಕ್ತ್ವಾ ಮತ್ತು (10) ಲ್ಯಪ್.

ಅಂಕಾರಕ್ಷಾಕವಚಗಳಲ್ಲಿ

ಆಂಗ್ಲಭಾಷಾಕೋಶ (Dictionary) ಗಳಲ್ಲಿ ಉಚ್ಚಾರಣೆಯ ಬಗೆಯನ್ನು ಸೂಚಿಸಲು ಪ್ರತಿಪುಟದಲ್ಲೂ ಆದರ್ಶಗಳನ್ನು ಕೊಟ್ಟಿರುವುದುಂಟು. "ಸಂಕ್ಷೇಪಗಳ ಪಟ್ಟಿ"ಯಂತೆ ಇದರೊಂದು ಪಟ್ಟಿಯನ್ನು ಮಾತ್ರ ಕೊಟ್ಟರೆ ಸಾಲದು. ಏಕೆಂದರೆ ಕ್ಷಣಕ್ಷಣಕ್ಕೂ, ಅಥವಾ ಬಹುಕಾಲಾನಂತರ ಈ ಒಂದು ನಿಯಮ/ಸಂಬಂಧ ಮರೆತಾಗ, ಮತ್ತೆ ಆ ಪುಟವನ್ನೇ ಹುಡುಕುವುದು ಸುಗಮವೆನಿಸದು. ಮೇಲೂ ಅದು ಮೊದಲನೆಯ ಅಥವಾ ಕಡೆಯ ಪುಟದೊಳಗೇ ಇರಬೇಕೆಂದು ನಿಯಮಮಾಡಿಕೊಳ್ಳುವುದೂ ಕಷ್ಟವೇ.

ಇದಕ್ಕಾಗಿ ಮತ್ತೊಂದು ಕ್ರಮವನ್ನನುಸರಿಸುವುದೂ ಉಂಟು ಆದೆಂದರೆ ಪುಸ್ತಕದ ರಕ್ಷಾಕವಚದ ಎರಡೂ ಒಳಪುಟಗಳಲ್ಲಿ (inside pages of the cover) ಇದರ ನಿರ್ದೇಶವಿರುವುದು. ಹೀಗಿದ್ದಲ್ಲಿ ಅದನ್ನು ಬಳಸುವುದು ಸುಲಭವಾಗುತ್ತದೆ.

ಇದೇ ಕ್ರಮವನ್ನೇ ಈ ಪುಸ್ತಕದಲ್ಲೂ ಸಹ ಕಾಣಬಹುದಾಗಿದೆ. ಸಂಖ್ಯೆ-ಕೃತ್ತುಗಳ ಸಂಬಂಧವನ್ನು ಈ ಬಗೆಯಲ್ಲಿ ತಿಳಿಯಬಹುದು. (ನಮ್ಮ ಧಾತುರೂಪಕೋಶ: ಸವಿವರಣದಲ್ಲೂ ಇದೇ ಕ್ರಮವನ್ನು ನಾವು ಈ ಹಿಂದೆ ದಶಲಕಾರಗಳಿಗಾಗಿ ಒಂದರಿಂದ ಹತ್ತು ಸಂಖ್ಯೆಗಳನ್ನು ಬಳಸಿರುವುದನ್ನು ನೆನೆಸಿಕೊಳ್ಳಬಹುದು).

ಈ ಕೃತ್ತುಗಳೇ ಏಕೆ ?

ಈ ಹತ್ತು ಕೃತ್ತುಗಳನ್ನೇ ತೆಗೆದುಕೊಳ್ಳಲು ಕಾರಣ, ಇವೇ ಸಂಸ್ಕೃತ ಭಾಷೆಯ ಬಳಕೆಯಲ್ಲಿ ಬಹುಲತಮವಾಗಿ ಉಪಯೋಗಿಸಲ್ಪಡುತ್ತವೆ ಎಂಬುದು. ಅತ್ಯಂತ ಪ್ರಾಚೀನ ಸಾಹಿತ್ಯದಿಂದಲೂ ಅತ್ಯಂತ ನವೀನ ಸಾಹಿತ್ಯದವರೆಗೂ ಅನುಸ್ಯೂತವಾಗಿ ಅತ್ಯಂತ ಹೆಚ್ಚಿಗೆ ಉಪಯೋಗಿಸಲ್ಪಟ್ಟಿರುವ ಮತ್ತು –ಪಡುತ್ತಿರುವ ಕೃದಂತಗಳು ಇವೇ ಸರಿ.

ಕನ್ನಡದಲ್ಲಿ ಏಕೆ ?

ಈ ಪುಸ್ತಕವನ್ನು ಕನ್ನಡದಲ್ಲಿ ಮುದ್ರಿಸಲು ಕಾರಣಗಳಿವೆ. ನಮ್ಮ ಈ ಹಿಂದಿನ ಪುಸ್ತಕಗಳಿಗನ್ವಯಿಸುವ ಕಾರಣವೇ ಇಲ್ಲೂ ಅನ್ವಯಿಸುತ್ತವೆ. ಅರ್ಥಾತ್ ಹಿಂದಿ ಹಾಗೂ ಇಂಗ್ಲಿಷ್ ಸಂಸ್ಕರಣಗಳನ್ನು ನಾವೇ ಮುಂದೆ ಪ್ರಕಟಿಸುವ ಉದ್ದೇಶವುಳ್ಳವರಾಗಿದ್ದೇವೆ.

ಹೇಗೂ ಪುಸ್ತಕದಲ್ಲಿ ವಿವರಣೆಗಳನ್ನು ಕನ್ನಡದಲ್ಲಿ ಕೊಟ್ಟಮೇಲೆ ಮಿಕ್ಕ ಅಂಶವೂ ಕನ್ನಡದಲ್ಲೇ ಇದ್ದರೆ ಮುದ್ರಣಾದಿಗಳಿಗೆ ಸೌಕರ್ಯವಷ್ಟೆ.

ಇವೆಲ್ಲಕ್ಕಿಂತಲೂ ಹೆಚ್ಚಾಗಿ ಈ ಪುಸ್ತಕವನ್ನು ಕನ್ನಡದಲ್ಲಿ ಮುದ್ರಿಸಿರುವ ಉದ್ದೇಶ-ಇದು ಕನ್ನಡ ಭಾಷಾ ಸಮೃದ್ಧಿ ಹಾಗೂ ಶುದ್ಧಿಗಳಿಗೆ ಅತ್ಯಂತ ಪೋಷಕವಾಗಿರುವುದೆಂದು.

ಮುಂದೆ ಕೃತ್ತುಗಳ ಒಳಕೆ—ಅರ್ಥಗಳ ಬಗ್ಗೆ ಬರೆಯುವಾಗ ಕನ್ನಡಕ್ಕೂ ಇವು ಹೇಗೆ ಪ್ರಯೋಜಕಗಳಾಗುವುವೆಂಬಂಶವನ್ನು ನಾವು ತೋರಿಸಲಿದ್ದೇವೆ. ಅಲ್ಲಿ ಈ ವಿಚಾರವನ್ನು ವಿಶದವಾಗಿ ತಿಳಿದುಕೊಳ್ಳಬಹುದಾದರೂ 1, 2, 3, 4 ಮತ್ತು ಕೆಲವೊಮ್ಮೆ (ವಿಶೇಷವಾಗಿ ಆತ್ಮನೇಪದ ಧಾತುಗಳಲ್ಲಿ) 6—ಈ ರೂಪಗಳು ಕನ್ನಡಕ್ಕೆ ಉಪಕರಿಸುವುವೆಂದು ಸ್ಥೂಲವಾಗಿ ಹೇಳಿ ಇಲ್ಲಿ ಮುಗಿಸಬಹುದು.

ವಸ್ತುತಃ ಈ ತೆರನಾಗಿ ಕೃತ್ತುಗಳು ಭಾರತೀಯ ಭಾಷೆಗಳಲ್ಲಿ ಬಹುಮಂದಿಗೆ ಬಹುಮಟ್ಟಿಗೆ ಸಹಾಯಕವೆನಿಸಿವೆ.

ಇದೇ ಕ್ರಮವೇಕೆ ?

1 ರಿಂದ 10 ರವರೆಗೆ ಕೃತ್ತುಗಳನ್ನು ಇದೇ ಕ್ರಮ (order) ದಲ್ಲಿ ಅಳವಡಿಸಿರುವ ಉದ್ದೇಶವೇನು ? ಯಾವ ಕ್ರಮದಲ್ಲಿ ಜೋಡಿಸಿದರೂ ಈ ಪ್ರಶ್ನೆ ಬರಬಹುದಾದರೂ, ಪ್ರಸಕ್ತ ಕ್ರಮದಲ್ಲಿ ವಿಶೇಷೋದ್ದೇಶವಿದೆ ಯೆಂಬುದನ್ನು ಸೂಚಿಸಬಯಸುತ್ತೇವೆ.

ಸಾರಾಂಶವಾಗಿ ಹೇಳುವುದಾದರೆ ಅರ್ಥವನ್ನು ಆಧರಿಸಿ ಈ ಒಂದು ಕ್ರಮ ವನ್ನು ಯೋಜಿಸಿದ್ದೇವೆ. ಇದನ್ನು ಮತ್ತೂ ವಿಶದವಾಗಿ ಕೃದರ್ಥಪ್ರಕರಣ ದಿಂದ ತಿಳಿಯಬಹುದು, ಸಂಗ್ರಹವಾಗಿ ಇಷ್ಟು ವಿಷಯವನ್ನು ಇಲ್ಲಿ ಹೇಳ ಬಹುದು.

1 (1–10) ಮೊದಲ ಮೂರು ಒಂದು ಗುಂಪು–ಮೂರೂ ವಿಧ್ಯರ್ಥಕಗಳೇ;

ಮುಂದಿನ ನಾಲ್ಕು ಒಂದು ಗುಂಪು–ಇವಲ್ಲಿ ಮೊದಲೆರಡು ಭೂತ ಕೃದಂತಗಳು ಮತ್ತು ಮುಂದಿನೆರಡು ವರ್ತಮಾನ ಹಾಗೂ ಭವಿಷ್ಯತ್ ಕೃದಂತಗಳು.

ಕೊನೆಯ ಮೂರೂ ಅವ್ಯಯಗಳು.

2 (1–7) ಮೊದಲ ನಾಲ್ಕೂ ಕರ್ಮಣಿರೂಪಗಳೇ. ಮುಂದಿನ ಮೂರು ಕರ್ತರಿ.

3 (1–4) (a) ಮೊದಲ ನಾಲ್ಕೂ ಪುಲ್ಲಿಂಗ–ನಪುಂಸಕಲಿಂಗಗಳಲ್ಲಿ ಅಕಾರಾಂತವೇ; ಸ್ತ್ರೀಲಿಂಗದಲ್ಲಿ ಆಕಾರಾಂತವೇ.

(b) ಮೊದಲ ನಾಲ್ಕೇ ಕನ್ನಡದಲ್ಲಿ ಬಳಕೆಗೆ ಹೆಚ್ಚಾಗಿ ಉಪಯುಕ್ತವೆನಿಸುತ್ತವೆ.

4 (1-3) ಮೊದಲ ಮೂರೂ ಕೃತ್ಯ ಪ್ರತ್ಯಯಗಳೆನಿಸುತ್ತವೆ.

ಶ್ಲೋ: ತವ್ಯಂ ಚ ತವ್ಯತಂ ಚಾನೀಯರಂ ಕೇಲಿಮರಂ ತಥಾ ।
ಯತಂ ಣ್ಯತಂ ಕ್ಯಪಂ ಚೈವ ಸಪ್ತ ಕೃತ್ಯಾನ್ ಪ್ರಚಕ್ಷತೇ ॥†

5. (1–3) ಮೂರೂ ಸಮಾನಾರ್ಥಕವೆಂದೇ ಹೇಳಬಹುದು. ಮೊದಲ ಮೂರರಲ್ಲೂ ತವ್ಯ-ಅನೀಯಗಳೆಂಬ ಮೊದಲೆರಡರ ರೂಪಗಳೇ ಸುಕರ. ಮೂರನೆಯದೇ ಕಷ್ಟ. ಅದರಲ್ಲೇ ರೂಪಬಹುಲತೆ ತಲೆದೋರುವುದು ಹೆಚ್ಚು. ಏಕೆಂದರೆ ಯಕಾರ(ವೆಂಬ ಒಂದೇ ವ್ಯಂಜನ)ದಲ್ಲೇ ಪರ್ಯವಸಾನವಾಗುವ ಮೂರು ಪ್ರತ್ಯಯಗಳ ಎಡೆಯದು. ಅಂತೂ ಇದಕ್ಕಾಗಿಯೇ ಅದಕ್ಕೆ ಮೂರನೆಯ ಸ್ಥಾನ.

6. (4–5) 4 ಮತ್ತು 5 ರಲ್ಲಿ ಮೊದಲು ಭೂತಕೃದಂತ ಕರ್ಮಣಿಯನ್ನು ಕೊಟ್ಟು ಆಮೇಲೆ ಕರ್ತರಿಯನ್ನು ಕೊಟ್ಟಿದೆ. ಇದಕ್ಕೆ ಕಾರಣ ಕರ್ಮಣಿಯ ರೂಪಕ್ಕೆ ಇನ್ನೆರಡಕ್ಷರಗಳನ್ನು ಸೇರಿಸಿದರೆ ಕರ್ತರಿಯ ರೂಪ ಬರುವುದೊಂದಂಶ. ಮತ್ತೊಂದೆಂದರೆ ಕೆಲವೆಡೆ ಮೊದಲನೆಯ ರೂಪಕ್ಕೇ ಕರ್ತರ್ಯರ್ಥವೂ ಉಂಟು. ಆದರೆ ಎರಡನೆಯದಕ್ಕೆ ಹಾಗಿಲ್ಲ.

7. (4, 5–6–7) 4 ಮತ್ತು 5; ಆದಮೇಲೆ 6; ಆಮೇಲೆ 7– ಇವು ಕ್ರಮವಾಗಿ ಭೂತಕೃದಂತವಾದಮೇಲೆ ವರ್ತಮಾನ ; ಆಮೇಲೆ ಭವಿಷ್ಯತ್ ಎಂಬ ಕೃತ್ತುಗಳು. ಹೀಗೆ ಕಾಲಿಕಕ್ರಮವಿಲ್ಲಿದೆ.

8. (6–7) (a) ವರ್ತಮಾನ ಹಾಗೂ ಭವಿಷ್ಯತ್ ಕೃದಂತಗಳ ನಡೆ ಒಂದೇ ತೆರನೇ. ಧಾತುವು ಪರಸ್ಮೈಪದಿಯಾಗಿದ್ದರೆ ಕ್ರಮವಾಗಿ ಶತೃ-ಸ್ಯಶತೃ ರೂಪಗಳು : ಆತ್ಮನೇಪದಿಯಾಗಿದ್ದರೆ ಶಾನಚ್-ಸ್ಯಶಾನಚ್ ರೂಪಗಳು. (ಉಭಯಪದಿಯಾಗಿದ್ದರೆ ಇವೆರಡೆರಡೂ.) (b) ಪರಸ್ಮೈಪದಿ ಧಾತುಗಳಲ್ಲಿ ಇವೆರಡಕ್ಕೂ, ಸ್ತ್ರೀರೂಪ ಅವಶ್ಯಗಮನಿಸಬೇಕಾದುದು.

† ಈ ಏಳರಲ್ಲಿ ನಾವು ಬಿಟ್ಟಿರುವುದು "ಕೇಲಿಮರ್"–ಒಂದನ್ನೇ: ಇದು ಕೆಲವೇ ಧಾತುಗಳಿಗೆ ಮಾತ್ರವೇ ಸೇರುವಂತಹುದು (ತವ್ಯ-ತವ್ಯತ್‌ಗಳಲ್ಲಿ ರೂಪಭೇದವು ಬರುವುದಿಲ್ಲ: ಸ್ವರಭೇದ ಮಾತ್ರವಿರುತ್ತದೆ ಮತ್ತು ಅದು ಇಲ್ಲಿ ಅಪ್ರಕೃತ).

9. (6-7-8) (a) ವರ್ತಮಾನ ಭವಿಷ್ಯತ್ ಕೃತ್ತುಗಳು ಕರ್ತ್ರರ್ಥ ದಲ್ಲಿ ಉಪಯೋಗವಾಗುವಂತೆ ಕೆಲವೊಮ್ಮೆ ತುಮುನ್ನಂತವೂ ಆಗುವುದುಂಟು (ಪ್ರಯೋಗವನ್ನು ಬೇರೆಡೆ ಕೊಟ್ಟದ್ದೇವೆ) (b) ತುಮುನ್ನಿಗೆ ಭವಿಷ್ಯದರ್ಥವೇ ನಿಕಟ ; ಎರಡರಲ್ಲೂ ಕಾರ್ಯ ಅಸಿದ್ಧವೇ.

10 (9-10) (a) ಕೊನೆಯೆರಡೂ ಸಮಾನಾರ್ಥಕಗಳೇ-ಎರಡೂ ಭೂತಕೃದಂತಾವ್ಯಯಗಳೇ. ಧಾತುವಿಗೆ ಉಪಸರ್ಗದ ಸೇರ್ಪಡೆಯಿಲ್ಲದಿದ್ದರೆ ಕ್ತ್ವಾ ; ಇದ್ದರೆ ಕೊನೆಯ ರೂಪ ಲ್ಯಪ್. (b) 8-9-10. ತುಮುನ್ ಮತ್ತು ಕ್ತ್ವಾ-ಲ್ಯಪ್‌ಗಳು ಮೂರರಲ್ಲೂ ಸಮಾನಕರ್ತೃಕತ್ವ ಅವಶ್ಯ.

ಇವೇ ಮೊದಲಾದುವನ್ನು ವಾಚಕರೇ ಊಹಿಸಿಕೊಳ್ಳಬಹುದು. ಪ್ರಾಯಶಃ ಇದಕ್ಕಿಂತಲೂ ಕ್ರಮಬದ್ಧತೆಯನ್ನು ಈ ಹತ್ತರಲ್ಲಿ ತರುವುದು ಅಸಾಧ್ಯ.

ಲಿಂಗನಿರ್ದೇಶ

ಹಿಂದಿನ ವಿಭಾಗದಲ್ಲಿ ತಿಳಿಸಿರುವಂತೆ ಕೊನೆಯ ಮೂರು ಅವ್ಯಯಗಳು. ಮಿಕ್ಕವಕ್ಕೆಲ್ಲ (ಸಾಮಾನ್ಯವಾಗಿ) ಭಿನ್ನಲಿಂಗಗಳಲ್ಲಿ ಭಿನ್ನರೂಪಗಳುಂಟು.

ಹೀಗಿರುವುದು ಕೃತ್ತುಗಳ ಒಂದು ವೈಶಿಷ್ಟ್ಯವೇ ಆಗಿದೆ. ಅರ್ಥಾತ್ ಅವು ವಿಶೇಷಣಗಳಂತೆಯೂ ವರ್ತಿಸುತ್ತವೆ* ಎಂತಲೇ ಅಮರಕೋಶದಲ್ಲೂ ಅವನ್ನು ಮೂರನೇ ಕಾಂಡದ ಮೊದಲನೇ ವರ್ಗ**ದಲ್ಲಿ ವಿಶೇಷವಾಗಿ ಗಮನಿಸುವುದು ಕಂಡುಬರುತ್ತದೆ.

---

* ಇಂಗ್ಲೀಷಿನಲ್ಲಿ ಸಹ ಇದು ಉಂಟು. Participle ಪದದ ವ್ಯಾಖ್ಯೆಯೇ ಹಾಗಿದೆ. "A verb form that can also function as an adjective "- ನೋ. Funk and Wagnalls Standard Dictionary, NewYork.1980. ಅದರ ವ್ಯುತ್ಪತ್ತಿಯೂ ಹಾಗೆಯೇ "Participium(ಲ್ಯಾಟಿನ್)-a sharing, partaking"-ಅ.ಗ್ರ.

** ವಿಶೇಷ್ಯನಿಘ್ನವರ್ಗಃ ; ("ಅಧೀನೋ ನಿಘ್ನ ಆಯತ್ತಃ....")(= 'ವಿಶೇಷಣ' ವರ್ಗ: !) ಅಲ್ಲಿನ ಪರಿಭಾಷೆಯನ್ನೂ ಆತನೇ ತಿಳಿಸಿದ್ದಾನೆ. ನೋ:-

"ಸ್ತ್ರೀದಾರಾದ್ಯೈರ್ಯದ್ವಿಶೇಷ್ಯಂ ಯಾದೃಶೈಃ ಪ್ರಸ್ತುತಂ ಪದೈಃ।
ಗುಣದ್ರವ್ಯಕ್ರಿಯಾಶಬ್ದಾಸ್ತಥಾ ಸ್ಯುಸ್ತಸ್ಯ ವಾಚಕಾಃ ॥" ಶ್ಲೋ. 2.

ಇದನ್ನೇ ವೈಯಾಕರಣರ ಪಲ್ಲವಿಯಾದ 'ಕೃದಭಿಹಿತೋ ಭಾವೋ ದ್ರವ್ಯವತ್ ಪ್ರಕಾಶತೇ' ಎಂಬ ಮಾತೂ ಪರಾಮರ್ಶಿಸುತ್ತದೆ.

ಹೀಗಿರಲು (a) ಮೊದಲ ಏಳು ರೂಪಗಳಿಗೂ ಮೂರು ಲಿಂಗಗಳಲ್ಲೂ ರೂಪಗಳನ್ನು ತೋರಿಸುವುದು ಅಥವಾ (b) ಮೂರಕ್ಕೂ ಸಾಧಾರಣವಾಗಿ (common) ಪ್ರಾತಿಪದಿಕಮಾತ್ರವನ್ನು ಸೂಚಿಸುವುದು–ಇದು ಕ್ರಮ ವೆನಿಸುತ್ತದೆ.

ಆದರೆ ನಾವು ಇವೆರಡನ್ನೂ ಮಾಡಿಲ್ಲ; ಮೂರನೆಯ ಹಾದಿಯೊಂದನ್ನು ಹಿಡಿದಿದ್ದೇವೆ. 1–2–3–4 ಇವಿಷ್ಟರ ಅಂತವು ಹಿಂದೆಯೇ, ಸೂಚಿಸಿದಂತೆ ಪುಲ್ಲಿಂಗ–ನಪುಂಸಕಗಳಲ್ಲಿ 'ಅ' ಕಾರವೂ, ಸ್ತ್ರೀಲಿಂಗದಲ್ಲಿ 'ಆ' ಕಾರವೂ ಆಗಿರುತ್ತದೆ. ಆತ್ಮನೇಪದಿ ಧಾತುಗಳ ವಿಷಯದಲ್ಲಿ ಇದು 6 ಮತ್ತು 7ನೇ ರೂಪಗಳಿಗೂ ಅನ್ವಯಿಸುತ್ತದೆ.

ಆದರೆ 5ನೆಯದರ ಅಂತವು ಸದಾ ತಕಾರವೇ ಆಗಿರುತ್ತದೆ. ಅಂತೆಯೇ ಪರಸ್ಮೈಪದಿಧಾತುಗಳ ವಿಷಯದಲ್ಲಿ 6 ಮತ್ತು 7ರ ರೂಪಗಳು ತ ಕಾರಾಂತವೇ ಆಗಿರುತ್ತವೆ. ಯಥಾಪ್ರಕಾರ ಇದು ಪುಲ್ಲಿಂಗ, ನಪುಂಸಕಲಿಂಗಗಳ ಮಾತಾಯಿತು. ಸ್ತ್ರೀಲಿಂಗದಲ್ಲಿ ಈ ಕಾರಾಂತವು ಬರುತ್ತದೆ. (ಈಮಧ್ಯೆ ನುಮಾಗಮವು ಕೆಲವೊಮ್ಮೆ ಬರುವುದುಂಟು, ಕೆಲವೊಮ್ಮೆ ಬರದಿರುವುದುಂಟು. ಕೆಲವೆಡೆ ವಿಕಲ್ಪವೂ ಉಂಟು.)

ಉಭಯಪದಿ ಧಾತುಗಳ ವಿಷಯದಲ್ಲಿ ಮೇಲೆ ಹೇಳಿದ ಪರಸ್ಮೈ/ ಆತ್ಮನೇಗಳ ವಿಷಯಗಳೆರಡೂ ಅನ್ವಿತವಾಗುತ್ತವೆ.

ಇವಲ್ಲಿ 1–2–3ರ ಲಿಂಗವನ್ನು ಕೆಲವೆಡೆ ಪುಲ್ಲಿಂಗವಾಗಿ, ಕೆಲವೆಡೆ ನಪುಂಸಕಲಿಂಗವಾಗಿ (ಮತ್ತೆ ಕೆಲವೆಡೆ ಒಂದೊಂದೊಂದೊಂದಾಗಿ ಪ್ರಥಮಾವಿಭಕ್ತಿ ಏಕವಚನದಲ್ಲಿ ನಿರ್ದೇಶಿಸಲಾಗಿದೆ. ಇದಕ್ಕೆ ಯಾವ ಮಹತ್ವವನ್ನೂ ಕೊಡಬೇಕಾಗಿಲ್ಲ.

ಧಾತುವು ಅಕರ್ಮಕವಾಗಿದ್ದಲ್ಲಿ 1–2–3–4ರಲ್ಲಿ ಬಹುಮಟ್ಟಿಗೆ ನಪುಂಸಕ ಪ್ರಥಮೈಕವಚನ ರೂಪವೇ ಸಿಗುವುದನ್ನು ನೋಡಬಹುದು. ಇದು ಅರ್ಥಾನುರೋಧದಿಂದಾಗುವಂತಹುದು. ಕೃದಂತಾರ್ಥಪ್ರಕರಣವು (4 02) ಇದನ್ನು ವಿಶದಪಡಿಸುವುದು.

5ನೆಯದನ್ನು ಪುಲ್ಲಿಂಗವಾಗಿಯೇ ಸದಾ ಕೊಡಲಾಗಿದೆ –ಪ್ರಥಮೈಕರೂಪದಲ್ಲಿ ಇವುಗಳ ಸ್ತ್ರೀರೂಪ ನಪುಂಸಕರೂಪಗಳನ್ನು ಪಡೆಯುವುದನ್ನು ಮುಂದೆ ತಿಳಿಸಿದೆ.

6–7ನೆಯದರಲ್ಲಿ ಪರಸ್ಮೈಧಾತುಗಳ ಪುಲ್ಲಿಂಗ ಪ್ರಥಮೈಕವಚನವು ಇಲ್ಲಿ ಲಭ್ಯ. ಮೇಲೆ ಹೇಳಿದ ಮಾತು ಇಲ್ಲಿಗೂ ಅನ್ವಯಿಸುವುದು.

6–7ರಲ್ಲಿ ಆತ್ಮನೇಧಾತುಗಳ ರೂಪಗಳು ಪುಲ್ಲಿಂಗರೂಪದಲ್ಲಿ ಪ್ರಥಮೈಕವಚನದಲ್ಲಿ ತೋರಿಸಿರುವುವು. ಸ್ತ್ರೀರೂಪವು ಆಕಾರಾಂತ. ನಪುಂಸಕ ರೂಪವು ಮತ್ತೆ ಅಕಾರಾಂತ–ಹಿಂದೆ ಸೂಚಿಸಿದಂತೆ.

ಸ್ತ್ರೀರೂಪಪ್ರಾಪ್ತಿ

ಇದು ಸಮಸ್ಯೆಯಾಗುವುದು 5ನೆಯದರಲ್ಲಿ ಮತ್ತು ಪರಸ್ಮೈಪದಿ ಧಾತುಗಳಲ್ಲಿನ 6 ಮತ್ತು 7ನೇ ರೂಪಗಳಲ್ಲಿ ಮಾತ್ರ.(ಮಿಕ್ಕೆಡೆ ಆಕಾರಾಂತ ವಾದರಾಯಿತು).

ಈ ಮೂರೂ ಸಂದರ್ಭಗಳಲ್ಲೂ ಸ್ತ್ರೀರೂಪವು ಈಕಾರಾಂತವೇ ಆಗುತ್ತದೆ.

ನುವಾಗಮ

ಆದರೆ ಈ ಈಕಾರವು ಸೇರುವ ಮುನ್ನ ನ ಕಾರವನ್ನು ('ನ್' ಎಂಬ ಧ್ವನಿ; ಪಾರಿಭಾಷಿಕವಾಗಿ 'ನುಮ್') ಸೇರಿಸುವ ಪ್ರಸಂಗವು ಕೆಲಧಾತುಗಳಿಗೆ ಅನ್ವಯಿಸುತ್ತದೆ, ಕೆಲವೊಮ್ಮೆ ಅನ್ವಯಿಸದು. ಮತ್ತೆ ಕೆಲವೊಮ್ಮೆ ಇದು ವಿಕಲ್ಪ.

ಈ ಬಗ್ಗೆ ಇರುವ ವ್ಯಾಕರಣ ನಿಯಮಗಳನ್ನು ಇಲ್ಲಿ ಹೇಳಹೋಗದೆ (ಇದಕ್ಕೆ ನೋ. 4.05) ನಮ್ಮ ಪುಸ್ತಕದಲ್ಲಿ ಅವುಗಳನ್ನು ಪಡೆಯುವ ಕ್ರಮವನ್ನು ಇಲ್ಲಿ ಹೇಳುತ್ತೇವೆ.

ಎಲ್ಲಿ ಕಂಸದೊಳಗೆ ' ಸ್ತ್ರೀ' ಎಂದಿರುತ್ತದೆಯೋ ಅಲ್ಲಿ ನುಮಾಗಮವಿದೆಯೆಂದೂ, ಎಲ್ಲಿ ' ಶೀ' ಎಂದು ಮಾತ್ರವಿರುತ್ತದೋ ಅಲ್ಲಿ ಅದಿಲ್ಲವೆಂದೂ ತಿಳಿಯತಕ್ಕದ್ದು.

ನಾವು ಈ ಒಂದೆಯೇ ಹೇಳಿರುವಂತೆ ವಿದ್ವಾಂಸರೂ ಕೆಲವೊಮ್ಮೆ ಮುಗ್ಗರಿಸುವ ಜಾಗವಿದಾದ್ದರಿಂದ ಈ ಬಗ್ಗೆ ಎಚ್ಚರಕ್ಕೋಸ್ಕರ ಒಂದೆರಡು ಉದಾ.

ಗಚ್ಛನ್ (-ಸ್ತ್ರೀ) ಎಂಬಲ್ಲಿ ಗಚ್ಛನ್ (ಪು); ಗಚ್ಛನ್ತೀ (ಸ್ತ್ರೀ);
ಗಚ್ಛತ್ (ನ) (ನುಮ್ ಇದೆ).

ತನ್ವನ್ (-ಶೀ) ಎಂಬಲ್ಲಿ ತನ್ವನ್ (ಪು); ತನ್ವತೀ (ಸ್ತ್ರೀ);
ತನ್ವತ್ (ನ) (ನುಮ್ ಇಲ್ಲ)

ತುದನ್ (-ಸ್ತ್ರೀ) (-ಶೀ) ಎಂಬಲ್ಲಿ ತುದನ್ (ಪು); ತುದಂತೀ (ಸ್ತ್ರೀ)
ತುದತೀ (ಸ್ತ್ರೀ) ತುದತ್ (ನ) (ನುಮ್ ವಿಕಲ್ಪ)

ದದತ್ (-ಶೀ) ಎಂಬಲ್ಲಿ ದದತ್ (ಪು); ದದತೀ (ಸ್ತ್ರೀ) ದದತ್ (ನ)
(ನುಮ್ ಇಲ್ಲ)

ಇಲ್ಲಿ ನಾವು ಪು. ಸ್ತ್ರೀ. ನ. ಎಂದು ಕಂಸದಲ್ಲಿ ತೋರಿಸುವುದರ (ಹಿಂದಿರುವ) ರೂಪಗಳೆಲ್ಲ ಪ್ರಥಮಾ ವಿಭಕ್ತಿ-ಏಕವಚನದ ರೂಪಗಳು. ಇವು ಮೂರೂ ಯಾವ ಅಂತದ ಶಬ್ದಗಳೆಂದರೆ, ತಕಾರಾಂತ ಶಬ್ದಗಳೇ.

[ತನ್ವನ್ (-ಶೀ) ಎಂದಿರುವಲ್ಲಿ ಸ್ತ್ರೀರೂಪವನ್ನು ತನ್ವನ್ತೀ ಎಂದು ಮಾತ್ರ ಓದಿಕೊಳ್ಳಲಾಗದೆಂದು ಈ ಮೂಲಕ ಮತ್ತೆ ಜ್ಞಾಪಿಸುತ್ತೇವೆ.]

ಶಬ್ದಗಳನ್ನು ನಡೆಸುವುದು *

ನಾವು ತೆಗೆದುಕೊಂಡಿರುವ ಕೃದಂತಗಳಲ್ಲಿ ಮೊದಲನೆಯ ಏಳಕ್ಕೂ ಮೂರು ಲಿಂಗಗಳಲ್ಲೂ ರೂಪಗಳಿರುತ್ತವೆ. ಪ್ರತಿಯೊಂದಕ್ಕೂ ಎಂಟು ವಿಭಕ್ತಿ (ಸಂಬೋಧನ ಪ್ರಥಮಾ ವಿಭಕ್ತಿಯನ್ನೂ ಗಣಿಸಿ) ಹಾಗೂ ಮೂರು ವಚನಗಳಲ್ಲಿ ರೂಪಗಳಿರುತ್ತವೆ.

ಇವುಗಳಲ್ಲಿ ಮೊದಲು **ಅಜಂತ** ಶಬ್ದಗಳು—ಇವೆಂದರೆ (೧) ಪುಲ್ಲಿಂಗದಲ್ಲಿ ಅಕಾರಾಂತ (೨) ಸ್ತ್ರೀ ಲಿಂಗದಲ್ಲಿ (i) ಆಕಾರಾಂತ ಮತ್ತು (ii) ಈ ಕಾರಾಂತ ಮತ್ತು (೩) ನಪುಂಸಕ ಲಿಂಗದಲ್ಲಿ ಅಕಾರಾಂತ ಶಬ್ದಗಳು. ಈ ನಾಲ್ಕೂ ಸರಳವೆಂದು ಈ ಪುಸ್ತಕದಲ್ಲಿ ಬಿಡಲಾಗಿದೆ.

ಹಲಂತ ಶಬ್ದಗಳು : ಇಲ್ಲಿ ಬರುವುದು ತಕಾರಾಂತ ಶಬ್ದಗಳು ಮಾತ್ರ. (ನಾವು ಕೊಟ್ಟಿರುವುದು ಪ್ರ. ೧. ೧. ರೂಪಗಳನ್ನೇ ಎಂಬುದನ್ನು ನೆನಪಿನಲ್ಲಿಡಬೇಕು) ಇವೂ ಪುಲ್ಲಿಂಗ, ನಪುಂಸಕ ಲಿಂಗಗಳಲ್ಲಿ ಮಾತ್ರ.

ತಕಾರಾಂತ ಪುಲ್ಲಿಂಗ ಶಬ್ದಗಳು ನಾಲ್ಕು ಬಗೆಯಾಗಿವೆ. ಇಲ್ಲಿ ನಾಲ್ಕೂ ಅನ್ವಯಿಸುವುದಿಲ್ಲವಾದರೂ ಮೂರೂ ಬಗೆಯನ್ನೂ (4.0142) ಕೊಟ್ಟಿದೆ. ಪರಸ್ಪರ ಸಾಮ್ಯ-ವೈಷಮ್ಯಗಳ ಅರಿವು ಇದರಿಂದ ಸ್ಪಷ್ಟವಾಗುತ್ತದಷ್ಟೆ, ಅಂತೆಯೇ ನಪುಂಸಕಲಿಂಗದಲ್ಲಿ ನಾಲ್ಕೂ ಬಗೆಯನ್ನೂ ಕೊಟ್ಟಿದೆ. (4.0144)

ಈ ಮೂರರ ಗುಂಪು ಹಾಗೂ ನಾಲ್ಕರ ಗುಂಪುಗಳಲ್ಲಿ ಶಬ್ದಶಬ್ದಕ್ಕೆ ಭೇದವನ್ನು ಮನದಟ್ಟು ಮಾಡಲು ಹಲವು ಟಿಪ್ಪಣಿಗಳನ್ನೂ ಅಲ್ಲೇ (4.015) ಕೊಟ್ಟಿದೆ.

ಭ್ರಮನಿವಾರಣೆ:- ಒಂದು ರೂಪದಂತೆ ಮತ್ತೊಂದು ರೂಪವಿದ್ದಾಗ ಭ್ರಮಕ್ಕೆ ಅವಕಾಶವಾಗುವುದುಂಟು. ನಾವು ಕೊಟ್ಟಿರುವ ರೂಪಗಳು ಪ್ರ.೧.೧ ರೂಪಗಳೆಂದು ಈ ಮೊದಲೇ ಹೇಳಿದೆವಷ್ಟೆ. ಇವೂ ತಕಾರಾಂತ ಇಲ್ಲವೇ ನಕಾರಾಂತವಾಗಿ ಮಾತ್ರವೇ ಇರುವುವಷ್ಟೆ. ಆದ್ದರಿಂದ ಎಲ್ಲ ಹಲಂತ ಶಬ್ದಗಳಲ್ಲಿ ಎಲ್ಲೆಲ್ಲಿ ೧.೧ರಲ್ಲಿ ತಕಾರಾಂತ—ನಕಾರಾಂತ ರೂಪಗಳು

* § 4.01 ನ್ನು ಪೂರ್ಣವಾಗಿ ನೋಡಿ.

ಬರುವುವೋ ಅಂತಹ ಸಾಧಾರಣ-ವಿಶೇಷ ಶಬ್ದಗಳೆರಡನ್ನೂ ದಿಙ್ಮಾತ್ರ ಸೂಚನೆಯಾಗಿ ಅಲ್ಲೇ (4.016) ಕೊಟ್ಟಿದೆ.

ಅಧಿಕರೂಪಗಳು

ಸರಳ ಭಾಷೆಯ ಬಳಕೆಗಾಗಿ ಕೆಲವೇ ಕೆಲವು ರೂಪಗಳನ್ನು ಸುಲಭವಾದ ಕೆಲವೇ ಅರ್ಥಗಳಲ್ಲಿ ಪ್ರಚುರಪಡಿಸುವುದು ಅಯುಕ್ತವಲ್ಲವಾದರೂ ಅಧಿಕರೂಪಗಳು ಕಂಡಾಗ ಅವನ್ನು ಗುರುತಿಸುವುದು, ಅವನ್ನು ಅರಿತು ಬಳಸುವುದು-ಇವೂ ಭಾಷಾಧ್ಯಯನದ ಆವಶ್ಯಕ ಅಂಗವೆಂದೇ ಎನಿಸುತ್ತವೆ.

ಎಂತಲೇ ನಾವು ಅಧಿಕರೂಪಗಳು ಎಲ್ಲೆಲ್ಲಿ ಬರುವುವೋ ಅಲ್ಲೆಲ್ಲ ಅವನ್ನು ಅವಶ್ಯವಾಗಿ ಕೊಡಲೆತ್ನಿಸಿದ್ದೇವೆ. ಅಧಿಕರೂಪವನ್ನು ತೋರಿಸಲು ಅಂತಹ ರೂಪಗಳ ಮಧ್ಯೆ ಸಣ್ಣ ಗೀಟನ್ನು ತೋರಿಸಿದೆ.

ಅಧಿಕರೂಪಗಳು ಅಧಿಕವಾಗಿ ಎಲ್ಲಿ ಬರುತ್ತವೆ ? ಉಭಯಪದಿ ಧಾತುಗಳಲ್ಲಿ 6 ಮತ್ತು 7ರಲ್ಲಿ ಎರಡೆರಡು ರೂಪಗಳು ಬರುವುದು ಸ್ಪಷ್ಟ.

ಅಂತೆಯೇ ವೇಟ್ಕ ಧಾತುಗಳಿಗೆ ಇಟ್ ಸಹಿತವಾದ ಮತ್ತು-ರಹಿತವಾದ ರೂಪಗಳು ಬರುವುವು. ಗುಣ/ವೃದ್ಧಿಕಾರ್ಯಗಳು ವಿಕಲ್ಪವಾಗಿ ಬಂದಲ್ಲಿ ರೂಪಬಾಹುಲ್ಯ. ಉದಾ. ಮೃಜ್[2]; ನುಮ್ ವಿಕಲ್ಪವಾಗಿ ಬಂದರೆ ಸ್ತ್ರೀರೂಪದಲ್ಲಿ ಎರಡೆರಡು ರೂಪ-ಇತ್ಯಾದಿಗಳೂ ಬರತಕ್ಕವೇ. ಒಂದೇ ಧಾತುವು ಬೇರೆ ಬೇರೆ ಗಣದಲ್ಲಿದ್ದಾಗ ರೂಪಬಹುಲತೆಯ ಅವಕಾಶವನ್ನು ಬೇರೆಯಾಗಿ ಹೇಳಬೇಕಿಲ್ಲವಷ್ಟೆ.

ಆದರೆ ವ್ಯಾಕರಣದ ವಿಶೇಷನಿಯಮಗಳಿಂದಾಗಿ ಅಧಿಕರೂಪಗಳು ಅನಿರೀಕ್ಷಿತವಾಗಿ ಬರುವುದೂ ಉಂಟು. ಉದಾ. ಕ್ಷುಭ್ ಧಾತುವು ಸೇಟ್ ಮಾತ್ರವಾದರೂ ಕ್ಷುಭಿತ-ಕ್ಷುಬ್ಧವೆಂದು ರೂಪದ್ವಯವಿದೆ. ಹೀಗೆಯೇ ನಿಷ್ಠಾನತ್ವವು (4-5ರೂಪಗಳಲ್ಲಿ ತಕಾರದೆಡೆಯಲ್ಲಿ ನಕಾರ ಬರುವಿಕೆ) ವಿಕಲ್ಪವಾಗಿ ಬರುವುದು. (ಉದಾ. ತ್ರೈ-ತ್ರಾತ ಮತ್ತು ತ್ರಾಣ) ಸಂಧಿನಿಮಿತ್ತವಾದ ರೂಪಬಾಹುಳ್ಯವೂ ಸಾಮಾನ್ಯ (ಉದಾ. ನೀ-ವಿನೀಯ-ನಿರ್ಣೀಯ)

ಅಂತೆಯೇ ಮೂರನೆಯ 'ಯ' ಪ್ರತ್ಯಯವೆಂದಾಗ ಮೂರು ಪ್ರತ್ಯಯ (ಣ್ಯತ್-ಕ್ಯಪ್-ಯತ್)ಗಳು ಗೃಹೀತವಾಗುವುದರಿಂದ ಅಲ್ಲಿಯೂ ರೂಪ ಬಹುತ್ವಕ್ಕೆ ಎಡೆಯಿರುವುದನ್ನು ಹಲವೆಡೆ ನೋಡಬಹುದು. ನೋ. 4.09

ಇದಲ್ಲದೆ ಧಾತುವಿನ 'ಪದ' (ಪರಸ್ಮೈ ಇ.) ವನ್ನೇ ಬದಲಾಯಿಸಿ ಬಿಡುವ ಉಪಸರ್ಗಗಳು ಬಂದಾಗ ರೂಪಬಹುಲತೆಯುಂಟು. ಕೆಲವೆಡೆ ಗಳನ್ನು ಮಾತ್ರ ಬಿಟ್ಟು ಸಾಧಾರಣವಾಗಿ ನಾವು ಉಪಸರ್ಗಯೋಗವನ್ನು ಈ ಸಂಪುಟದಲ್ಲಿ ಗಮನಿಸುತ್ತಿಲ್ಲ. ಹಿಂದೆ ಸೂಚಿಸಿದಂತೆ ವಿಶೇಷಾರ್ಥರೂಪ ದಾಯಕವಾದ ಉಪಸರ್ಗಯೋಗಗಳನ್ನೆಲ್ಲ ಮುಂದೊಂದು ಗ್ರಂಥದಲ್ಲಿ ಪರಿಶೀಲಿಸುವ ಉದ್ದೇಶವಿದೆ.

ವಿಶೇಷಾರ್ಥಕ ರೂಪಗಳು

ಉಪಸರ್ಗಗಳ ಸೇರ್ಪಡೆಯಿಂದ ಬೇರೆ ಬೇರೆಯಾದ ಅನೇಕ ಅರ್ಥ ಗಳು ಹೊಮ್ಮುವುವೆಂದೂ, ಅವನ್ನು ತೋರಿಸುವುದು ಈ ಕೃತಿಯ ಉದ್ದೇಶ ವಲ್ಲವೆಂದೂ ಈ ಮೊದಲೇ ತಿಳಿಸಿದೆಯಷ್ಟೆ*. ಆದರೆ ಉಪಸರ್ಗನಿಮಿತ್ತಕ ವಾಗಿ ರೂಪದಲ್ಲಿ ಬದಲಾವಣೆಯಾಗುವುದಿದ್ದಲ್ಲಿ ಅದನ್ನು ತೋರಿಸಲು ಹಲವೆಡೆ ಯತ್ನಿಸಿದೆ. ಅಂತೆಯೇ ವಿಶೇಷಸಂಧಿಕಾರ್ಯಗಳೂ ಅಲ್ಲಿರುವು ದಾದರೆ ಅದನ್ನೂ ತೋರಿಸಲೆತ್ನಿಸಿದೆ. ಉದಾ. ನೋ. ನೀ ಧಾತು.

ಎಷ್ಟೋ ವೇಳೆ ಒಂದೇ ಧಾತುವಿಗೆ ಕೆಲವು ನಿರ್ದಿಷ್ಟಪ್ರತ್ಯಯಗಳ ಸೇರ್ಪಡೆಯಿಂದ ಅಧಿಕರೂಪಗಳಾಗಿ, ಆ ಅಧಿಕರೂಪಗಳಲ್ಲಿ ಅರ್ಥವಿಭಾಗ ವಿರುವುದು ಕಂಡುಬರುತ್ತದೆ.

---

* ಅವುಗಳನ್ನು ಶೀಘ್ರದಲ್ಲಿಯೇ ಪ್ರಕಟವಾಗಲಿರುವ ನಮ್ಮ ಧಾತ್ವರ್ಥಕೋಶದಿಂದ ಅರಿಯಬಹುದು. ಆಗ ಉಂಟಾಗುವ ಪರಸ್ಮೈ-ಆತ್ಮನೇ ವ್ಯತ್ಯಾಸಗಳು ಕೃದಂತಗಳಿಗೂ ಅನ್ವಯಿಸುತ್ತವೆ. (ಇಂತಹ ಸಂದರ್ಭಗಳಲ್ಲಿ . ಅರ್ಥಭೇದನಂತೆ ರೂಪಭೇದವೂ ಸಂಭವಿಸುತ್ತದೆ) ಹೀಗೆ ಇವುಗಳನ್ನು, ಆ ಪುಸ್ತಕವನ್ನೂ ಈ ಪುಸ್ತಕವನ್ನೂ ಆಧರಿಸಿ ಪಡೆಯಲಾಸ್ಪದ ವಿದೆ.

ಉದಾ: ಅಂಚ್ ಧಾತುವಿನ 4ನೇ ರೂಪದಲ್ಲಿ ಅಂಚಿತ-ಅಕ್ತ ಎಂಬ ರೂಪಗಳು. ಮೊದಲನೆಯದಕ್ಕೆ ಪೂಜಾರ್ಥ, ಎರಡನೆಯದಕ್ಕೆ ಗತ್ಯರ್ಥ.

ಕೆಲವೊಮ್ಮೆ ಒಂದೇ ರೂಪಕ್ಕೇ ಸಾಧಾರಣಾರ್ಥದ ಜೊತೆಯಲ್ಲಿ ವಿಶೇಷಾರ್ಥವೂ ತೋರುವುದುಂಟು. 'ಭುಜ್'-ಭುಕ್ತಂ=ತಿನ್ನಲ್ಪಟ್ಟದ್ದು; ಹಿಂದ ಜಾಗ.

ಯಪ್ರತ್ಯಯ(3ನೆಯದು)ದಲ್ಲಿ *ಅರ್ಥಭೇದದಿಂದಾಗಿ ಣ್ಯತ್, ಕ್ಯಪ್, ಯತ್‌ಗಳಲ್ಲೊಂದು ನಿರ್ದಿಷ್ಟವಾಗಿ ಧಾತುವಿಗೆ ಸೇರಿ ರೂಪ ಮತ್ತು ಅರ್ಥಗಳು ಬೇರೆಯಾಗಿರುವುದುಂಟು.

ಉದಾ: ವದ್-ವದ್ಯ-ಉದ್ಯ.

ಇಂತಹ ಸಂದರ್ಭಗಳಲ್ಲಿ ವಿಶೇಷಾರ್ಥವುಳ್ಳ ರೂಪಗಳನ್ನು ಕಂಸಗಳೊಳಗೆ ಕೊಟ್ಟಿದೆ. ಅವುಗಳ ಅರ್ಥವಿಶೇಷ ಅಥವಾ ಇನ್ನಾವುದೇ ವಿಚಾರವನ್ನು ಕೃದಂತಗಳ ಬಳಕೆಯ ಪುಸ್ತಕದಲ್ಲಿ ನಾವು ನಿರೂಪಿಸಲಿದ್ದೇವೆ ಉದಾ: 'ನೀ' ಧಾತುವಿನ 3ನೆಯ ರೂಪಗಳನ್ನು ಕುರಿತು ಅಲ್ಲಿ ವಿವರಣೆ ದೊರೆಯಲಿದೆ.

(b) ಮುದ್ರಣ:ವಿಧಿ-ವಿಧಾನ

ಅಕ್ಷರಗಳು—ಕೋಶಭಾಗದಲ್ಲಿ ಧಾತುಗಳನ್ನು ಮಾತ್ರ ದಪ್ಪಕ್ಷರಗಳಲ್ಲಿ ಮುದ್ರಿಸಿದೆ. ರೂಪಗಳನ್ನು ಸಾಧಾರಣವಾಗಿ ಮುದ್ರಿಸಿದೆ.

ಸಂಖ್ಯೆಗಳು—ಧಾತುಸಂಖ್ಯೆಯನ್ನು ದಪ್ಪಕ್ಷರಗಳಲ್ಲಿ ಮುದ್ರಿಸಿದೆ. ರೂಪಗಳ ಸಂಖ್ಯೆಯನ್ನು ಸಾಧಾರಣವಾಗಿ ಮುದ್ರಿಸಿದೆ.

ಒಂದರ ಪಕ್ಕ ಮತ್ತೊಂದು

1 ರಿಂದ 10 ರೂಪಗಳನ್ನು ಒಂದರಕೆಳಗೊಂದು (ನಮ್ಮ ಧಾತುರೂಪ ಕೋಶ: ಸವಿವರಣದಲ್ಲಿಯಂತೆ) ಕೊಡುವುದರ ಬದಲು ಒಂದರ ಪಕ್ಕ

ಒಂದನ್ನು (run-on fashion) ಕೊಟ್ಟಿದೆ. ಇದರಿಂದ ಸಾಕಷ್ಟು ಸ್ಥಳಾವಕಾಶವುಳಿಯುತ್ತದಷ್ಟೆ. ಅದಕ್ಕಿಂತಲೂ ಹೆಚ್ಚಾಗಿ ನಮ್ಮ ಧಾತು ರೂಪಕೋಶದಲ್ಲಿ ಪ್ರತಿರೂಪದ ಹಿಂದೆ (ಕ್ರಮಸಂಖ್ಯೆ)ಯೂ ಮುಂದೆ (ಮಾದರಿ ಸಂಖ್ಯೆ)ಯೂ ಅನಿವಾರ್ಯವಾಗಿ ಸಂಖ್ಯೆಗಳಿದ್ದುದರಿಂದ ಅಲ್ಲಿ ವೈಶದ್ಯಕ್ಕಾಗಿ ಒಂದರ ಕೆಳಗೊಂದನ್ನು ಮುದ್ರಿಸುವುದಾಯಿತು; ಇಲ್ಲಿ ಅದು ಅನವಶ್ಯವೆನಿಸಿತು. (ಒಂದೇ ಸಂಖ್ಯೆಯೊಳಗೆ) ರೂಪಗಳ ಮಧ್ಯೆ ಸಣ್ಣಗೀಟಿದ್ದರೆ (hyphen) ಆಗ ಅಲ್ಲಿ ರೂಪಬಾಹುಲ್ಯವಿದೆಯೆಂದು ತಿಳಿಯತಕ್ಕದ್ದು. ಮತ್ತು ಈ ಬಾಹುಲ್ಯವು ನಾನಾ ಕಾರಣಗಳಿಂದಾಗಿರಬಹುದಾಗಿದೆ. 3ನೇ (ಸಂಖ್ಯೆಯಲ್ಲಿಯ) ರೂಪದಲ್ಲಿ ಬಹುಬಾರಿ ರೂಪ ಬಹುಲತೆಯು ತೋರಿರಲು ಕಾರಣ ಅಲ್ಲಿಯ "ಯ" ಹಲವು ಪ್ರತ್ಯಯ (ಣ್ಯತ್–ಯತ್–ಕ್ಯಪ್)ಗಳ ಸಾರರೂಪವಾಗಿರುವುದು. (ಇತ್ ಭೇದದಿಂದಾಗಿ ಗುಣ–ವೃದ್ಧಿ ಮೊದಲಾದ ವೈಯಾಕರಣ ಪ್ರಕ್ರಿಯಾ ಭೇದಗಳೂ ಉಂಟಾಗಿ ಹೀಗೆ ರೂಪಭೇದವಾಗಿರುವುದುಂಟು).

ಇನ್ನಿತರ ಕಡೆಗಳಲ್ಲಿ ರೂಪವೈಚಿತ್ರ್ಯವೋ ಬಾಹುಲ್ಯವೋ, ಉಪಸರ್ಗ ನಿಮಿತ್ತಕವಾಗಿಯೋ ಸಂಧಿಕಾರ್ಯವೈಶಿಷ್ಟ್ಯದಿಂದಲೋ ಭಿನ್ನಾರ್ಥಹೇತುಕವಾಗಿಯೋ ಇರಬಹುದು.

ಕಂಸ

ಹೀಗೆ ಅರ್ಥಭೇದ ತೋರಿದೆಡೆಗಳಲ್ಲಿ ಕಂಸಗಳನ್ನು ಬಳಸಿದೆ. ಇಂತಹ ಸಂದರ್ಭಗಳಲ್ಲಿ ಕಂಸದೊಳಗಿರುವ ರೂಪದಲ್ಲಿ ಪ್ರಾಯಶಃ ಏನೋ ವಿಶೇಷವಿದೆಯೆಂದೂ, ಅದನ್ನು ನಿರ್ದಿಷ್ಟಾರ್ಥದಲ್ಲಿಯೇ ಬಳಸಬೇಕಾದ ಸನ್ನಿವೇಶವಿದ್ದೀತೆಂದೂ ಅರಿತು, ಅದನ್ನು ಕಂಸಬಹಿರ್ಭೂತವಾದ ರೂಪದ ಜೊತೆಯಲ್ಲಿ / ಸಮಾನಾರ್ಥಕವಾಗಿ ಬಳಸುವುದು ಸರಿಯಾಗಲಾರದೆಂದು ತಿಳಿಯತಕ್ಕದ್ದು *

* ಈ ಮೊದಲೇ ತಿಳಿಸಿರುವಂತೆ ಅಂತಹ ರೂಪಗಳ ಅರ್ಥವಿಶೇಷಗಳನ್ನು ನಮ್ಮ "ಕೃದಂತಗಳ ಅರ್ಥ ಮತ್ತು ಬಳಕೆ" ಎಂಬ ಕೃತಿಯಿಂದ ಅರಿಯಬಹುದು. ಇದು ಶೀಘ್ರದಲ್ಲೇ ಪ್ರಕಟವಾಗಲಿದೆ.

ಕೆಲವೊಮ್ಮೆ ಕಂಸಗಳನ್ನೇ (ಒಳಗೆ ಯಾವ ಪದವೂ ಇಲ್ಲದೆಯೆ) ಬಳಸಿರುವುದು ಸ್ವಲ್ಪ ವಿಚಿತ್ರವೆಂದೆನಿಸಬಹುದು. ಆದರೆ ಅದನ್ನೂ ಸೋದ್ದೇಶವಾಗಿಯೇ ಮಾಡಿದೆ. ಯಾವಾಗ ಒಂದೇ ರೂಪವು ಸಾಧಾರಣವಾದ ಅರ್ಥದಲ್ಲಿ ಬಳಕೆಯಾಗುವಂತೆ ವಿಶೇಷಾರ್ಥದಲ್ಲಿಯೂ ಬಳಕೆಯಾಗುತ್ತದೋ ಅಂತಹ ಸಂದರ್ಭದಲ್ಲಿ ಇದನ್ನು ಬಳಸಲಾಗಿದೆ. ಉದಾ. ಭೀ-ಭೀತ:. ಇಲ್ಲಿ ಕರ್ಮಾರ್ಥವಿರುವುದೇ ಅಲ್ಲದೆ, ಕರ್ತ್ರರ್ಥವು ಸಹ ಇದೆ. (ಕೆಲವೊಮ್ಮೆ ಈ ವಿಷಯದಲ್ಲಿ ಕಿಂಚಿತ್ತಾದರೂ ಭ್ರಾಂತಿಯಾಗದಿರಲೆಂದು ಭಿನ್ನಲಿಂಗಗಳಲ್ಲಿ ರೂಪಗಳನ್ನು ಕೊಟ್ಟು ಒಂದನ್ನು ಮಾತ್ರ ಕಂಸದಲ್ಲಿ ಕೊಟ್ಟಿದೆ. ಇದಕ್ಕಿಂತಲೂ ಎಷ್ಟೋ ವೇಳೆ ವಿಶಿಷ್ಟಲಿಂಗದಲ್ಲಿಯೇ ವಿಶೇಷಾರ್ಥವೆನ್ನುವ ಪ್ರಸಂಗಗಳೂ ಇರುವುವು. ಅಂತಹ ಸಂದರ್ಭಕ್ಕೆ ಇದು ಚೆನ್ನಾಗಿ ಅನ್ವಯಿಸುತ್ತದೆ. ಉದಾ. ಶೀ-ಶಯಿತ: (ಶಯಿತಂ)

ಧಾತುನಿರ್ದೇಶಸಮನಂತರವೇ (immediately after) ಇರುವ ಕಂಸದೊಳಗೆ ಧಾತುವಿನ ಗಣ-ಪದ-ಇತ್ಯಾದಿ ವಿವರಗಳಿವೆ.

ಅಂತೆಯೇ ಸ್ತ್ರೀರೂಪದ ಕೊನೆಯಕ್ಷರವನ್ನು ತೋರಿಸಲೂ (ಸಣ್ಣ ಗೀಟಿನ ಜೊತೆ) ಕಂಸವನ್ನು ಬಳಸಲಾಗಿದೆ.

ಫೋಲಿಯೋ (Folio)

ನಮ್ಮ ಹಿಂದಿನ ಕೃತಿಯಲ್ಲಿ ಮಾಡಿದ್ದಂತೆಯೇ-ಕೋಶ (dictionary) ಗಳಲ್ಲಿ ಹೇಗೋ ಹಾಗೆ-ಕೋಶಭಾಗದಲ್ಲಿ ಪ್ರತಿಪುಟದಲ್ಲಿಯೂ ಆಯಾ ಪುಟದಲ್ಲಿನ ಧಾತುಗಳ ವ್ಯಾಪ್ತಿಯನ್ನು (ಪುಟ ಸಂಖ್ಯೆಯನ್ನು ಸಾಧಾರಣವಾಗಿ ಕೊಡುವ ಎಡೆಯಲ್ಲಿ) ಕೊಟ್ಟಿದೆ. ಪುಟಸಂಖ್ಯೆಯನ್ನು ಪ್ರತಿಪುಟದ ಅಡಿಯಲ್ಲಿ ಮಧ್ಯದಲ್ಲಿರಿಸಿದೆ. ಧಾತುಸಂಖ್ಯಾವ್ಯಾಪ್ತಿ(range) ಯನ್ನು ಅಂಚಿನಲ್ಲಿ ತೋರಿಸಿದೆ. ಧಾತ್ವನ್ವೇಷಣವು ಸುಗಮವಾಗಲೆಂಬುದೇ ಇದರ ಸ್ಪಷ್ಟೋದ್ದೇಶ.

ಕಾಗುಣಿತ

ಮುದ್ರಣ ಸೌಕರ್ಯಕ್ಕಾಗಿ ಕೆಲವೆಡೆ ಕಾಗುಣಿತವನ್ನು ಸ್ವಲ್ಪ ಬದಲಾಯಿಸಿದೆ. ಆದ್ದರಿಂದಲೇ "ಕರ್ತುಃಮ್" ಎಂದು ಬರೆಯುವ ಬದಲು "ಕರ್ತುಂ" ಎಂದೇ ಬರೆದಿದೆ. ಇದನ್ನು ದೊಡ್ಡ ತಪ್ಪೆಂದು ವಿಮರ್ಶಕರು ಭಾವಿಸದಿರಲಿ.

ಸಂಧಿ

ಅಂತೆಯೇ ಅನುನಾಸಿಕ ಸಂಧಿಯಾಗುವೆಡೆಗಳಲ್ಲಿ, ತದ್ವರ್ಗೀಯ ವ್ಯಂಜನವನ್ನುಪಯೋಗಿಸಬೇಕಾದೆಡೆಯಲ್ಲೂ (ಹೋ.. ಸಂಹಿತೈಕಪದೇ ನಿತ್ಯಾ..) ಅದನ್ನೇ ಮಾಡದೇ ಬಿಟ್ಟಿದೆ. ಉದಾ. 'ಕಾಙ್ಕ್ಷನ್' ಬದಲಾಗಿ "ಕಾಂಕ್ಷನ್" ಎಂದು ಮುದ್ರಿಸಿದೆ. ಅಂತೆಯೇ 'ಅಞ್ಚಿತುಮ್' ಬದಲು ಅಂಚಿತುಂ. "ದಣ್ಡನೀಯಂ' ಬದಲು ದಂಡನೀಯಂ", "ನನ್ದನ್" ಬದಲು ನಂದನ್; "ಜೃಮ್ಭಣೀಯಂ" ಬದಲು "ಜೃಂಭಣೀಯಂ" ಇ.

ಸ್ತ್ರೀರೂಪ ನಿರ್ದೇಶ

ಆದರೆ ಕಂಸದೊಳಗೆ ಸ್ತ್ರೀರೂಪಾಂತವನ್ನು ನಿರ್ದೇಶಿಸುವಾಗ ಮಾತ್ರ, ನುಮಾಗಮವು ಬಂದಿರುವುದನ್ನು ಒಡೆದು ತೋರುವಂತೆ ಮಾಡುವುದಕ್ಕಾಗಿ (–ನ್ತೀ) ಎಂದೇ ತೋರಿಸಿದೆ. ಕೇವಲ (–ತೀ) ಎಂದಿರುವೆಡೆ ನುಮಾಗಮವಿಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

ಈ (–ತೀ)ಅಥವಾ (–ನ್ತೀ) ಎಂಬುದು ಸ್ತ್ರೀ ರೂಪದ ಕೊನೆಯ ಅಕ್ಷರವೆಂದು ಸ್ಪಷ್ಟವಾಗಿ ತಿಳಿಯಬೇಕು. ಉದಾ. "ಗೃಹ್ಣನ್ (–ತೀ)ಎಂದಿರುವಲ್ಲಿ, ಪುಲ್ಲಿಂಗದಲ್ಲಿ "ಗೃಹ್ಣನ್"ಎಂದು ರೂಪವೆಂದೂ, ಸ್ತ್ರೀಲಿಂಗದಲ್ಲಿ "ಗೃಹ್ಣತೀ" ಎಂದು ರೂಪವೆಂದೂ ತಿಳಿಯತಕ್ಕದ್ದು. (ಗೃಹ್ಣನ್ + ತೀ= ಗೃಹ್ಣನ್ತೀ ಎಂದು ಭಾವಿಸಬಾರದೆಂದು ಇಲ್ಲಿ ಮತ್ತೆ ಮತ್ತೆ ಸ್ಪಷ್ಟಪಡಿಸಿದೆ)

ಎಂತಲೇ, ತುದನ್ (-ತೀ) (-ನ್ತೀ) ಎಂಬಲ್ಲಿ ಪುನರುಕ್ತಿಯಿಲ್ಲವಾಗಿ "ತುದತೀ", "ತುದಂತೀ" ಎಂದು ಎರಡು ಸ್ತ್ರೀರೂಪಗಳೆಂದು ತಿಳಿಯ ತಕ್ಕದ್ದು.

(c) "ಸತಾಯಿಸುವಿಕೆ"

ಈ "ಸತಾಯಿಸುವಿಕೆ"ಯಿಂದಾಗುವ ಹಿಂಸೆಯ ಬಗ್ಗೆ ನಮ್ಮ ಧಾತು ರೂಪಕೋಶ: ಸವಿವರಣದಲ್ಲೂ ಈ ಕೃತಿಯ (ಲ್ಲೇ ಮೊದಲ)ಲ್ಲೂ ಸಾಕಷ್ಟು ಹೇಳಿದ್ದೇವೆ. ಆದ್ದರಿಂದ ನಮ್ಮ ಕೃತಿಯಲ್ಲಿ ಮಾತ್ರ ಅದರ "ಗೋಳು" ಇರುವುದಿಲ್ಲವೆಂದು ವಾಚಕರು ನಿರೀಕ್ಷಿಸಿದರೆ ಆಶ್ಚರ್ಯವೇನಿಲ್ಲ ಅಂತೆಯೇ ಎಲ್ಲೂ ನಾವು ಹಾಗೆ ಮಾಡಿಲ್ಲವೆಂದು ಸಂತೋಷದಿಂದ ಹೇಳು ತ್ತೇವೆ. ಆದರೆ—

ಆದರೆ ಒಂದು ಸಂದರ್ಭದಲ್ಲಿ ಮಾತ್ರ ನಾವೂ ಹಾಗೆ ಮಾಡಿರುವು ದುಂಟು. ಅದೆಂದರೆ ಒಂದೇ ಧಾತುವು ಅನೇಕಗಣಗಳಲ್ಲಿ ಪಠಿತವಾಗಿರುವ ಸಂದರ್ಭದಲ್ಲಿ. ನಾವು ಈ ಮೊದಲೇ ಹೇಳಿರುವಂತೆ ಮಿಕ್ಕ ಅನೇಕ ಪುಸ್ತಕ ಗಳಲ್ಲಿರುವಂತೆ ಧಾತುಗಳನ್ನು ಗಣಶ:-ಪದಶ: ನಾವು ನಿರೂಪಿಸಿಲ್ಲವಷ್ಟೆ. ನಾವು ಬಳಸಿರುವುದು ಧಾತುಗಳ ಅಕಾರಾದಿ ಕ್ರಮವನ್ನೇ.

ಹೀಗಾಗಿಯೇ ಭಿನ್ನಗಣಸ್ಥವಾದ/ಭಿನ್ನಪದೀಯವಾದ ಸಮಾನಧಾತು ಗಳೂ ನಮ್ಮಲ್ಲಿ ಒಟ್ಟೊಟ್ಟಿಗೆ ದೊರೆಯುತ್ತದೆ. ಹೀಗಾಗಿ ಇಂತಹ ಸಂದರ್ಭ ಗಳಲ್ಲಿ ಸ್ವಲ್ಪ 'ಅದರಂತೆ' 'ಹಿಂದಿನದರಂತೆ' ಎಂದು ಸೂಚಿಸಿದಲ್ಲಿ ಬಹು ಕಷ್ಟವಾಗದು. ಒಂದೆರಡೇ ಹಿಂದಿನ ಧಾತುಗಳಾದರೂ ಧಾತುಸಂಖ್ಯೆಯನ್ನು ನಾವು ಸೂಚಿಸಿಯೇ ಇದ್ದೇವೆ. ಎಷ್ಟೋ ಪುಟಗಳ ಹಿಂದೆಯೋ, ಬೇರೊಂದು ಸಂಪುಟದಲ್ಲೋ ಹುಡುಕುವ ಪ್ರಮೇಯವು ಇಲ್ಲಿ ಬರದಷ್ಟೆ.

ಮತ್ತು ಹೀಗೆ ಮಾಡುವುದರಿಂದ ಸ್ಥಳವೂ ಸ್ವಲ್ಪ ಉಳಿತಾಯವಾಗು ವುದೇ. ಏಕೆಂದರೆ ಭೂಯಸ್ತ್ವವನ್ನನುಸರಿಸಿ ಹೇಳುವುದಾದರೆ (speaking statistically), ಲಕಾರರೂಪಗಳಲ್ಲಿ ಭಿನ್ನಗಣೀಯ

ಧಾತುಗಳಿಗೆ ಬರುವಷ್ಟು ಭೇದಗಳು ಕೃದಂತ ರೂಪಗಳಲ್ಲಿ ಬರವು. ಏಕೆಂದರೆ ಇಲ್ಲಿಯ ಎಷ್ಟೋ ಕೃದಂತ ಪ್ರತ್ಯಯಗಳ ಸೇರ್ಪಡೆಯು ಧಾತುವಿನ ಗಣಕ್ಕೆ ನೇರಾಗಿ ಸಂಬಂಧಿಸದೇ ನಡೆಯತಕ್ಕವೆಂಬುದು ವ್ಯಾಕರಣಾನುಸಾರವಾದ ವಿಷಯ. ಹೀಗಾಗಿ ಗಣ ಬೇರೆಯಾದರೂ 'ಪದ'ವೊಂದೇ ಆದಲ್ಲಿ ಸಮರೂಪಗಳೂ ಇಲ್ಲದಿಲ್ಲ.

ಆದರೆ ವಸ್ತುಸ್ಥಿತಿಯೆಂದರೆ, ಇರುವ ಹತ್ತು ರೂಪಗಳಲ್ಲಿ ನಾಲ್ಕೈದು ರೂಪಸಾಮ್ಯಗಳನ್ನು ತೋರಿಸಿ ಸ್ಥಳಾವಕಾಶವುಳಿಸುವುದೇ ನಮ್ಮ ಘನೋದ್ದೇಶವಾಗಿಲ್ಲ. ಸ್ಪಷ್ಟತೆಗೋಸ್ಕರವಾಗಿ ಒಂದು ವೇಳೆ ಅಷ್ಟು ಸ್ಥಳವು ಹೆಚ್ಚು ವ್ಯಯವಾದರೂ ಅದು ಕಮನೀಯವೇ ಸರಿ! ಅರ್ಥಾತ್ ನಮ್ಮ ಉದ್ದೇಶವೇ ಬೇರೆಯಾಗಿದೆ.

ಏನೆಂದರೆ ಇಂತಹ ಸಂದರ್ಭಗಳಲ್ಲಿ ರೂಪಗಳಲ್ಲಿ ಸಾಮ್ಯವು ಹೇಗೋ ಹಾಗೆಯೇ ವೈಷಮ್ಯವೂ ಎದ್ದು ಕಾಣಲೆಂಬುದೇ ನಮ್ಮ ಲಕ್ಷ್ಯವಾಗಿದೆ. ಸಾಮ್ಯ–ವೈಷಮ್ಯಗಳೆರಡೂ ಥಟ್ಟನೆ ಸ್ಫುರಿಸಲು ಇದುವೆ ಶ್ರೇಷ್ಠಮಾರ್ಗವಾಗಿದೆ.

ಮತ್ತು ಇಂತಹ ಅನೇಕ ಕಡೆಗಳಲ್ಲಿ ಧಾತುವಿನ ಇಟ್‌ತ್ವವನ್ನನುಸರಿಸಿ ರೂಪಭೇದವಾಗುವುದುಂಟು. ವಿಪರೀತ ಕ್ರಮದಿಂದ (and conversely), ಈ ತೆರನ ರೂಪಭೇದದಿಂದ ಧಾತುವು ಸೇಟ್ಕವೋ, ಅನಿಟ್ಕವೋ ಅಥವಾ ವೇಟ್ಕವೋ ಎಂಬುದನ್ನು ಸಹ ನೆನಪಿನಲ್ಲಿಟ್ಟುಕೊಳ್ಳಲು ಅನುಕೂಲವಾಗುವುದೆಂಬುದನ್ನು ಇಲ್ಲಿ ಹೇಳಬೇಕಾಗಿದೆ. [ಈ ಮಾತನ್ನು ಹೇಳುವಾಗ, ಇದಕ್ಕೆ ಅಪವಾದಭೂತವಾದ-ಸೇಟ್ಕ ಧಾತುವಿಗೂ ವೇಟ್ಕ ಅಥವಾ ಅನಿಟ್ಕದಂತೆ ಮತ್ತು ಏತದ್ವಿರುದ್ಧವಾಗಿ (conversely), ರೂಪಗಳು ಇರುವ ಪ್ರಸಂಗಗಳನ್ನೂ ಮರೆಯಲಾಗದೆಂದೂ ಜ್ಞಾಪಿಸ ಬಯಸುತ್ತೇವೆ. ಅನುಬಂಧದಲ್ಲಿ ಇದಕ್ಕೊಂದೆರಡು ಉದಾ.ಗಳು ದೊರೆಯಬಹುದು]. ಇದಿಷ್ಟು ಈ ಕೃತಿಯ ಕೋಶಭಾಗದ ಕಥೆಯಾಯ್ತು. ಕೋಶ ಪೂರ್ವಭಾಗ, ಕೋಶೋತ್ತರಭಾಗಗಳನ್ನು ಕುರಿತು ಸಂಕ್ಷೇಪವಾಗಿ ಹೇಳಬಹುದು,

(d) ಕೋಶಪೂರ್ವಭಾಗ

ವಿಷಯಸೂಚಿಯನ್ನು ಸಂಕ್ಷಿಪ್ತ-ವಿಸ್ತೃತವೆಂದು ಎರಡು ತೆರನಾಗಿ ಕೊಟ್ಟಿದೆ. ಮೊದಲನೆಯದರಿಂದ ಒಂದು ಸಮಷ್ಟಿದರ್ಶನವೂ, ಎರಡನೆಯದರಿಂದ ವ್ಯಷ್ಟಿದೃಷ್ಟಿಯೂ ಉಂಟಾಗುವುದು. ಇದರ ಉದ್ದೇಶ:

ಕೃದಂತಗಳೆಂದರೇನೆಂದು ತಿಳಿಯಪಡಿಸಲು 'ಸರಳ ಸಂಸ್ಕೃತ' 'Basic Sanskrit'-ಇವುಗಳಿಂದಾರಂಭಿಸಿ 'ಪ್ರೌಢಸಂಸ್ಕೃತ' ದವರೆಗಿನ ಭಾಷಾ-ಹಾಗೂ ವ್ಯಾಕರಣ ವ್ಯಾಪ್ತಿಗಳನ್ನು ಸ್ಥೂಲವಾಗಿ ಚಿತ್ರಿಸಿದೆ. ಎರಡರಲ್ಲೂ ಕೃದಂತ-ರೂಪಗಳ ಪ್ರಾಚುರ್ಯ (abundance) ಮುಂತಾದ ವಿಷಯಗಳನ್ನು ತಿಳಿಸಿದೆ. ಪ್ರಸಂಗತಃ ಬೇಗನೆ ಸಂಸ್ಕೃತವನ್ನು ಕಲಿಯುವ ಬಗೆ ಮತ್ತು ತದಪೇಕ್ಷಯಾ (as against the same) ಗಾಢವಾದ ಕಲಿಕೆಯ ಬಗೆಗಳನ್ನು ಕುರಿತು ಸಂಗ್ರಹವಾಗಿ ಒಂದೆರಡು ಮಾತುಗಳನ್ನು ಹೇಳಿದೆ.

ಆ ಬಳಿಕ ಕೃದಂತ ರೂಪಗಳನ್ನು ಪಡೆಯಲು ರಚಿತವಾದ (ಮತ್ತು ನಮಗೆ ದೊರೆತ) ಎಲ್ಲ ಪ್ರಸಿದ್ಧ ಗ್ರಂಥಗಳನ್ನು ಉಲ್ಲೇಖಿಸಿ ಅವುಗಳಲ್ಲಿಯ ಸೌಕರ್ಯ-ಸೌಲಭ್ಯಗಳನ್ನು ಕುರಿತಾಗಿ ಚಿಂತಿಸಿದೆ. ವಿಶೇಷವಾಗಿ, ಅತ್ಯಂತ ವ್ಯವಸ್ಥಿತವಾಗಿ ನಡೆದುಬಂದ ಕೃದಂತರೂಪಮಾಲಾಗ್ರಂಥವನ್ನು ಕುರಿತು (ನಾವಾರಿಸಿರುವ ಧಾತುಗಳು-ಕೃತ್ತುಗಳು-ಇವನ್ನೇ ಹೆಚ್ಚಾಗಿ ಅಧಿಕರಿಸಿ) ಕೆಲವು ವಿಮರ್ಶನಗಳನ್ನು ಸೂಚಿಸಿದೆ

ಈ ಎಲ್ಲ ಪುಸ್ತಕಗಳಲ್ಲಿ ಅಲ್ಪ-ಬಹು-ಪ್ರಮಾಣಗಳಲ್ಲಿದ್ದ ಲೋಪ/ದೋಷ/ಅಸೌಕರ್ಯಗಳಾವುವೂ ನಮ್ಮ ಪುಸ್ತಕಗಳಲ್ಲಿ ಸುಳಿಯಬಾರದೆಂಬ ನಮ್ಮ ಉದ್ದೇಶವು ವಾಚಕರಿಗೆ ಸ್ಫುಟವಾಗಿರಬೇಕಷ್ಟೆ.

'ಈ ದಿಶೆಯಲ್ಲಿ ನಮ್ಮ ಪ್ರಯತ್ನ' ವು, ನಾವು ಏನು ಸಾಧಿಸಹೊರಟಿದ್ದೇವೆ, ಎಷ್ಟು ಮತ್ತು ಹೇಗೆ-ಎಂಬುದನ್ನು ತಿಳಿಯಪಡಿಸುತ್ತದೆ.

'ಈ ಪುಸ್ತಕದ ಸ್ವರೂಪ' ವು ಜಟಿಲ ವಿಷಯದ ತೊಂತುಗಳನ್ನು ಎಳೆ ಎಳೆಯಾಗಿ ಬಿಡಿಸಲು ತೋರಿರುವ ಶತಾವಧಾನ-ವಿಧಾನಗಳನ್ನು ತೋರಿಸಲಿಕ್ಕೆ

ಸಿದೆ. ಎಂತಲೇ ಈ ಪುಸ್ತಕದ ಇದೊಂದೇ ಭಾಗವನ್ನೋದಿದವರಿಗೂ ಈ ವ್ಯಾಮಿಶ್ರಸಮಸ್ಯೆಯ ಹಲವು ಮುಖ್ಯ ನೋಟಗಳೊದಗುವುವೆನ್ನಬಹುದು. ಹಾಗೂ ಈ ಪುಸ್ತಕದಿಂದ ಹೆಚ್ಚು ಪ್ರಯೋಜನವನ್ನು ಪಡೆಯುವುದೂ ಸುಶಕ(easily possible)ವಾಗುತ್ತದೆ.

ಮೇಲೆ ಹೇಳಿದ ಈ ಕೊನೆಯ ಅಂಶವನ್ನೇ ಸಾರಿಸ್ಮ್ಯಪಾಗಿ ಈ ಮುಂದಿನ ಭಾಗ 'ಪುಸ್ತಕವನ್ನು ಬಳಸುವ ಬಗೆ' (2.2) ಸಂಗ್ರಹವಾಗಿ ಹೇಳುತ್ತದೆ.

(e) ಕೋಶೋತ್ತರ ಭಾಗ

ನಾವು ಕೊಟ್ಟಿರುವ ಹತ್ತು ಕೃದಂತಗಳಲ್ಲಿ ಏಳು 'ದ್ರವ್ಯ' ಗಳು: ಲಿಂಗ, ವಿಭಕ್ತಿ, ವಚನಗಳು ಅವಕ್ಕೆ ಉಂಟು. ಈ ಶಬ್ದಗಳನ್ನು 'ನಡೆಸು ವುದ'ರಲ್ಲಿ ಒಂದೆರಡು ಎಚ್ಚರಿಕೆಗಳು ಬೇಕು. ಆದಕ್ಕಾಗಿ ಸರಿಂಸಾದ ಆದರ್ಶ ಗಳೇನು–ಅನಾದರ್ಶಗಳೇನು–ಎರಡನ್ನೂ 4.01ರಲ್ಲಿ ತೋರಿಸಿದ್ದೇವೆ.

ಕೃದಂತಗಳ ಬಳಕೆಯ ಬಗ್ಗೆ ಬೇರೊಂದು ಪುಸ್ತಕವೇ ಸಿದ್ಧವಾಗು ತ್ತಿದೆಯಾದರೂ ಈ ಪುಸ್ತಕವು ಸ್ವಯಂಪರಿಪೂರ್ಣ (complete in itself, independent whole) ವೆನಿಸಲು ಆ ಬಳಕೆಯ ಒಂದು ಸ್ಥೂಲವಾದ ನೋಟ ಆವಶ್ಯಕ. ಕೆಲವೊಮ್ಮೆ ಸಿಷ್ಟ್ಯಷ್ಟ ರೂಪಗಳ ಅರಿವಿಲ್ಲ ದಾದಾಗಲೂ ಹೇಗೋ ನಿಭಾಯಿಸಲು ಕೆಲವೆರಡು (ವ್ಯಾಕರಣಸಮ್ಮತ ವಾದ) ಉಪಾಯಗಳನ್ನು ಆ ನಂತರ ಸೂಚಿಸಿದೆ.

ಅಷ್ಟಾಧ್ಯಾಯಿಯಲ್ಲಿ ಎಂಟನೇ ಒಂದು ಭಾಗಕ್ಕಿಂತಲೂ ಹೆಚ್ಚು ಭಾಗವನ್ನು ಕೃದಂತಗಳಿಗೇ ವಿನಿಯೋಗಿಸಲಾಗಿದೆಯೆಂದ ಮೇಲೆ, ಭಾಷೆ ಯಲ್ಲಿ ಇವುಗಳ ವ್ಯಾಪ್ತಿ ಪ್ರಾಮುಖ್ಯಗಳೆರಡೂ ಎಷ್ಟೆಂಬುದು ತಿಳಿಯುತ್ತದೆ. ಇವುಗಳ ಪ್ರಕ್ರಿಯೆಯ ಕಥೆಯೂ ಇದೇ ತೆರನೆಂದು ತಿಳಿಯುವುದೂ ಕಷ್ಟ ವಲ್ಲ. ಆದಕ್ಕಾಗಿ ಆ ಪ್ರಕ್ರಿಯೆಗಳ ಬಗ್ಗೆ ಒಂದು ಚಿಕ್ಕ ನೋಟವನ್ನು (4.07) ಒದಗಿಸಲೆತ್ನಿಸಿವೆ. ವಿಶೇಷವಾಗಿ ನುಮಾಗಮದ ಬಗ್ಗೆ ಒಂದೆರಡು ಮಾತುಗಳನ್ನು ಹೇಳಿದೆ (4.08). ಪ್ರತ್ಯಯಮಾಲೋದಾಹರಣೆಗಳನ್ನೂ ಕೆಲವನ್ನೊದಗಿಸಿದೆ (4.12).

ಈ ಕಿರುಕೃತಿಯಿಂದಲೇ ದೊರೆಯಬಹುದಾದ ಲಕ್ಷರೂಪಗಳತ್ತ ಗಮನ ಸೆಳೆದು (4.13) ಉಪಯುಕ್ತ/ಪ್ರಸಕ್ತ ಗ್ರಂಥಸೂಚಿಯನ್ನೂ ಕೊಟ್ಟಿದೆ. (4.15)

ಸಂಸ್ಕೃತ ವ್ಯಾಕರಣ ಕೃತಿಗಳೆಲ್ಲದರಲ್ಲೂ ಸಾಮಾನ್ಯವಾಗಿ ಇರದ ವಿಷಯಸೂಚಕ ಅಕಾರಾದಿ (Subject Index) ಯನ್ನು ಇಲ್ಲಿ ಕೊಟ್ಟು ಯಾವುದೇ ವಿಷಯದ ಅನ್ವೇಷಣೆಯು ಸುಕರ-ಸುಗಮವಾಗುವಂತೆ ಯತ್ನಿಸಲಾಗಿದೆ.

(f) ಈ ಪುಸ್ತಕದ ಮಿತಿಗಳೇನು ?

(1) ಧಾತುಗಳು : ಮುಖ್ಯ 360 ಧಾತುಗಳನ್ನು ಮಾತ್ರವೆ ಸ್ವೀಕರಿಸಿದೆ. ಮಿಕ್ಕವು ಇಲ್ಲಿ ದೊರೆಯವು ('ಕೃದಂತರೂಪಮಾಲಾ ಗ್ರಂಥದಲ್ಲಿ ಇವು ಲಭ್ಯ).

: ಅರ್ಥಗಳನ್ನು ಸೂಚನಾಮಾತ್ರಸಾರವಾಗಿ ಕೊಟ್ಟಿದೆ. (ಹೆಚ್ಚು ಅರ್ಥಗಳನ್ನು ನಮ್ಮ 'ಧಾತುರೂಪಕೋಶ: ಸವಿವರಣ' ದಿಂದ ಪಡೆಯಬಹುದು. ಮುಂದೆ ಬರುವ 'ಧಾತ್ವರ್ಥಕೋಶ'ವು ಇದಕ್ಕೆ ಇನ್ನೂ ಪ್ರಯೋಜನಕಾರಿ)

: ಉಪಸರ್ಗ--ಉಪಪದಗಳಿಂದಾಗುವ ರೂಪಗಳನ್ನು, ಅರ್ಥಗಳನ್ನು ಕೊಟ್ಟಿಲ್ಲ.] ಮುಂದೆ ಬರುವ ಧಾತ್ವರ್ಥಕೋಶದಲ್ಲಿ ಇವೆಲ್ಲ ಧಾತುಗಳಿಗೇ ಸೇರುವ ಎಲ್ಲ ಮುಖ್ಯ ಉಪಸರ್ಗ – ಉಪಪದಗಳನ್ನೂ ರೂಪಭೇದ (ಪರಸ್ಮೈ–ಆತ್ಮನೇ ಇ) ಅರ್ಥಭೇದಗಳನ್ನೂ ಪಡೆಯಬಹುದು]

(2) ಕೃತ್ತುಗಳು : ಎಲ್ಲಾ ಕೃತ್ತುಗಳನ್ನೂ ಕೊಟ್ಟಿಲ್ಲ. ಹತ್ತನ್ನು ಮಾತ್ರ ಕೊಟ್ಟಿದೆ. (ಕೃದಂತ ರೂಪ ಕೋಶ–೨ ಮತ್ತು –೩ ಕೃತಿಗಳು ಮುಂದೆ ನಮ್ಮಿಂದಲೇ ಬರಲಿವೆ. ಕೊನೆಯಲ್ಲಿಯ 'ನಮ್ಮ ಪ್ರಕಟಣೆ'ಗಳನ್ನೊಮ್ಮೆ ಓದಿ).

(3) ಕೃದಂತ ರೂಪಗಳ ಬಳಕೆ : ಇದನ್ನು ಪ್ರಧಾನಾರ್ಥದಲ್ಲಿ ಮಾತ್ರ ತೋರಿಸಿದೆ. (ವಿಸ್ತಾರವಾದ ನಿರೂಪಣೆಗೆ ನಮ್ಮ ಕೃದಂತಗಳು : ಅರ್ಥ ಮತ್ತು ಬಳಕೆ' ಕೃತಿಯನ್ನು ನೋಡಿ).

(4) ಪ್ರತ್ಯಯಮಾಲಾ ರೂಪಗಳನ್ನು ಕೊಟ್ಟಿಲ್ಲ.

: ವರ್ತಮಾನ ಕೃದಂತ ಕರ್ಮಣಿ, ಅಂತೆಯೇ ಭವಿಷ್ಯತ್‌ಕೃದಂತ ಕರ್ಮಣಿ, ಣಿಚ್-ಸನ್-ಯಙಂತಗಳಲ್ಲಿ ರೂಪಗಳು-ಇವಾವನ್ನೂ ಕೊಡ ಹೋಗಿಲ್ಲ (ಇವಲ್ಲೂ ಕೆಲವು 'ಕೃದಂತರೂಪಮಾಲಾ' ದಲ್ಲಿ ಲಭ್ಯ). (ಮುಂದೆ ಬರುವ ನಮ್ಮ ಸಾಧಿತಧಾತುರೂಪಕೋಶ -೧ ಮತ್ತು -೨ -ಇವುಗಳಲ್ಲಿ ಲಟ್ ೧.೧ ರೂಪಗಳನ್ನು ಇವಿಷ್ಟು ಪ್ರಸಂಗಗಳಲ್ಲಿ ಪಡೆಯ ಬಹುದು. ಅಷ್ಟಾದರೆ ಕೃದಂತಗಳು ಊಹ್ಯ)

(5) ಸೂತ್ರ ಮತ್ತು ನಿಷ್ಪತ್ತಿ : ಗಳನ್ನೂ ಕೊಟ್ಟಿಲ್ಲ.

: ಇವೊಂದೊಂದೂ ಒಂದೊಂದು ಗ್ರಂಥದ ವಿಷಯ. ಜೊತೆಗೆ ನಿಶ್ರೇಣಿಕೆ (gradation) ಗ್ರಂಥಗಾತ್ರ (bulk), ಇತ್ಯಾದಿಗಳ ದೃಷ್ಟಿ ಯಿಂದ ಅವನ್ನು ಇಲ್ಲಿ ಕೊಟ್ಟಿಲ್ಲ.

(೮) ಈ ಪುಸ್ತಕದಿಂದ ಪಡೆಯಬಹುದಾದ ಇನ್ನಿತರ ರೂಪಗಳು

ಇನ್ನೂ ಕೆಲವು ರೂಪಗಳನ್ನು ಇಲ್ಲಿನ ರೂಪಗಳನ್ನಾಧರಿಸಿಯೇ ಪಡೆ ಯಲು ಶಕ್ಯವಿದೆ.

(1) ಸಾಧಾರಣವಾಗಿ ಇಲ್ಲಿರುವ ಎಲ್ಲ ರೂಪಗಳಿಗೂ 'ನಞ್' ಪ್ರತ್ಯಯ (ಸಾಧಾರಣವಾಗಿ ವಿರುದ್ಧಾರ್ಥಕ; 'ನಞರ್ಥಾಃ ಷಟ್ ಪ್ರಕೀ ರ್ತಿತಾ :')ವನ್ನು ಸೇರಿಸಬಹುದು-ಯಾವುದೇ ನಾಮ ಅಥವಾ ವಿಶೇಷಣ ಗಳ ವಿಷಯದಲ್ಲಿ ಹೇಗೋ ಹಾಗೇ.

(ಕೃದಂತವು ಸ್ವರಾದಿಯಾಗಿದ್ದರೆ 'ಅನ್' ಸೇರಿಸುವುದು; ಇಲ್ಲವಿದ್ದರೆ 'ಅ')

ಉದಾ-ಗಳು ಅಕರ್ತವ್ಯಮನಾಚರನ್
ಅನತಿಕ್ರಮಣೀಯಾನಿ ಶ್ರೇಯಾಂಸಿ.

ವಿದಿತಮವಿದಿತಂ ವಾ ಸರ್ವಮೇತತ್ ಕ್ಷಮಸ್ವ
ರುಗ್ಣಮಶಯಿತವಂತಂ ವೈದ್ಯೋऽಧಿಕ್ಷಿಪತಿ.
ಅನಿಚ್ಛನ್ನಪಿ ವಾರ್ಷ್ಣೇಯ ಬಲಾದಿವ ನಿಯೋಜಿತಃ
ತೇನಾಪಿ ಸಂತೋಷಮಲಭಮಾನಃ........
ಕರ್ತುಮಕರ್ತುಮನ್ಯಥಾಕರ್ತುಂ ಚ ಶಕ್ತಃ
ಅಕೃತ್ವಾ ಪರಸಂತಾಪಮ್ ಅಗತ್ವಾ ಖಲನಮ್ರತಾಮ್ ।
ಅನುತ್ಸೃಜ್ಯ ಸತಾಂ ವರ್ತ್ಮ ಯದಲ್ಪಮಪಿ ತದ್ಬಹು ॥

(2) 'ತುಂ ಕಾಮಮನಸೋರಪಿ'

ಉದಾ : ಗಂತುಂ ಕಾಮಃ ಯಸ್ಯ ಸಃ – ಗಂತುಕಾಮಃ
ಅವಿಚಲಿತಂ ಮನಃ ಯಸ್ಯ ಸಃ – ಅವಿಚಲಿತಮನಾಃ

ತುಮುನ್ ಪ್ರತ್ಯಯಕ್ಕೆ, 'ಕಾಮ' 'ಮನಸ್' ಗಳನ್ನು ಸೇರಿಸಿ ರೂಪಗಳನ್ನು ಮೇಲಿನಂತೆ ಪಡೆಯುವಾಗ ತುಮುನ್ ಪ್ರತ್ಯಯದ ಮಕಾರವು ಲೋಪ ಹೊಂದುತ್ತದೆ.

(3) 'ಓರಾವಶ್ಯಕೇ'

'ಲುಂಪೇದವಶ್ಯಮಃ ಕೃತ್ಯೇ ತುಂ ಕಾಮಮನಸೋರಪಿ ।
ಸಮೋ ವಾ ಹಿತತತಯೋರ್ಮಾಂಸಸ್ಯ ಪಚಿಯುಙ್ಘಞೋಃ ॥

(ರೂಪಾವತಾರ)

ಉದಾ : ಅವಶ್ಯಂ ಶ್ರೋತುಂ ಯೋಗ್ಯಂ = ಅವಶ್ಯಶ್ರಾವ್ಯಮ್
ಹೀಗೆಯೇ ಅವಶ್ಯಭಾವ್ಯಂ ಇ.

ಇಲ್ಲಿ 'ಅವಶ್ಯ'ವು ಉಪಪದವಲ್ಲವಾದ್ದರಿಂದ ಅದನ್ನು ಬಿಡಲೂಬಹುದು.

ಉದಾ : ವಿಪ್ರೇಣ ಶುಚಿನಾ ಭಾವ್ಯಂ (ಪ್ರಕ್ರಿಯಾ ಕೌಮುದೀ)
ಹೀಗೆಯೇ ನಾವ್ಯಂ – ಲಾವ್ಯಂ. ಇ.

(h) ಈ ಕೃತಿಯಿಂದ ಕನ್ನಡ ಭಾಷೆಗೆ ಆಗುವ ಉಪಯೋಗ

ಈ ಕೃತಿಯಲ್ಲಿರುವ ಹಲವು ಕೃದಂತಗಳು ಕನ್ನಡ ಭಾಷೆಯಲ್ಲಿ ಬಳಕೆಯಲ್ಲಿವೆ. ಕೆಲವು ಪ್ರಸಿದ್ಧ ಉದಾ. ಗಳನ್ನು ನೋಡಿ.

ತವ್ಯ ಕರ್ತವ್ಯ ಸ್ಮರ್ತವ್ಯ ಭವಿತವ್ಯ ಗಂತವ್ಯ

ಅನೀಯ ಸ್ಮರಣೀಯ ಪ್ರೇಕ್ಷಣೀಯ ರಮಣೀಯ ಮನನೀಯ ಗಣನೀಯ ಶ್ಲಾಘನೀಯ (ಪ್ರ)ಶಂಸನೀಯ ಶಂಕನೀಯ ವರ್ಜನೀಯ ಶೋಚನೀಯ ಗಮನೀಯ.

ಯ- ಸ್ವಾದ್ಯ ಖಾದ್ಯ ಪೇಯ ಲೇಹ್ಯ ಭಕ್ಷ್ಯ ಭೋಜ್ಯ ಭೋಗ್ಯ ಸೂಚ್ಯ ವಾಚ್ಯ ವಾಕ್ಯ ವಾದ್ಯ ವೇದ್ಯ ಲಕ್ಷ್ಯ ಪ್ರೇಕ್ಷ್ಯ ಸ್ಪೃಶ್ಯ ದೃಶ್ಯ ಶ್ರವ್ಯ ಶ್ರಾವ್ಯ ಗದ್ಯ ಪದ್ಯ ಮದ್ಯ ಹಾಸ್ಯ ಲಾಸ್ಯ ಶಕ್ಯ ಲಭ್ಯ ಸಹ್ಯ ಶೋಚ್ಯ ವರ್ಜ್ಯ ವಧ್ಯ ಸ್ತುತ್ಯ ಗಣ್ಯ

ತ – ಮತ ಹತ (ನಿ)ರತ ದಯಿತ ಗಣಿತ ಕಥಿತ ಮಥಿತ ಅರ್ಜಿತ ಭ್ರಾಂತ ಶ್ರಾಂತ ಕ್ರಾಂತ ಕಾಂತ (ಪ್ರ) ಶಸ್ತ ಶಕ್ತ ಭಕ್ತ (ಸಂ)ತುಷ್ಟ ದುಷ್ಟ ಪುಷ್ಟ ಹೃಷ್ಟ (ಆ)ಕೃಷ್ಟ ನಷ್ಟ ಭ್ರಷ್ಟ ಅನ್ನ ಭಿನ್ನ ಛಿನ್ನ ಖಿನ್ನ ಮಗ್ನ ಲಗ್ನ ಸಿದ್ಧ ಬುದ್ಧ ಯುದ್ಧ ಶುದ್ಧ ವೃದ್ಧ ಸನ್ನದ್ಧ ಶುಷ್ಕ ಪಕ್ವ ನಿರ್ವಾಣ

ಆನ/ಮಾನ-ಯಜಮಾನ ಜಾಯಮಾನ ವಿದ್ಯಮಾನ ವರ್ತಮಾನ. ವರ್ಧಮಾನ.

ಇವನ್ನು ಸರಿಯಾಗಿ ಅರಿತರೆ ಇಚ್ಛಿತ, ಬಂಧಿತ, ಹರ್ಷಿತ ಮುಂತಾದ ಅಪಶಬ್ದ(ಅರ್ಥ)ಗಳನ್ನು ಬಿಡಬಹುದು.

ನಾವು ಮುಂದಿನ ಸಂಪುಟದಲ್ಲಿ ನಿರೂಪಿಸುವ ಇನ್ನಿತರ ಕೃದಂತರೂಪಗಳಲ್ಲಿ ಮತ್ತೂ ಹೇರಳವಾದ ಸಂಖ್ಯೆಯಲ್ಲಿ ಕನ್ನಡದಲ್ಲಿ ಬಳಕೆಯಲ್ಲಿರುವ ಪದಗಳಿರುವುದು ಓದುಗರಿಗೆ ಸುಲಭವಾಗಿಯೇ ವೇದ್ಯವಾಗುತ್ತದೆ.

ಇಂದು ಹುಲುಸಾಗಿ ಬೆಳೆಯುತ್ತಿರುವ ಕನ್ನಡ ಭಾಷಾಭಿವೃದ್ಧಿಗೆ ನಿರ್ದಿಷ್ಟ ಪದಗಳು ಯಥೇಚ್ಛವಾಗಿ ಬೇಕಾಗಿವೆ. ಕೌಟಲೀಯಾರ್ಥಶಾಸ್ತ್ರದಲ್ಲಿಯ ಕೇವಲ ಲೌಕಿಕವಾದ ಪಾರಿಭಾಷಿಕ ಶಬ್ದರಾಶಿಯು ಸ್ಥೂಲವಾದ ನೋಟವುಳ್ಳವರು ಸಹ ಇಂದು ಅನ್ವೇಷಣೆಯುರಾಗಿದ್ದಾರೆ. ಇತ್ತ ಪೂರ್ವಾರ್ಜಿತವಾದ ಶಬ್ದಸಂಪತ್ತು ಅರ್ಥಸಂಪತ್ತುಗಳಿಗೆ ನಾವು ಎರವಾಗಿ, ಕೇವಲ ಪರಭಾಷೆಯ ಪರಿಭಾಷೆಯ ಪರಿಯನ್ನೇ ಭಟ್ಟಿಯಿಳಿಸಲೆಳಸುತ್ತಾ ವೃಥಾ ಭ್ರಮ-ಶ್ರಮಗಳಲ್ಲಿರುವ ಈ ವೇಳೆ, ಉಪಯುಕ್ತವಾದ ಭಾವ-ಅರ್ಥಗಳಿಗೆ ಸಮುಚಿತವಾದ ಪದಗಳಿಗಾಗಿ ಸಿದ್ಧವಾದ ಪದರಾಶಿಯನ್ನು ಸಂಸ್ಕೃತದಿಂದ ಆವಶ್ಯಕತಾನುಸಾರ ಔಚಿತ್ಯಪೂರ್ಣವಾಗಿ ತರಲೆತ್ನಿಸುವುದು ತಪ್ಪಾಗಲಾರದು. ಇಲ್ಲವೆ, 'ಸಿದ್ಧಮನ್ನಂ ಪರಿತ್ಯಜ್ಯ ಭಿಕ್ಷಾಮಟತಿ ದುರ್ಮತಿಃ' ಎಂಬಂತಾಗುತ್ತದೆಯಲ್ಲವೆ ?

2.2

ಈ ಪುಸ್ತಕವನ್ನು ಬಳಸುವ ಬಗೆ

1. ಧಾತುಗಳು : ಒಟ್ಟು 360 ಮುಖ್ಯ ಧಾತುಗಳನ್ನಾರಿಸಿದೆ.
   ಅವನ್ನು ಅಕಾರಾದಿ ಕ್ರಮದಲ್ಲಿ ಕೊಟ್ಟಿದೆ.
   ಪ್ರತಿ ಧಾತುವಿಗೂ ಗಣ-ಪದ-ಕರ್ಮವತ್ತ್ವ-ಇಟ್‌ತ್ವಗಳನ್ನು ಸೂಚಿಸಿದೆ.

2. ಕೃತ್ತುಗಳು : ಹತ್ತು ಕೃತ್ತುಗಳನ್ನಾರಿಸಿದೆ.
   ಪ್ರತಿ ಧಾತುವಿಗೂ ಈ ಹತ್ತನ್ನೂ ಸೇರಿಸಿದರೆ ಆಗುವ ರೂಪಗಳನ್ನು ಕೊಟ್ಟಿದೆ.
   ಪ್ರತಿ ಪ್ರತ್ಯಯಕ್ಕೂ ಸೂಚಕವಾದ ಸಂಖ್ಯೆ ಕೊಟ್ಟಿದೆ. ಇವುಗಳ ಸಂಬಂಧ (one-to-one-relationship) ವನ್ನು ರಕ್ಷಾಪುಟದ ಎರಡೂ ಒಳ ಭಾಗಗಳಲ್ಲಿ ಮುದ್ರಿಸಿದೆ

3. ರೂಪಗಳು : ಅವ್ಯಯಗಳಾದ ಕೊನೆಯ ಮೂರನ್ನು (ತುಮುನ್,

ಕ್ತ್ವಾ, ಲ್ಯಪ್) ಬಿಟ್ಟರೆ ಮಿಕ್ಕವನ್ನೆಲ್ಲ (ಪು/.ಸ್ತ್ರೀ./ನ.) ೧.೧ ರೂಪದಲ್ಲಿ ತೋರಿಸಿದೆ. (ಈ ಏಳಕ್ಕೂ ಮೂರು ಲಿಂಗಗಳಲ್ಲೂ ರೂಪಗಳುಂಟು).

ಶತೃ ಪ್ರತ್ಯಯದಲ್ಲಿ ಎಲ್ಲೆಡೆ ಸ್ತ್ರೀರೂಪ (೧.೧) ವನ್ನೂ ತೋರಿಸಿದೆ.

4. ನಿರ್ದೇಶನ : ಅಧಿಕ ರೂಪಗಳನ್ನು (ಮಧ್ಯೆ ಸಣ್ಣ ಗೀಟಿನಿಂದ) ತೋರಿದೆ.

ಅರ್ಥ ವಿಶೇಷವಿರುವ ರೂಪವನ್ನು ಕಂಸದೊಳಗೆ ಹಾಕಿದೆ.

ಸಂಕ್ಷೇಪಗಳನ್ನು ಮೊದಲೂ ಕೊನೆಯಲ್ಲೂ ಕೊಟ್ಟಿದೆ.

5 ಸಮಸ್ಯೆಯ ಸ್ವರೂಪ : ಈ ಹಿಂದಿನ ಅಧ್ಯಾಯ ("ಕೋಶ ಪೂರ್ವ ಭಾಗ") ವನ್ನು ಓದಿದರೆ ಇದು ತಿಳಿಯುತ್ತದೆ. ಅಂತೆಯೇ ಹಿಂದಿನ ಯತ್ನ-ಈ ಪ್ರಯತ್ನಗಳಲ್ಲಿನ ಭೇದವೂ.

6. ಸಮಸ್ಯೆಯ ಪರಿಹಾರ : ಇದರ ಬಗೆಯೇ ಕೋಶ ಭಾಗ.

7. ಸ್ಪಷ್ಟನೆ : ಅನುಬಂಧ("ಕೋಶೋತ್ತರ ಭಾಗ")ಗಳಲ್ಲಿ ಇದು ಲಭ್ಯ -ಕೃದಂತ ಶಬ್ದಗಳನ್ನು ನಡೆಸುವ ಬಗೆ, ಆ ರೂಪಗಳನ್ನು ಬಳಸುವ ಬಗೆ ಮತ್ತು ಅದಕ್ಕೆ ಸಂಬಂಧಿಸಿದ ಕೆಲವ್ಯಾಕರಣ ಪ್ರಕ್ರಿಯೆಗಳನ್ನು ಸೋದಾಹರಣವಾಗಿ ಇಲ್ಲಿ ನೋಡಬಹುದು.

8. ಅಕಾರಾದಿ (Subject index) : ಎಷ್ಟೋ ವ್ಯಾಕರಣ ವಿಷಯಗಳು ಈ ಮೂಲಕ ಸ್ಪಷ್ಟವಾಗುತ್ತವೆ. ಇದನ್ನು ಹೆಚ್ಚಾಗಿ ಬಳಸಿ.

9. ಈ ಪುಸ್ತಕದ ಮಿತಿ (limitations)ಗಳೇನು? ಇದಕ್ಕೆ ಉತ್ತರ ಕೆಲವೇ ಪುಟಗಳ ಹಿಂದೆ ಇದೆ.

10. ಈ ಪುಸ್ತಕದಿಂದ ಅಧಿಕತರ ಉಪಯೋಗಗಳೇನು? ಇದಕ್ಕೂ ಉತ್ತರ ಈ ಹಿಂದೆ ಇದೆ.
: ವಿಶೇಷವಾಗಿ ಕನ್ನಡ ಭಾಷೆಯ ಶುದ್ಧಿ-ಸಮೃದ್ಧಿಗಳಿಗೆ ಈ ಪುಸ್ತಕದ ಸಾಹಾಯ್ಯವೇನು? ಇದನ್ನೂ ಹಿಂದೆ ತಿಳಿಸಿದೆ.

ಇದೇ ಅಲ್ಲದೆ, ಇದಕ್ಕೆ ಸಂಬಂಧಿಸಿದ ಇನ್ನಿತರ ಕೃತಿಗಳ ಬಗ್ಗೆ ಪುಸ್ತಕದ ಕೊನೆಯಲ್ಲಿನ 'ಪ್ರಕಟಣೆ'ಗಳನ್ನೂ ನೋಡಿ.

—O—

3

★ ಕೃದಂತ ರೂಪ ಕೋಶ

1 ಅಂಚ್ (I ಪ. ಸಕ. ಸೇ.) ಹೋಗು, ಸತ್ಕರಿಸು

1 ಅಂಚಿತವ್ಯಂ 2 ಅಂಚನೀಯಂ 3 ಅಂಕ್ಯಂ (ಅಂಚ್ಯಂ) 4 (ಅಂಚಿತಃ)-(ಅಕ್ತಃ)-(ಸಮಕ್ತಃ)-(ಸಮಕ್ನಃ) 5 ಅಂಚಿತವಾನ್ - ಅಕ್ತವಾನ್-ಸಮಕ್ತವಾನ್-ಸಮಕ್ನವಾನ್ 6 ಅಂಚನ್(-ನ್ತೀ) 7 ಅಂಚಿಷ್ಯನ್ 8 ಅಂಚಿತುಂ-ಅಕ್ತುಂ 9 (ಅಂಚಿತ್ವಾ)-(ಅಕ್ತ್ವಾ) 10 ಸಮಂಚ್ಯ-ಸಮಚ್ಯ

2 ಅಂಜ್ (VII ಪ.ಸಕ.ವೇ.) ಲೇಪಿಸು

1 ಅಂಜಿತವ್ಯಂ-ಅಂಕ್ತವ್ಯಂ 2 ಅಂಜನೀಯಂ 3 ವ್ಯಂಗ್ಯಂ 4 ಅಕ್ತಃ 5 ಅಕ್ತವಾನ್ 6 ಅಂಜನ್(-ತೀ) 7 ಅಂಜಿಷ್ಯನ್-ಅಂಕ್ಷ್ಯನ್ 8 ಅಂಜಿತುಂ-ಅಂಕ್ತುಂ 9 ಅಂಜಿತ್ವಾ-ಅಂಕ್ತ್ವಾ-ಅಕ್ತ್ವಾ 10 ಸಮಜ್ಯ

3 ಅಟ್ (Iಪ. ಸಕ. ಸೇ.) ತಿರುಗಾಡು, ಅಲೆ

1 ಅಟಿತವ್ಯಂ 2 ಅಟನೀಯಂ 3 ಅಟ್ಯಂ 4 ಅಟಿತಃ 5 ಅಟಿತವಾನ್ 6 ಅಟನ್ (-ನ್ತೀ) 7 ಅಟಿಷ್ಯನ್ 8 ಅಟಿತುಂ 9 ಅಟಿತ್ವಾ 10 ಪರ್ಯಟ್ಯ

4 ಅದ್ (IIಪ.ಸಕ.ಅ.) ತಿನ್ನು

1 ಅತ್ತವ್ಯಂ 2 ಅದನೀಯಂ 3 ಆದ್ಯಂ 4 ಜಗ್ಧಂ-ಅನ್ನಂ 5 ಜಗ್ಧವಾನ್-ಅನ್ನವಾನ್ 6 ಅದನ್ (-ತೀ) 7 ಅತ್ಸ್ಯನ್ 8 ಅತ್ತುಂ 9 ಜಗ್ಧ್ವಾ 10 ಪ್ರಜಗ್ಧ್ಯ

★'ಈ ಪುಸ್ತಕವನ್ನು ಬಳಸುವ ಬಗೆ' (ಅಧ್ಯಾಯ 2.2) ಎಂಬ ಭಾಗವನ್ನು ಓದಿಕೊಂಡು ಅನಂತರ ಬಳಸತಕ್ಕದ್ದು.

5 ಅನ್ (II ಪ.ಅಕ.ಸೇ.) ಉಸಿರಾಡು, ಜೀವಿಸು

1 ಅನಿತವ್ಯಂ 2 ಅನನೀಯಂ 3 ಅನ್ಯಂ 4 ಅನಿತಃ 5 ಅನಿತವಾನ್ 6 ಅನನ್ (-ತೀ) 7 ಅನಿಷ್ಯನ್ 8 ಅನಿತುಂ 9 ಅನಿತ್ವಾ 10 ಪ್ರಾಣ್ಯ

6 ಅಯ್ (I ಆ.ಸಕ.ಸೇ.) ಹೋಗು

1 ಅಯಿತವ್ಯಂ 2 ಅಯನೀಯಂ 3 ಅಯ್ಯಂ 4 ಅಯಿತಃ 5 ಅಯಿತವಾನ್ 6 ಅಯಮಾನಃ 7 ಅಯಿಷ್ಯಮಾಣಃ 8 ಅಯಿತುಂ 9 ಅಯಿತ್ವಾ 10 ಪಲಾಯ್ಯ

7 ಅರ್ಚ್ (I ಪ.ಅಕ.ಸೇ.) ಪೂಜೆಮಾಡು, ಸತ್ಕರಿಸು

1 ಅರ್ಚಿತವ್ಯಃ 2 ಅರ್ಚನೀಯಃ 3 ಅರ್ಚ್ಯಃ 4 ಅರ್ಚಿತಃ( ) 5 ಅರ್ಚಿತವಾನ್ 6 ಅರ್ಚನ್ (-ನ್ತೀ) 7 ಅರ್ಚಿಷ್ಯನ್ 8 ಅರ್ಚಿತುಂ 9 ಅರ್ಚಿತ್ವಾ 10 ಪ್ರಾರ್ಚ್ಯ

8 ಅರ್ಜ್ (I ಪ.ಸಕ.ಸೇ.) ಸಂಪಾದಿಸು

1 ಅರ್ಜಿತವ್ಯಂ 2 ಅರ್ಜನೀಯಂ 3 ಅರ್ಜ್ಯಂ 9 ಅರ್ಜಿತಃ 5 ಅರ್ಜಿತವಾನ್ 6 ಅರ್ಜನ್ (-ನ್ತೀ) 7 ಅರ್ಜಿಷ್ಯನ್ 8 ಅರ್ಜಿತುಂ 9 ಅರ್ಜಿತ್ವಾ 10 ಸಮುರ್ಜ್ಯ

9 ಅರ್ಥ್ (X ಆ.ದ್ವಿಕ. ಸೇ.) ಬೇಡು

1 ಅರ್ಥಯಿತವ್ಯಂ 2 ಅರ್ಥನೀಯಂ 3 ಅರ್ಥ್ಯಂ 4 ಅರ್ಥಿತಃ 5 ಅರ್ಥಿತವಾನ್ 6 ಅರ್ಥಯಮಾನಃ 7 ಅರ್ಥಯಿಷ್ಯಮಾಣಃ 8 ಅರ್ಥಯಿತುಂ 9 ಅರ್ಥಯಿತ್ವಾ 10 ಸಮರ್ಥ್ಯ

10 ಅರ್ಹ (I ಪ.ಸಕ.ಸೇ.) ಅರ್ಹನಾಗು, ಪಾತ್ರನಾಗು

1 ಅರ್ಹಿತವ್ಯಃ 2 ಅರ್ಹಣೀಯಃ 3 ಅರ್ಹ್ಯಃ 4 ಅರ್ಹಿತಃ 5 ಅರ್ಹಿತವಾನ್ 6 ಅರ್ಹನ್ (-ನ್ತೀ) 7 ಅರ್ಹಿಷ್ಯನ್ 8 ಅರ್ಹಿತುಂ 9 ಅರ್ಹಿತ್ವಾ 10 ಸಮರ್ಹ್ಯ

11 ಅವ್ (I ಪ.ಸಕ.ಸೇ.) ಕಾಪಾಡು

1 ಅವಿತವ್ಯಂ 2 ಅವನೀಯಂ 3 ಅವ್ಯಂ 4 ಅವಿತಃ 5 ಅವಿತವಾನ್ 6 ಅವನ್ (-ನ್ತೀ) 7 ಅವಿಷ್ಯನ್ 8 ಅವಿತುಂ 9 ಅವಿತ್ವಾ 10 ಸಮವ್ಯ

12 ಅಶ್[1] (V ಆ.ಸಕ.ಸೇ.) ಹೊಂದು

1 ಅಶಿತವ್ಯಃ-ಅಷ್ಟವ್ಯಃ 2 ಅಶನೀಯಃ 3 ಆಶ್ಯಃ 4 ಅಷ್ಟಃ 5 ಅಷ್ಟವಾನ್ 6 ಅಶ್ನುವಾನಃ 7 ಅಶಿಷ್ಯಮಾಣಃ-ಅಕ್ಷ್ಯಮಾಣಃ 8 ಅಶಿತುಂ-ಅಷ್ಟುಂ 9 ಅಶಿತ್ವಾ-ಅಷ್ಟ್ವಾ 10 ಸಮಶ್ಯ.

13 ಅಶ್[2] (IX ಪ.ಸಕ.ಸೇ.) ತಿನ್ನು

1 ಅಶಿತವ್ಯಂ 2 ಅಶನೀಯಂ 3 ಆಶ್ಯಂ 4 ಅಶಿತಃ 5 ಅಶಿತವಾನ್ 6 ಅಶ್ನನ್ (-ತೀ) 7 ಅಶಿಷ್ಯನ್ 8 ಅಶಿತುಂ 9 ಅಶಿತ್ವಾ 10 ಪ್ರಾಶ್ಯ

14 ಅಸ್[1] (II ಪ.ಅಕ. ಸೇ.) ಇರು

1 ಭವಿತವ್ಯಂ 2 ಭವನೀಯಂ 3 ಭವ್ಯಂ 4 ಭೂತಃ 5 ಭೂತವಾನ್ 6 ಸನ್ (-ತೀ) 7 ಭವಿಷ್ಯನ್ 8 ಭವಿತುಂ 9 ಭೂತ್ವಾ 10 ಸಂಭೂಯ

15 ಅಸ್[2] (IV ಪ.ಸಕ.ಸೇ.) ಎಸೆ

1 ಅಸಿತವ್ಯಂ 2 ಅಸನೀಯಂ 3 ಅಸ್ಯಂ 4 ಅಸ್ತಃ 5 ಅಸ್ತವಾನ್ 6 ಅಸ್ಯನ್ (-ನ್ತೀ) 7 ಅಸಿಷ್ಯನ್ 8 ಅಸಿತುಂ 9 ಅಸಿತ್ವಾ-ಅಸ್ತ್ವಾ 10 ಪ್ರಾಸ್ಯ

16 ಆಪ್ (V ಪ.ಸಕ.ಅ.) ಹೊಂದು

1 ಆಪ್ತವ್ಯಂ 2 ಆಪನೀಯಂ 3 ಆಪ್ಯಂ 4 ಆಪ್ತಃ 5 ಆಪ್ತವಾನ್
6 ಆಪ್ನುವನ್ (-ತೀ) 7 ಆಪ್ಸ್ಯನ್ 8 ಆಪ್ತುಂ 9 ಆಪ್ತ್ವಾ
10 ಪ್ರಾಪ್ಯ

17 ಆಸ್ (II ಆ.ಅಕ.ಸೇ.) ಕೂಡು (=ಕುಳಿತುಕೊಳ್ಳು)

1 ಆಸಿತವ್ಯಂ 2 ಆಸನೀಯಂ 3 ಆಸ್ಯಂ 4 ಆಸಿತಃ-(ಆಸಿತಂ)
5 ಆಸಿತವಾನ್ 6 ಆಸೀನಃ 7 ಆಸಿಷ್ಯಮಾಣಃ 8 ಆಸಿತುಂ 9 ಆಸಿತ್ವಾ
10 ಉಪಾಸ್ಯ

18 ಇ (II ಪ.ಸಕ.ಅ.) ಹೋಗು

1 ಏತವ್ಯಂ 2 ಅಯನೀಯಂ 3 ಏಯಂ 4 ಇತಃ 5 ಇತವಾನ್
6 ಯನ್ (-ತೀ) 7 ಏಷ್ಯನ್ 8 ಏತುಂ 9 ಇತ್ವಾ 10 ಪ್ರೇತ್ಯ–ಪರೀತ್ಯ

19 ಅಧಿ+ಇ (II ಆ.ಸಕ.ಅ.) ಅಧ್ಯಯನಮಾಡು

1 ಅಧ್ಯೇತವ್ಯಂ 2 ಅಧ್ಯಯನೀಯಂ 3 ಅಧ್ಯೇಯಂ 4 ಅಧೀತಃ
5 ಅಧೀತವಾನ್ 6 ಅಧೀಯಾನಃ 7 ಅಧ್ಯೇಷ್ಯಮಾಣಃ 8 ಅಧ್ಯೇತುಂ
9 10 ಅಧೀತ್ಯ

20 ಇಷ್ (VI ಪ.ಸಕ.ಸೇ.) ಬಯಸು

1 ಏಷಿತವ್ಯಂ-ಏಷ್ಟವ್ಯಂ 2 ಏಷಣೀಯಂ 3 ಏಷ್ಯಂ 4 ಇಷ್ಟಃ
5 ಇಷ್ಟವಾನ್ 6 ಇಚ್ಛನ್ (–ನ್ತೀ) (–ತೀ) 7 ಏಷಿಷ್ಯನ್ 8 ಏಷಿತುಂ–
ಏಷ್ಟುಂ 9 ಏಷಿತ್ವಾ–ಇಷ್ಟ್ವಾ 10 ಸಮಿಷ್ಯ

21 ಈಕ್ಷ್ (I ಆ.ಸಕ.ಸೇ.) ನೋಡು

1 ಈಕ್ಷಿತವ್ಯಂ 2 ಈಕ್ಷಣೀಯಂ 3 ಈಕ್ಷ್ಯಂ 4 ಈಕ್ಷಿತಃ 5 ಈಕ್ಷಿತವಾನ್ 6 ಈಕ್ಷಮಾಣಃ 7 ಈಕ್ಷಿಷ್ಯಮಾಣಃ 8 ಈಕ್ಷಿತುಂ 9 ಈಕ್ಷಿತ್ವಾ 10 ಸಮೀಕ್ಷ್ಯ

22 ಈಡ್ (II ಆ.ಸಕ.ಸೇ.) ಸ್ತುತಿಸು

1 ಈಡಿತವ್ಯಂ 2 ಈಡನೀಯಂ 3 ಈಡ್ಯಂ 4 ಈಡಿತಃ 5 ಈಡಿತವಾನ್ 6 ಈಡಾನಃ 7 ಈಡಿಷ್ಯಮಾಣಃ 8 ಈಡಿತುಂ 9 ಈಡಿತ್ವಾ 10 ಸಮೀಡ್ಯ

23 ಈರ್ (X ಉ.ಸಕ.ಸೇ.) ಪ್ರೇರಿಸು

1 ಈರಿತವ್ಯಂ 2 ಈರಣೀಯಂ 3 ಈರ್ಯಂ 4 ಈರಿತಃ 5 ಈರಿತವಾನ್ 6 ಈರನ್ (-ಸ್ತ್ರೀ) ಈರಾಣಃ 7 ಈರಿಷ್ಯನ್ ಈರಿಷ್ಯಮಾಣಃ 8 ಈರಿತುಂ 9 ಈರಿತ್ವಾ 10 ಉದೀರ್ಯ

24 ಈರ್ಷ್ಯ್ (I ಪ.ಅಕ. ಸೇ.) ಅಸೂಯೆಪಡು

1 ಈರ್ಷ್ಯಿತವ್ಯಂ 2 ಈರ್ಷ್ಯಣೀಯಂ 3 ಈರ್ಷ್ಯ್ಯಂ 4 ಈರ್ಷ್ಯಿತಂ 5 ಈರ್ಷ್ಯಿತವಾನ್ 6 ಈರ್ಷ್ಯನ್ (-ಸ್ತ್ರೀ) 7 ಈರ್ಷ್ಯಿಷ್ಯನ್ 8 ಈರ್ಷ್ಯಿತುಂ 9 ಈರ್ಷ್ಯಿತ್ವಾ 9 ಸಮೀರ್ಷ್ಯ

25 ಈಶ್ (II ಆ. ಅಕ. ಸೇ.) ಆಳು

1 ಈಶಿತವ್ಯಂ 2 ಈಶನೀಯಂ 3 ಈಶ್ಯಂ 4 ಈಶಿತಃ 5 ಈಶಿತವಾನ್ 6 ಈಶಾನಃ 7 ಈಶಿಷ್ಯಮಾಣಃ 8 ಈಶಿತುಂ 9 ಈಶಿತ್ವಾ 10 ಅಧೀಶ್ಯ

26 ಈಹ್ (I ಆ.ಸಕ.ಸೇ.) ಇಚ್ಛಿಸು

1 ಈಹಿತವ್ಯಂ 2 ಈಹನೀಯಂ 3 ಈಹ್ಯಂ 4 ಈಹಿತಃ 5 ಈಹಿತವಾನ್ 6 ಈಹಮಾನಃ 7 ಈಹಿಷ್ಯಮಾಣಃ 8 ಈಹಿತುಂ 9 ಈಹಿತ್ವಾ 10 ಸಮೀಹ್ಯ

27 ಉಜ್ಝ್ (VI. ಪ. ಸಕ. ಸೇ.) ತೊರೆ

1 ಉಜ್ಝಿತವ್ಯಃ 2 ಉಜ್ಝನೀಯಃ 3 ಉಜ್ಝ್ಯಃ (ಉದ್ಧ್ಯಃ) 4 ಉಜ್ಝಿತಃ 5 ಉಜ್ಝಿತವಾನ್ 6 ಉಜ್ಝನ್ -(ಸ್ತ್ರೀ) 7 ಉಜ್ಝಿಷ್ಯನ್ 8 ಉಜ್ಝಿತುಂ 9 ಉಜ್ಝಿತ್ವಾ 10 ಸಮುಜ್ಝ್ಯ

28 ಊಹ್ (I. ಆ. ಸಕ. ಸೇ.) ತರ್ಕಿಸು

1 ಊಹಿತವ್ಯಂ 2 ಊಹನೀಯಂ 3 ಊಹ್ಯಂ–ಸಮೂಹ್ಯಃ 4 ಊಹಿತಃ 5 ಊಹಿತವಾನ್ 6 ಊಹಮಾನಃ-ಸಮೂಹನ್ (-ಸ್ತ್ರೀ) 7 ಊಹಿಷ್ಯಮಾಣಃ-ಸಮೂಹಿಷ್ಯನ್ 8 ಊಹಿತುಂ 9 ಊಹಿತ್ವಾ 10 ಸಮುಹ್ಯ

29 ಏಧ್ (I. ಆ. ಅಕ. ಸೇ.) ವರ್ಧಿಸು

1 ಏಧಿತವ್ಯಂ 2 ಏಧನೀಯಂ 3 ಏಧ್ಯಂ 4 ಏಧಿತಂ 5 ಏಧಿತವಾನ್ 6 ಏಧಮಾನಃ 7 ಏಧಿಷ್ಯಮಾಣಃ 8 ಏಧಿತುಂ 9 ಏಧಿತ್ವಾ 10 ಸಮೇಧ್ಯ

30 ಕತ್ಥ್ (I. ಆ. ಅಕ. ಸೇ.) ಜಂಭಕೊಚ್ಚು

1 ಕತ್ಥಿತವ್ಯಂ 2 ಕತ್ಥನೀಯಂ 3 ಕತ್ಥ್ಯಂ 4 ಕತ್ಥಿತಂ 5 ಕತ್ಥಮಾನಃ 6 ಕತ್ಥಿಷ್ಯಮಾಣಃ 7 ಕತ್ಥಿತುಂ 8 ಕತ್ಥಿತ್ವಾ 9 ವಿಕತ್ಥ್ಯ

31 ಕಥ್ (X. ಉ. ಸಕ. ಸೇ.) ಹೇಳು

1 ಕಥಯಿತವ್ಯಂ 2 ಕಥನೀಯಂ 3 ಕಥ್ಯಂ 4 ಕಥಿತಃ 5 ಕಥಿತವಾನ್ 6 ಕಥಯನ್ (–ಸ್ತ್ರೀ) ಕಥಯಮಾನಃ 7 ಕಥಯಿಷ್ಯನ್-ಕಥಯಿಷ್ಯಮಾಣಃ 8 ಕಥಯಿತುಂ 9 ಕಥಯಿತ್ವಾ 10 ಪ್ರಕಥಯ್ಯ.

32 ಕಮ್ (I. ಆ. ಸಕ. ಸೇ.) ಪ್ರೀತಿಸು

1 ಕಾಮಯಿತವ್ಯಃ-ಕಮಿತವ್ಯಃ 2 ಕಾಮನೀಯಃ-ಕಮನೀಯಃ
3 ಕಾಮ್ಯಃ-ಕಮ್ಯಃ 4 ಕಾಮಿತಃ-ಕಾನ್ತಃ 5 ಕಾಮಿತವಾನ್-ಕಾಂತವಾನ್
6 ಕಾಮಯಮಾನಃ 7 ಕಾಮಯಿಷ್ಯಮಾಣಃ 8 ಕಾಮಯಿತುಂ-ಕಮಿತುಂ
9 ಕಾಮಯಿತ್ವಾ-ಕಮಿತ್ವಾ-ಕಾನ್ತ್ವಾ 10 ಪ್ರಕಾಮ್ಯ-ಪ್ರಕಮ್ಯ

ಕಂಡೂ ನೋ. 356

33 ಕಂಪ್ (I. ಆ ಅಕ. ಸೇ.) ನಡುಗು

1 ಕಂಪಿತವ್ಯಃ 2 ಕಂಪನೀಯಃ 3 ಕಂಪ್ಯಃ 4 ಕಂಪಿತಃ (ವಿಕಪಿತಃ)
5 ಕಂಪಿತವಾನ್ 6 ಕಂಪಮಾನಃ 7 ಕಂಪಿಷ್ಯಮಾಣಃ 8 ಕಂಪಿತುಂ
9 ಕಂಪಿತ್ವಾ 10 ಪ್ರಕಂಪ್ಯ

34 ಕಲ್ (X. ಉ. ಸಕ. ಸೇ.) ಎಣಿಸು

1 ಕಲಯಿತವ್ಯಂ 2 ಕಲನೀಯಂ 3 ಕಲ್ಯಂ 4 ಕಲಿತಃ
5 ಕಲಿತವಾನ್ 6 ಕಲಯನ್(-ನ್ತೀ)-ಕಲಯಮಾನಃ 7 ಕಲಯಿಷ್ಯನ್-
ಕಲಯಿಷ್ಯಮಾಣಃ 8 ಕಲಯಿತುಂ 9 ಕಲಯಿತ್ವಾ 10 ಸಂಕಲಯ್ಯ

35 ಕಾಂಕ್ಷ್ (I. ಪ. ಸಕ. ಸೇ.) ಇಚ್ಛಿಸು

1 ಕಾಂಕ್ಷಿತವ್ಯಂ 2 ಕಾಂಕ್ಷಣೀಯಂ 3 ಕಾಂಕ್ಷ್ಯಂ 4 ಕಾಂಕ್ಷಿತಃ
5 ಕಾಂಕ್ಷಿತವಾನ್ 6 ಕಾಂಕ್ಷನ್ (-ನ್ತೀ) 7 ಕಾಂಕ್ಷಿಷ್ಯನ್ 8 ಕಾಂಕ್ಷಿತುಂ
9 ಕಾಂಕ್ಷಿತ್ವಾ 10 ಆಕಾಂಕ್ಷ್ಯ

36 ಕಾಶ್ (I. ಆ. ಅಕ. ಸೇ.) ಹೊಳೆ

1 ಕಾಶಿತವ್ಯಃ 2. ಕಾಶನೀಯಃ 3 ಕಾಶ್ಯಃ 4 ಕಾಶಿತಃ
5 ಕಾಶಿತವಾನ್ 6 ಕಾಶಮಾನಃ 7 ಕಾಶಿಷ್ಯಮಾಣಃ 8 ಕಾಶಿತುಂ
9 ಕಾಶಿತ್ವಾ 10 ಪ್ರಕಾಶ್ಯ

37 ಕುಪ್ (IV. ಪ. ಅಕ. ಸೇ.) ರೇಗು

1 ಕೋಪಿತವ್ಯಂ 2 ಕೋಪನೀಯಂ 3 ಕೋಪ್ಯಂ 4 ಕುಪಿತಃ 5 ಕುಪಿತವಾನ್ 6 ಕುಪ್ಯನ್ (-ನ್ತೀ) 7 ಕೋಪಿಷ್ಯನ್ 8 ಕೋಪಿತುಂ 9 ಕುಪಿತ್ವಾ–ಕೋಪಿತ್ವಾ 10 ಪ್ರಕುಪ್ಯ

ಕೂಜ್ ನೋ. 357.

38 ಕೃ (VIII. ಉ. ಸಕ. ಅ.) ಮಾಡು

1 ಕರ್ತವ್ಯಂ 2 ಕರಣೀಯಂ 3 ಕಾರ್ಯಂ-ಕೃತ್ಯಂ 4 ಕೃತಃ 5 ಕೃತವಾನ್ 6 ಕುರ್ವನ್ (-ತೀ)–ಕುರ್ವಾಣಃ 7 ಕರಿಷ್ಯನ್–ಕರಿಷ್ಯಮಾಣಃ 8 ಕರ್ತುಂ 9 ಕೃತ್ವಾ 10 ಅಧಿಕೃತ್ಯ-ಉಪಸ್ಕೃತ್ಯ–ಪರಿಷ್ಕೃತ್ಯ.

39 ಕೃತ್ (VI. ಪ. ಸಕ. ಸೇ.) ಕತ್ತರಿಸು

1 ಕರ್ತಿತವ್ಯಂ 2 ಕರ್ತನೀಯಂ 3 ಕೃತ್ಯಂ 4 ಕೃತ್ತಃ 5 ಕೃತ್ತವಾನ್ 6 ಕೃಂತನ್ (-ನ್ತೀ) (-ತೀ) 7 ಕರ್ತಿಷ್ಯನ್-ಕರ್ತ್ಸ್ಯನ್ 8 ಕರ್ತಿತುಂ 9 ಕರ್ತಿತ್ವಾ 10 ವಿಕೃತ್ಯ

40 ಕೃಷ್ (I. ಪ. ಸಕ. ಅನಿ.) ಉಳು

1 ಕ್ರಷ್ಟವ್ಯಃ-ಕರ್ಷ್ಟವ್ಯಃ 2 ಕರ್ಷಣೀಯಃ 3 ಕೃಷ್ಯಃ 4 ಕೃಷ್ಟಃ 5 ಕೃಷ್ಟವಾನ್ 6 ಕರ್ಷನ್ (-ನ್ತೀ) 7 ಕ್ರಕ್ಷ್ಯನ್-ಕರ್ಕ್ಷ್ಯನ್ 8 ಕ್ರಷ್ಟುಂ-ಕರ್ಷ್ಟುಂ 9 ಕೃಷ್ಟ್ವಾ 10 ವಿಕೃಷ್ಯ.

41 ಕೄ (VI. ಪ. ಸಕ. ಸೇ.) ಹರಡು

1 ಕರಿತವ್ಯಂ-ಕರೀತವ್ಯಂ 2 ಕರಣೀಯಂ 3 ಕಾರ್ಯಂ = 4 ಕೀರ್ಣಃ 5 ಕೀರ್ಣವಾನ್ 6 ಕಿರನ್ (-ನ್ತೀ) (-ತೀ) 7 ಕರಿಷ್ಯನ್-ಕರೀಷ್ಯನ್ 8 ಕರಿತುಂ-ಕರೀತುಂ 9 ಕೀರ್ತ್ವಾ 10 ವಿಕೀರ್ಯ

42 ಕೃತ್ (X. ಉ. ಸಕ. ಸೇ.) ಸ್ತುತಿಸು

1 ಕೀರ್ತಯಿತವ್ಯಂ 2 ಕೀರ್ತನೀಯಂ 3 ಕೀರ್ತ್ಯಂ 4 ಕೀರ್ತಿತಂ
5 ಕೀರ್ತಿತವಾನ್ 6 ಕೀರ್ತಯನ್(-ನ್ತೀ)–ಕೀರ್ತಯಮಾನಃ
7 ಕೀರ್ತಯಿಷ್ಯನ್–ಕೀರ್ತಯಿಷ್ಯಮಾಣಃ 8 ಕೀರ್ತಯಿತುಂ
9 ಕೀರ್ತಯಿತ್ವಾ 10 ಸಂಕೀರ್ತ್ಯ.

43 ಕ್ಲೃಪ್ (I. ಆ. ಅಕ. ವೇ.) ಸಮರ್ಥನಾಗು

1 ಕಲ್ಪಿತವ್ಯಂ-ಕ್ಲೃಪ್ತವ್ಯಂ 2 ಕಲ್ಪನೀಯಂ 3 ಕಲ್ಪ್ಯಂ
4 ಕ್ಲೃಪ್ತಃ 5 ಕ್ಲೃಪ್ತವಾನ್ 6 ಕಲ್ಪಮಾನಃ 7 ಕಲ್ಪಿಷ್ಯಮಾಣಃ–
ಕಲ್ಪ್ಸ್ಯಮಾನಃ 8 ಕಲ್ಪಿತುಂ–ಕಲ್ಪ್ತುಂ 9 ಕಲ್ಪಿತ್ವಾ-ಕ್ಲೃಪ್ತ್ವಾ
10 ಪ್ರಕ್ಲೃಪ್ಯ–ಸಂಕಲ್ಪ್ಯ

44 ಕ್ರಂದ್ (I. ಪ. ಅಕ. ಸೇ.) ಅಳು

1 ಕ್ರಂದಿತವ್ಯಂ 2 ಕ್ರಂದನೀಯಂ 3 ಕ್ರಂದ್ಯಂ 4 ಕ್ರಂದಿತಃ
5 ಕ್ರಂದಿತವಾನ್ 6 ಕ್ರಂದನ್ (-ನ್ತೀ) 7 ಕ್ರಂದಿಷ್ಯನ್ 8 ಕ್ರಂದಿತುಂ
9 ಕ್ರಂದಿತ್ವಾ 10 ಆಕ್ರಂದ್ಯ

45 ಕ್ರಮ್ (I, IV. ಪ. ಸಕ. ಸೇ.) ನಡೆ

1 ಕ್ರಮಿತವ್ಯಂ 2 ಕ್ರಮಣೀಯಂ 3 ಕ್ರಮ್ಯಂ 4 ಕ್ರಾಂತಃ
5 ಕ್ರಾಂತವಾನ್ 6 ಕ್ರಾಮ್ಯನ್-ಕ್ರಾಮನ್ (ನ್ತೀ)-ಕ್ರಮಮಾಣಃ
7 ಕ್ರಮಿಷ್ಯನ್–ಕ್ರಮಿಷ್ಯಮಾಣಃ 8 ಕ್ರಮಿತುಂ 9 ಕ್ರಾಂತ್ವಾ–ಕ್ರಂತ್ವಾ–
ಕ್ರಮಿತ್ವಾ 10 ನಿಷ್ಕ್ರಮ್ಯ.

46 ಕ್ರೀ (IX ಉ. ಸಕ. ಅ.) ಕೊಳ್ಳು

1 ಕ್ರೇತವ್ಯಂ 2 ಕ್ರಯಣೀಯಂ 3 (ಕ್ರಯ್ಯಂ) (ಕ್ರೇಯಂ)
4 ಕ್ರೀತಃ 5 ಕ್ರೀತವಾನ್ 6 ಕ್ರೀಣನ್ (-ತೀ)–ಕ್ರೀಣಾನಃ 7 ಕ್ರೇಷ್ಯನ್–
ಕ್ರೇಷ್ಯಮಾಣಃ 8 ಕ್ರೇತುಂ 9 ಕ್ರೀತ್ವಾ 10 ವಿಕ್ರೀಯ

47 ಕ್ರೀಡ್ (I ಪ. ಅಕ. ಸೇ.) ಆಡು

1 ಕ್ರೀಡಿತವ್ಯಂ 2 ಕ್ರೀಡನೀಯಂ 3 ಕ್ರೀಡ್ಯಂ 4 ಕ್ರೀಡಿತಃ
5 ಕ್ರೀಡಿತವಾನ್ 6 ಕ್ರೀಡನ್ (-ನ್ತೀ) 7 ಕ್ರೀಡಿಷ್ಯನ್ 8 ಕ್ರೀಡಿತುಂ
9 ಕ್ರೀಡಿತ್ವಾ 10 ಸಂಕ್ರೀಡ್ಯ.

48 ಕ್ರುಧ್ (IV ಪ ಅಕ. ಅ.) ಸಿಟ್ಟಾಗು

1 ಕ್ರೋದ್ಧವ್ಯಂ 2 ಕ್ರೋಧನೀಯಂ 3 ಕ್ರೋಧ್ಯಂ 4 ಕ್ರುದ್ಧಃ
5 ಕ್ರುದ್ಧವಾನ್ 6 ಕ್ರುಧ್ಯನ್ (-ನ್ತೀ) 7 ಕ್ರೋತ್ಸ್ಯನ್ 8 ಕ್ರೋದ್ಧುಂ
9 ಕ್ರುದ್ಧ್ವಾ 10 ಸಂಕ್ರುದ್ಧ್ಯ

49 ಕ್ರುಶ್ (I ಪ.ಸಕ.ಅ.) ಗೋಳಿಡು

1 ಕ್ರೋಷ್ಟವ್ಯಃ 2 ಕ್ರೋಶನೀಯಃ 3 ಕ್ರೋಶ್ಯಃ 4 ಕ್ರುಷ್ಟಃ
5 ಕ್ರುಷ್ಟವಾನ್ 6 ಕ್ರೋಶನ್ (-ನ್ತೀ) 7 ಕ್ರೋಕ್ಷ್ಯನ್ 8 ಕ್ರೋಷ್ಟುಂ
9 ಕ್ರುಷ್ಟ್ವಾ 10 ಆಕ್ರುಶ್ಯ.

50 ಕ್ಲಮ್ (I, IV ಪ.ಅಕ.ಸೇ.) ದಣಿ

1 ಕ್ಲಮಿತವ್ಯಂ 2 ಕ್ಲಮನೀಯಂ 3 ಕ್ಲಮ್ಯಂ 4 ಕ್ಲಾಂತಃ
5 ಕ್ಲಾಂತವಾನ್ 6 ಕ್ಲಾಮ್ಯನ್—ಕ್ಲಾಮನ್ (-ನ್ತೀ) 7 ಕ್ಲಮಿಷ್ಯನ್
8 ಕ್ಲಮಿತುಂ 9 ಕ್ಲಮಿತ್ವಾ-ಕ್ಲಾಂತ್ವಾ 10 ಪ್ರಕ್ಲಮ್ಯ

51 ಕ್ಲಿದ್ (IV ಪ.ಅ.ವೇ.) ಒದ್ದೆಯಾಗು

1 ಕ್ಲೇದಿತವ್ಯಂ-ಕ್ಲೇತ್ತವ್ಯಂ 2 ಕ್ಲೇದನೀಯಂ 3 ಕ್ಲೇದ್ಯಂ
4 ಕ್ಲಿನ್ನಃ 5 ಕ್ಲಿನ್ನವಾನ್ 6 ಕ್ಲಿದ್ಯನ್ (-ನ್ತೀ) 7 ಕ್ಲೇದಿಷ್ಯನ್-ಕ್ಲೇತ್ಸ್ಯನ್
8 ಕ್ಲೇದಿತುಂ-ಕ್ಲೇತ್ತುಂ 9 ಕ್ಲಿದಿತ್ವಾ-ಕ್ಲೇದಿತ್ವಾ-ಕ್ಲಿತ್ತ್ವಾ 10 ವಿಕ್ಲಿದ್ಯ

52 ಕ್ಲಿಶ್[1] (IV ಆ.ಅಕ.ಸೇ.) ಹಿಂಸೆಪಡು

1 ಕ್ಲೇಶಿತವ್ಯಂ 2 ಕ್ಲೇಶನೀಯಂ 3 ಕ್ಲೇಶ್ಯಂ 4 ಕ್ಲಿಶಿತಃ-ಕ್ಲಿಷ್ಟಃ 5 ಕ್ಲಿಶಿತವಾನ್-ಕ್ಲಿಷ್ಟವಾನ್ 6 ಕ್ಲಿಶ್ಯಮಾನಃ 7 ಕ್ಲೇಶಿಷ್ಯಮಾಣಃ 8 ಕ್ಲೇಶಿತುಂ 9 ಕ್ಲಿಶಿತ್ವಾ-ಕ್ಲಿಷ್ಟ್ವಾ 10 ಪರಿಕ್ಲಿಶ್ಯ.

53 ಕ್ಲಿಶ್[2] (IX ಪ.ಸಕ.ವೇ.) ಹಿಂಸಿಸು 1, 2, 3, 4, 5, ನೋ. 52 6 ಕ್ಲಿಶ್ನನ್ (-ತೀ) 7 ಕ್ಲೇಶಿಷ್ಯನ್-ಕ್ಲೇಕ್ಷ್ಯನ್ 8 ಕ್ಲೇಶಿತುಂ-ಕ್ಲೇಷ್ಟುಂ 9, 10. ನೋ. 52

ಕ್ವಥ್ ನೋ. 258

54 ಕ್ಷಮ್[1] (I ಆ.ಸಕ.ವೇ.) ಸಹಿಸು, ಸಮರ್ಥನಾಗು

1 ಕ್ಷಮಿತವ್ಯಂ-ಕ್ಷಂತವ್ಯಂ 2 ಕ್ಷಮಣೀಯಂ 3 ಕ್ಷಮ್ಯಂ 4 ಕ್ಷಾಂತಃ 5 ಕ್ಷಾಂತವಾನ್ 6 ಕ್ಷಮಮಾಣಃ 7 ಕ್ಷಮಿಷ್ಯಮಾಣಃ 8 ಕ್ಷಮಿತುಂ-ಕ್ಷಂತುಂ 9 ಕ್ಷಮಿತ್ವಾ-ಕ್ಷಾಂತ್ವಾ 10 ಪ್ರಕ್ಷಮ್ಯ

55 ಕ್ಷಮ್[2] (I ಪ.ಸಕ.ವೇ.) ಸಹಿಸು

1, 2, 3, 4, 5 ನೋ. 54 6 ಕ್ಷಾಮ್ಯನ್(-ಸ್ತ್ರೀ)7 ಕ್ಷಮಿಷ್ಯನ್-ಕ್ಷಂಸ್ಯನ್ 8, 9, 10 ನೋ. 54

56 ಕ್ಷರ್ (I ಪ.ಅಕ.ಸೇ.) ಹರಿ, ಪ್ರವಿಸು

1 ಕ್ಷರಿತವ್ಯಂ 2 ಕ್ಷರಣೀಯಂ 3 ಕ್ಷಾರ್ಯಂ 4 ಕ್ಷರಿತಂ 5 ಕ್ಷರಿತವಾನ್ 6 ಕ್ಷರನ್ (-ನ್ತೀ) 7 ಕ್ಷರಿಷ್ಯನ್ 8 ಕ್ಷರಿತುಂ 9 ಕ್ಷರಿತ್ವಾ 10 ವಿಕ್ಷರ್ಯ

57 ಕ್ಷಲ್ (X ಉ.ಸಕ.ಸೇ.) ತೊಳೆ

1 ಕ್ಷಾಲಯಿತವ್ಯಂ 2 ಕ್ಷಾಲನೀಯಂ 3 ಕ್ಷಾಲ್ಯಂ 4 ಕ್ಷಾಲಿತಂ 5 ಕ್ಷಾಲಿತವಾನ್ 6 ಕ್ಷಾಲಯನ್ (-ನ್ತೀ)-ಕ್ಷಾಲಯಮಾನಃ 7 ಕ್ಷಾಲಯಿಷ್ಯನ್-ಕ್ಷಾಲಯಿಷ್ಯಮಾಣಃ 8 ಕ್ಷಾಲಯಿತುಂ 9 ಕ್ಷಾಲಯಿತ್ವಾ 10 ಪ್ರಕ್ಷಾಲ್ಯ

58 ಕ್ಷಿ (I ಪ.ಅಕ.ಅ.) ಸೊರಗು

1 ಕ್ಷೇತವ್ಯಂ 2 ಕ್ಷಯಣೀಯಂ 3 (ಕ್ಷೇಯಂ)-(ಕ್ಷಯ್ಯಂ) 4 (ಕ್ಷಿತಃ)-(ಕ್ಷೀಣಃ) 5 ಕ್ಷಿತವಾನ್-ಕ್ಷೀಣವಾನ್ 6 ಕ್ಷಯನ್ (-ನ್ತೀ) 7 ಕ್ಷೇಷ್ಯನ್ 8 ಕ್ಷೇತುಂ 9 ಕ್ಷಿತ್ವಾ 10 ಪ್ರಕ್ಷೀಯ

59 ಕ್ಷಿಪ್ (VI ಉ.ಸಕ.ಅ.) ಎಸೆ

1 ಕ್ಷೇಪ್ತವ್ಯಂ 2 ಕ್ಷೇಪಣೀಯಂ 3 ಕ್ಷೇಪ್ಯಂ 4 ಕ್ಷಿಪ್ತಃ 5 ಕ್ಷಿಪ್ತವಾನ್ 6 ಕ್ಷಿಪನ್ (-ನ್ತೀ) (-ತೀ)-ಕ್ಷಿಪಮಾಣಃ 7 ಕ್ಷೇಪ್ಸ್ಯನ್-ಕ್ಷೇಪ್ಸ್ಯಮಾನ 8 ಕ್ಷೇಪ್ತುಂ 9 ಕ್ಷಿಪ್ತ್ವಾ 10 ಪ್ರಕ್ಷಿಪ್ಯ

60 ಕ್ಷುಧ್ (IV. ಪ. ಅಕ. ಅ.) ಹಸಿವೆಯಾಗು

1 ಕ್ಷೋದ್ಧವ್ಯಂ 2 ಕ್ಷೋಧನೀಯಂ 3 ಕ್ಷೋಧ್ಯಂ 4 ಕ್ಷುಧಿತಃ 5 ಕ್ಷುಧಿತವಾನ್ 6 ಕ್ಷುಧ್ಯನ್ (-ನ್ತೀ) 7 ಕ್ಷೋತ್ಸ್ಯನ್ 8 ಕ್ಷೋದ್ಧುಂ 9 ಕ್ಷುಧಿತ್ವಾ-ಕ್ಷೋಧಿತ್ವಾ 10 ಸಂಕ್ಷುಧ್ಯ.

61 ಕ್ಷುಭ್[1] (I. ಆ. ಅಕ. ಸೇ.) ಕಂಪಿಸು

1 ಕ್ಷೋಭಿತವ್ಯಂ 2 ಕ್ಷೋಭಣೀಯಂ 3 ಕ್ಷೋಭ್ಯಂ 4 ಕ್ಷುಬ್ಧಃ ( ), ಕ್ಷುಭಿತಃ 5 ಕ್ಷುಬ್ಧವಾನ್–ಕ್ಷುಭಿತವಾನ್ 6 ಕ್ಷೋಭಮಾಣಃ 7 ಕ್ಷೋಭಿಷ್ಯಮಾಣಃ 8 ಕ್ಷೋಭಿತುಂ 9 ಕ್ಷುಭಿತ್ವಾ–ಕ್ಷೋಭಿತ್ವಾ 10 ಪ್ರಕ್ಷುಭ್ಯ

62 ಕ್ಷುಭ್[2] (IV. ಪ. ಸಕ. ಸೇ.) ಕಂಪಿಸು

1, 2, 3, 4, 5 ನೋ. 61. 6 ಕ್ಷುಭ್ಯನ್ (-ನ್ತೀ) 7 ಕ್ಷೋಭಯಿಷ್ಯನ್ 8, 9, 10 ನೋ. 61.

63 ಖನ್ (I. ಉ. ಸಕ. ಸೇ.) ಅಗೆ

1 ಖನಿತವ್ಯಃ 2 ಖನನೀಯಃ 3 ಖೇಯಂ 4 ಖಾತಃ 5 ಖಾತವಾನ್ 6 ಖನನ್ (-ನ್ತಿ)-ಖನಮಾನಃ 7 ಖನಿಷ್ಯನ್-ಖನಿಷ್ಯಮಾಣಃ 8 ಖನಿತುಂ 9 ಖನಿತ್ವಾ-ಖಾತ್ವಾ 10 ನಿಖಾಯ-ನಿಖನ್ಯ.

64 ಖಾದ್ (I ಪ.ಕಸ. ಸೇ.) ತಿನ್ನು

1 ಖಾದಿತವ್ಯಃ 2 ಖಾದನೀಯಃ 3 ಖಾದ್ಯಃ 4 ಖಾದಿತಃ 5 ಖಾದಿತವಾನ್ 6 ಖಾದನ್ (-ನ್ತೀ) 7 ಖಾದಿಷ್ಯನ್ 8 ಖಾದಿತುಂ 9 ಖಾದಿತ್ವಾ 10 ಸಂಖಾದ್ಯ

65 ಖಿದ್ (IV ಅ.ಅಕ.ಸೇ.) ದುಃಖಿಸು

1 ಖೇತ್ತವ್ಯಂ 2 ಖೇದನೀಯಂ 3 ಖೇದ್ಯಂ 4 ಖಿನ್ನಃ 5 ಖಿನ್ನವಾನ್ 6 ಖಿದ್ಯಮಾನಃ 7 ಖೇತ್ಸ್ಯಮಾನಃ 8 ಖೇತ್ತುಂ 9 ಖಿತ್ತ್ವಾ 10 ಪ್ರಖಿದ್ಯ

66 ಖ್ಯಾ (II ಪ.ಸಕ.ಸೇ.) ಹೇಳು

1 ಖ್ಯಾತವ್ಯಂ 2 ಖ್ಯಾನೀಯಂ 3 ಖ್ಯೇಯಂ 4 ಖ್ಯಾತಃ 5 ಖ್ಯಾತವಾನ್ 6 ಖ್ಯಾನ್ (-ನ್ತೀ) (ತೀ) 7 ಖ್ಯಾಸ್ಯನ್ 8 ಖ್ಯಾತುಂ 9 ಖ್ಯಾತ್ವಾ 10 ಆಖ್ಯಾಯ

67 ಗಣ್ (X ಉ.ಸಕ.ಸೇ.) ಎಣಿಸು

1 ಗಣಯಿತವ್ಯಂ 2 ಗಣನೀಯಂ 3 ಗಣ್ಯಂ 4 ಗಣಿತಃ 5 ಗಣಿತವಾನ್ 6 ಗಣಯನ್ (-ನ್ತೀ)-ಗಣಯಮಾನಃ 7 ಗಣಯಿಷ್ಯನ್-ಗಣಯಿಷ್ಯಮಾಣಃ 8 ಗಣಯಿತುಂ 9 ಗಣಯಿತ್ವಾ 10 ವಿಗಣಯ್ಯ

68 ಗದ್ (I ಪ. ಸಕ. ಸೇ.) ಮಾತನಾಡು

1 ಗದಿತವ್ಯ 2 ಗದನೀಯಃ 3 ಗದ್ಯಃ (ನಿಗಾದ್ಯಃ) 4 ಗದಿತಃ 5 ಗದಿತವಾನ್ 6 ಗದನ್ (-ಸ್ತ್ರೀ) 7 ಗದಿಷ್ಯನ್ 8 ಗದಿತುಂ 9 ಗದಿತ್ವಾ 10 ನಿಗದ್ಯ

69 ಗಮ್ (I ಪ. ಸ. ಅ.) ಹೋಗು

1 ಗಂತವ್ಯಂ 2 ಗಮನೀಯಂ 3 ಗಮ್ಯಂ 4 ಗತಃ-(ಗತಂ) 5 ಗತವಾನ್ 6 ಗಚ್ಛನ್ (-ಸ್ತ್ರೀ) 7 ಗಮಿಷ್ಯನ್ 8 ಗಂತುಂ 9 ಗತ್ವಾ 10 ಸಂಗತ್ಯ-ಸಂಗಮ್ಯ

70 ಗರ್ಹ್[1] (I ಆ. ಸಕ. ಸೇ.) ನಿಂದಿಸು

1 ಗರ್ಹಿತವ್ಯಂ 2 ಗರ್ಹಣೀಯಂ 3 ಗರ್ಹ್ಯಂ 4 ಗರ್ಹಿತಃ 5 ಗರ್ಹಿತವಾನ್ 6 ಗರ್ಹಮಾಣಃ 7 ಗರ್ಹಿಷ್ಯಮಾಣಃ 8 ಗರ್ಹಿತುಂ 9 ಗರ್ಹಿತ್ವಾ 10 ವಿಗರ್ಹ್ಯ

71 ಗರ್ಹ್[2] (X ಉ. ಅಕ. ಸೇ.) ನಿಂದಿಸು

1, 2, 3, 4, 5, ನೋ, 70 6 ಗರ್ಹನ್ (-ಸ್ತ್ರೀ) 7 ಗರ್ಹಿಷ್ಯನ್ 8, 9, 10 ನೋ. 70

72 ಗವೇಷ್ (X. ಉ. ಸಕ. ಸೇ.) ಹುಡುಕು

1 ಗವೇಷಯಿತವ್ಯಂ 2 ಗವೇಷಣೀಯಂ 3 ಗವೇಷ್ಯಂ 4 ಗವೇಷಿತಃ 5 ಗವೇಷಿತವಾನ್ 6 ಗವೇಷಯನ್ (-ಸ್ತ್ರೀ)-ಗವೇಷಯಮಾಣಃ 7 ಗವೇಷಯಿಷ್ಯನ್-ಗವೇಷಯಿಷ್ಯಮಾಣಃ 8 ಗವೇಷಯಿತುಂ 9 ಗವೇಷಯಿತ್ವಾ 10 ಅನುಗವೇಷಯ್ಯ

73 ಗಾಹ್ (I. ಆ. ಸಕ. ವೇ.) ಮುಳುಗು

1 ಗಾಹಿತವ್ಯಃ-ಗಾಢವ್ಯಃ 2 ಗಾಹನೀಯಃ 3 ಗಾಹ್ಯಃ 4 ಗಾಢಃ 5 ಗಾಢವಾನ್ 6 ಗಾಹಮಾನಃ 7 ಗಾಹಿಷ್ಯಮಾಣಃ–ಘಾಕ್ಷ್ಯಮಾಣಃ 8 ಗಾಹಿತುಂ–ಗಾಢುಂ 9 ಗಾಹಿತ್ವಾ-ಗಾಢ್ವಾ 10 ಅವಗಾಹ್ಯ

74 ಗುಪ್ (I. ಪ. ಸಕ. ವೇ.) ಸಂರಕ್ಷಿಸು, ಅಡಗಿಸು

1 ಗೋಪಾಯಿತವ್ಯಃ-ಗೋಪಿತವ್ಯಃ-ಗೋಪ್ತವ್ಯಃ 2 ಗೋಪಾಯನೀಯಃ-ಗೋಪನೀಯಃ 3 ಗೋಪಾಯ್ಯಃ-ಗೋಪ್ಯಃ-(ಕುಪ್ಯಂ) 4 ಗೋಪಾಯಿತಃ-ಗುಪ್ತಃ 5 ಗೋಪಾಯಿತವಾನ್-ಗುಪ್ತವಾನ್ 6 ಗೋಪಾಯನ್(ಸ್ತ್ರೀ) 7 ಗೋಪಾಯಿಷ್ಯನ್–ಗೋಪಿಷ್ಯನ್ 8 ಗೋಪಾಯಿತುಂ-ಗೋಪಿತುಂ–ಗೋಪ್ತುಂ 9 ಗೋಪಾಯಿತ್ವಾ-ಗೋಪಿತ್ವಾ-ಗುಪ್ತ್ವಾ 10 ಸಂಗೋಪಾಯ್ಯ–ಸಂಗುಪ್ಯ

ಮತ್ತು

1 ಜುಗುಪ್ಸಿತವ್ಯಂ 2 ಜುಗುಪ್ಸನೀಯಂ 3 ಜುಗುಪ್ಸ್ಯಂ 4 ಜುಗುಪ್ಸಿತಃ 5 ಜುಗುಪ್ಸಿತವಾನ್ 6 ಜುಗುಪ್ಸಮಾನಃ 7 ಜುಗುಪ್ಸಿಷ್ಯಮಾಣಃ 8 ಜುಗುಪ್ಸಿತುಂ 9 ಜುಗುಪ್ಸಿತ್ವಾ 10 ಸಂಜುಗುಪ್ಸ್ಯ

75 ಗುಹ್ (I. ಉ. ಸಕ. ಸೇ.) ಮುಚ್ಚಿಕೊಳ್ಳು

1 ಗೂಹಿತವ್ಯಂ-ಗೋಢವ್ಯಂ 2 ಗೂಹನೀಯಂ 3 ಗುಹ್ಯಂ-ಗೂಹ್ಯಂ 4 ಗೂಢಃ 5 ಗೂಢವಾನ್ 6 ಗೂಹನ್ (-ಸ್ತ್ರೀ)-ಗೂಹಮಾನಃ 7 ಗೂಹಿಷ್ಯನ್ - ಘೋಕ್ಷ್ಯನ್ - ಗೂಹಿಷ್ಯಮಾಣಃ - ಘೋಕ್ಷ್ಯಮಾಣಃ 8 ಗೂಹಿತುಂ-ಗೋಢುಂ 9 ಗೂಹಿತ್ವಾ-ಗೂಢ್ವಾ 10 ವಿಗುಹ್ಯ

76 ಗೄ (VI. ಪ. ಸಕ. ಸೇ.) ಹಿಂದುಹಾಕು

1 ಗರಿತವ್ಯಂ - ಗರೀತವ್ಯಂ –ಗಲಿತವ್ಯಂ ಗಲೀತವ್ಯಂ 2 ಗರಣೀಯಂ ಗಲನೀಯಂ3 ಗಾರ್ಯಂ-ಗಾಲ್ಯಂ 4 ಗೀರ್ಣಂ 5 ಗೀರ್ಣವಾನ್ 6 ಗಿರನ್– ಗಿಲನ್(-ಸ್ತ್ರೀ) (–ತೀ) 7 ಗರಿಷ್ಯನ್-ಗರೀಷ್ಯನ್-ಗಲಿಷ್ಯನ್-ಗಲೀಷ್ಯನ್ 8 ಗರಿತುಂ-ಗರೀತುಂ 9 ಗರಿತ್ವಾ–ಗರೀತ್ವಾ 10 ನಿಗೀರ್ಯ

77 ಗೈ (I. ಪ. ಅಕ. ಅ.) ಹಾಡು

1 ಗಾತವ್ಯಂ 2 ಗಾನೀಯಂ 3 ಗೇಯಂ-(ಗೇಯಃ) 4 ಗೀತಂ 5 ಗೀತವಾನ್ 6 ಗಾಯನ್(-ಸ್ತ್ರೀ) 7 ಗಾಸ್ಯನ್ 8 ಗಾತುಂ 9 ಗೀತ್ವಾ 10 ವಿಗಾಯ

78 ಗ್ರಂಥ್ (IX ಪ.ಸಕ.ಸೇ.) ಪೋಣಿಸು

1 ಗ್ರಂಥಿತವ್ಯಂ 2 ಗ್ರಂಥನೀಯಂ 3 ಗ್ರಂಥ್ಯಂ 4 ಗ್ರಥಿತಃ 5 ಗ್ರಥಿತವಾನ್ 6 ಗ್ರಥ್ನನ್ (–ತೀ) 7 ಗ್ರಥ್ನಿಷ್ಯನ್ 8 ಗ್ರಂಥಿತುಂ 9 ಗ್ರಂಥಿತ್ವಾ–ಗ್ರಥಿತ್ವಾ 10 ಸಂಗ್ರಥ್ಯ

79 ಗ್ರಸ್ (I ಆ.ಸಕ.ಸೇ.) ನುಂಗು

1 ಗ್ರಸಿತವ್ಯಂ 2 ಗ್ರಾಸನೀಯಂ 3 ಗ್ರಾಸ್ಯಂ 4 ಗ್ರಸ್ತಃ 5 ಗ್ರಸ್ತವಾನ್ 6 ಗ್ರಸಮಾನಃ 7 ಗ್ರಸಿಷ್ಯಮಾಣಃ 8 ಗ್ರಸಿತುಂ 9 ಗ್ರಸಿತ್ವಾ-ಗ್ರಸ್ತ್ವಾ 10 ಸಂಗ್ರಸ್ಯ

80 ಗ್ರಹ್ (IX ಉ.ಸಕ.ಸೇ.) ಹಿಡಿ

1 ಗ್ರಹೀತವ್ಯಂ 2 ಗ್ರಹಣೀಯಂ 3 ಗ್ರಾಹ್ಯಂ-ಗೃಹ್ಯಃ-(ಅಪಿಗೃಹ್ಯಂ) (ಪ್ರತಿಗೃಹ್ಯಂ) (ಅವಗೃಹ್ಯಂ) (ಪ್ರಗೃಹ್ಯಂ) (ಗೃಹ್ಯಕಾಃ)-(ಗೃಹ್ಯಾ) 4 ಗೃಹೀತಃ 4 ಗೃಹೀತವಾನ್ 6 ಗೃಹ್ಣನ್ (–ತೀ) ಗೃಹ್ಣಾನಃ 7 ಗ್ರಹೀಷ್ಯನ್-ಗ್ರಹೀಷ್ಯಮಾಣಃ 8 ಗ್ರಹೀತುಂ 9 ಗೃಹೀತ್ವಾ 10 ಪ್ರತಿಗೃಹ್ಯ

81 ಗ್ಲೈ (I ಪ.ಅಕ.ಅ.) ಸೊರಗು

1 ಗ್ಲಾತವ್ಯಂ 2 ಗ್ಲಾನೀಯಂ 3 ಗ್ಲೇಯಂ 4 ಗ್ಲಾನಃ 5 ಗ್ಲಾನ-
ವಾನ್ 6 ಗ್ಲಾಯನ್(-ನ್ತೀ) 7 ಗ್ಲಾಸ್ಯನ್ 8 ಗ್ಲಾತುಂ 9 ಗ್ಲಾತ್ವಾ
10 ಪ್ರಗ್ಲಾಯ

82 ಘಟ್ (I ಆ.ಅಕ.ಸೇ.) ಸಂಭವಿಸು

1 ಘಟಿತವ್ಯಂ 2 ಘಟನೀಯಂ 3 ಘಾಟ್ಯಂ 4 ಘಟಿತಃ
5 ಘಟಿತವಾನ್ 6 ಘಟಮಾನಃ 7 ಘಟಿಷ್ಯಮಾಣಃ 8 ಘಟಿತುಂ
9 ಘಟಿತ್ವಾ 10 ವಿಘಟ್ಯ

83 ಘುಷ್ (X ಉ.ಅಕ.ಸೇ.) ಘೋಷಿಸು

